# ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

**3ನೇ ಹಂತ, ಬನಶಂಕರಿ, ಬೆಂಗಳೂರು – 560085**

# ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗದ ಡಿ.ಇಎಲ್.ಇಡಿ ಕೋರ್ಸ್‌ನ ಬೋಧನಾ ವಿಷಯಗಳ ಪೂರಕ ಸಂಪನ್ಮೂಲ ಸಾಹಿತ್ಯ

# ಕನ್ನಡ



**ಶಿಕ್ಷಕರ ಅರ್ಹತಾ ಪರೀಕ್ಷೆ(TET)–ಪತ್ರಿಕೆ 1 ಪಠ್ಯವಸ್ತು ಆಧಾರಿತ**

**ಸಹಯೋಗ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಮೈಸೂರು.**

**ಮತ್ತು**

**ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ, ಮೈಸೂರು.**

ನಹೀ ಜ್ಞಾನೇನ ಸದೃಶಂ

# ಸೇವಾ ಪೂರ್ವ ಶಿಕ್ಷಕ ಶಿಕ್ಷಣ ವಿಭಾಗದ
# ಡಿ.ಇಎಲ್.ಇಡಿ ಕೋರ್ಸ್‌ನ ಬೋಧನಾ ವಿಷಯಗಳ
# ಪೂರಕ ಸಂಪನ್ಮೂಲ ಸಾಹಿತ್ಯ

# ಭಾಷೆ–01 ಕನ್ನಡ

## 2024


ಪ್ರಕಾಶಕರು ಮತ್ತು ಹಕ್ಕು ಸಾಮ್ಯತೆ

ನಿರ್ದೇಶಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.

3 ನೇ ಹಂತ. ಬನಶಂಕರಿ. ಬೆಂಗಳೂರು 560085

# ಆಶಯ ನುಡಿ



**'The destiny of a nation is being shaped in it's classrooms'**ಎಂಬ ಕೊಠಾರಿ ಆಯೋಗದ ಧ್ಯೇಯ ನುಡಿಗಳು ಪ್ರತಿಧ್ವನಿಸುವಂತೆ, ಇಂದು ಒಂದು ದೇಶದ ಅಭಿವೃದ್ಧಿಯ ಪ್ರತಿಫಲನ ಅಲ್ಲಿನ ಶಿಕ್ಷಣದ ಗುಣಮಟ್ಟವೇ ಆಗಿದೆ. ಜ್ಞಾನವಂತ, ಶ್ರೇಷ್ಠ, ಮಾನವೀಯ ಮೌಲ್ಯಗಳುಳ್ಳ ಶಿಕ್ಷಕರಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಜ್ಞಾನ, ಅರಿವು ಮತ್ತು ತಿಳಿವಳಿಕೆ ಎಂಬ ಮೂರು ಆಯಾಮಗಳನ್ನು ಆಧರಿಸಿ ಗುಣಮಟ್ಟ ಹೊಂದಿದ ಶಿಕ್ಷಕರನ್ನು ಹೊರತರುವುದು ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಎಲ್ಲಾ ಭಾಗೀದಾರರ ಜವಾಬ್ದಾರಿಯಾಗಿದೆ. ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಉಪಕ್ರಮಗಳಲ್ಲಿ ಒಂದಾದ ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣ ತರಬೇತಿ *(D.El.Ed – Diploma in Elementary Education )*ಯು 1 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಶಿಕ್ಷಕರನ್ನು ರೂಪಿಸುವ ಕೋರ್ಸ್ ಆಗಿದೆ.

ಪ್ರಸ್ತುತ ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳುವ ಅಗತ್ಯತೆಯನ್ನೂ ಯಾರೂ ಅಲ್ಲಗಳೆಯುವಂತಿಲ್ಲ. ಗುಣಮಟ್ಟದ ಶಿಕ್ಷಣ ನೀಡುವ ಶಿಕ್ಷಕರಿಗೆ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಅರ್ಥ ಮಾಡಿಕೊಂಡು, ಅವರಿಗೆ ಕಲಿಕಾ ಸ್ನೇಹಿ ವಾತಾವರಣ ಸೃಷ್ಟಿಸುವ ಒಳನೋಟ ಇರಬೇಕು. ಮಕ್ಕಳ ಕುತೂಹಲ, ಆಲೋಚನಾ ಶಕ್ತಿಯ ವೃದ್ಧಿಗೆ ಪೂರ್ವ ಸಿದ್ಧತೆ ಅತೀ ಅವಶ್ಯಕ. ಬೋಧನಾ ಶಾಸ್ತ್ರದ ಜ್ಞಾನದೊಂದಿಗೆ ಪಠ್ಯಕ್ರಮ ಆಧಾರಿತ ವಿಷಯಜ್ಞಾನದ ಅಗತ್ಯತೆಯನ್ನು ಪರಿಗಣಿಸಿ, ಇಲಾಖೆಯು ಶಿಕ್ಷಕರ ವೃತ್ತಿ ಆಯ್ಕೆ ಬಯಸುವವರಿಗೆ 'ಶಿಕ್ಷಕರ ಅರ್ಹತಾ ಪರೀಕ್ಷೆ' (TET) ಹಾಗೂ ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ (CET) ಗಳನ್ನು ನಡೆಸುವ ಮೂಲಕ ನೇಮಕಾತಿ ಹಂತದಲ್ಲೇ ಗುಣಮಟ್ಟವನ್ನು ಕಾಯ್ದುಕೊಳ್ಳುವ ಪೂರ್ವಸಿದ್ಧತಾ ಕ್ರಮಗಳನ್ನು ಕೈಗೊಂಡಿರುವುದು ಗಮನಾರ್ಹ ಅಂಶವಾಗಿದೆ.

ನಮ್ಮ ಇಲಾಖೆಯ ಸಂಪನ್ಮೂಲ ತಂಡದೊಂದಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ಕಾರ್ಯಕ್ಕಾಗಿ ಮೈಸೂರಿನ ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದಾಗ, ಅಲ್ಲಿನ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ತಂಡದವರು ಉಪನ್ಯಾಸಕರ ಮತ್ತು ಪ್ರಶಿಕ್ಷಣಾರ್ಥಿಗಳ ವೃತ್ತಿಪರ ಅಭಿವೃದ್ಧಿಗಾಗಿ ನಡೆಸಿರುವ ಕೆಲವು ನಾವಿನ್ಯಯುತ ಉಪಕ್ರಮಗಳಲ್ಲಿ ಡಯಟ್‌ರವರ ಸಹಕಾರದೊಂದಿಗೆ **ಶಿಕ್ಷಕರ ಅರ್ಹತಾ ಪರೀಕ್ಷೆಗೆ** ಹಾಜರಾಗುವ ಅಭ್ಯರ್ಥಿಗಳಿಗೆ ಸ್ವಯಂ ಪ್ರೇರಿತರಾಗಿ ಉಚಿತವಾಗಿ ಮುಖಾಮುಖಿ ಮತ್ತು ಆನ್‌ಲೈನ್ ತರಬೇತಿಗಳನ್ನು ನಡೆಸಿರುವುದನ್ನು ಗಮನಿಸಲಾಯಿತು.

D.El.Ed ಕೋರ್ಸ್‌ನ ಬೋಧನಾ ವಿಷಯಗಳಿಗೆ ಪೂರಕವಾದ ಸಂಪನ್ಮೂಲ ಸಾಹಿತ್ಯವನ್ನು ರಚಿಸಿ, **ರಾಜ್ಯದ ಎಲ್ಲಾ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾಭ್ಯಾಸ ತರಗತಿಗಳು ಮತ್ತು ನಿಕಟ ಪೂರ್ವ ಸೇವಾ ತರಬೇತಿಯಲ್ಲಿ ಮಾತ್ರವಲ್ಲದೆ ಶಿಕ್ಷಕ ವೃತ್ತಿ ಪ್ರವೇಶದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಆಲೋಚನೆ ಉಂಟಾಯಿತು.**

ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–1 ರ ಪಠ್ಯವಸ್ತುವನ್ನು ಆಧರಿಸಿ **ಭಾಷೆ: 01–ಕನ್ನಡ, ಭಾಷೆ: 02–ಇಂಗ್ಲೀಷ್, ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ, ಗಣಿತ ಮತ್ತು ಪರಿಸರ ಅಧ್ಯಯನ ಎಂಬ** 05 ವಿಷಯಗಳಿಗೆ ಪೂರಕ ಸಂಪನ್ಮೂಲ ಸಾಹಿತ್ಯಗಳನ್ನು ರಚಿಸಲಾಗಿದೆ. ಈ ಸಂಪನ್ಮೂಲ ಸಾಹಿತ್ಯಗಳು ಕೇವಲ TET ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಮಾತ್ರವಲ್ಲದೆ ವೃತ್ತಿ ನಿರತ ಶಿಕ್ಷಕರಿಗೂ ಹಾಗೂ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿನ ಎಲ್ಲಾ ಬೋಧಕರಿಗೂ ಹಾಗೂ ಪ್ರಶಿಕ್ಷಣಾರ್ಥಿಗಳಿಗೂ ಅತ್ಯಂತ ಉಪಯುಕ್ತ ಕೈಪಿಡಿ ಆಗಲಿದೆ.

**ಕನ್ನಡ ವಿಷಯಕ್ಕೆ** ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಯ ಪಠ್ಯ ವಸ್ತು ಹಾಗೂ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಪರಿಶೀಲಿಸಿ ಮೂರು ಭಾಗಗಳಲ್ಲಿ ಅಧ್ಯಯನ ಸಾಮಗ್ರಿಯನ್ನು ಸಿದ್ಧಪಡಿಸಲಾಗಿದ್ದು ಮೊದಲಿಗೆ ಮಾದರಿ ಗದ್ಯ ಪದ್ಯಗಳನ್ನು ಒಳಗೊಂಡ ಅಭ್ಯಾಸ ಪ್ರಶ್ನೆಕೋಠಿ ರಚಿಸಿದ್ದು, ನಂತರ ವ್ಯಾಕರಣ ಹಾಗೂ ಛಂದಸ್ಸಿನ ಪರಿಕಲ್ಪನೆಗಳು ಅಂತಿಮವಾಗಿ ಭಾಷಾ ಬೋಧನಾ ಶಾಸ್ತ್ರ, ತರಗತಿಯ ಪ್ರಕ್ರಿಯೆ, ರಚನಾವಾದ ಇತ್ಯಾದಿ ಬೋಧನಾ ಶಾಸ್ತ್ರ ಪರಿಕಲ್ಪನೆಗಳನ್ನು ಕುರಿತು ಅವಲೋಕಿಸಿ ಅಧ್ಯಯನ ಮಾರ್ಗದರ್ಶಿ ಪ್ರಶ್ನೋತ್ತರ ಕೋಠಿಯನ್ನು ಮಾದರಿಯಾಗಿ ಸಿದ್ಧಪಡಿಸಿದೆ.

ಈ ಪೂರಕ ಸಂಪನ್ಮೂಲ ಸಾಹಿತ್ಯ ರಚನೆಯ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸಿದ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ವಸಂತ ಮಹಲ್) ಮೈಸೂರು. ಇಲ್ಲಿನ ಪ್ರಾಂಶುಪಾಲರಾದ ಶ್ರೀ ನಾಗರಾಜಯ್ಯ ಸಿ ಆರ್ ಮತ್ತು ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ. ಮೈಸೂರು.ಇಲ್ಲಿನ ಪ್ರಾಂಶುಪಾಲರಾದ ಶ್ರೀಮತಿ ಗಾಯತ್ರಿ ಟಿ ಎನ್** ಮತ್ತು ಸಂಪನ್ಮೂಲ ರಚನಾ ತಂಡದ ಸದಸ್ಯರಿಗೆ ನನ್ನ ಅಭಿನಂದನೆಗಳು.

ಈ ಒಂದು ಪುಟ್ಟ ಪ್ರಯತ್ನದಿಂದಾಗಿ ಸದೃಢ ಸಮಾಜ ನಿರ್ಮಿಸುವಲ್ಲಿ ಪ್ರೇರಕ ಶಕ್ತಿಯಾದ ಸದೃಢ ಶಿಕ್ಷಕರು ರೂಪಗೊಳ್ಳುವಂತಾಗಲಿ ಎಂಬುದೇ ನನ್ನ ಆಶಯ.


**ಸುಮಂಗಲ ವಿ.**
**ನಿರ್ದೇಶಕರು**
**ಡಿ.ಎಸ್.ಇಆರ್.ಟಿ ಬೆಂಗಳೂರು.**

## ಮುನ್ನುಡಿ



ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿ. ಸಮಾಜ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರ ಪಾತ್ರ ಅಗಾಧವಾದದ್ದು. ಗುಣಮಟ್ಟವನ್ನು ಹೊಂದಿದ ಶ್ರೇಷ್ಠ ಶಿಕ್ಷಕರನ್ನು ರೂಪಿಸುವುದು ಅತ್ಯಂತ ಜವಾಬ್ದಾರಿಯುತ ಕಾರ್ಯ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಂದು ನಮಗೆ ಮಾಹಿತಿ ಲಭ್ಯತೆಯಲ್ಲಿ ಯಾವುದೇ ಕೊರತೆ ಇಲ್ಲ. ಲಭ್ಯವಿರುವ ಮಾಹಿತಿಯನ್ನು ಜ್ಞಾನವನ್ನಾಗಿ ಪರಿವರ್ತಿಸಿಕೊಳ್ಳುವುದೇ ನಮ್ಮೆದುರಿನ ಬೃಹತ್ ಸವಾಲು.

ಸೇವಾ ಪೂರ್ವ ಶಿಕ್ಷಕರ ಶಿಕ್ಷಣ ವಿಭಾಗದ ಉಪಕ್ರಮಗಳಲ್ಲಿ ಒಂದಾದ 1 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಶಿಕ್ಷಕರನ್ನು ರೂಪಿಸುವ ಕೋರ್ಸ್ ಆಗಿರುವ 'ಪ್ರಾಥಮಿಕ ಶಾಲಾ ಶಿಕ್ಷಕರ ಶಿಕ್ಷಣ ತರಬೇತಿ' (D.El.Ed – Diploma in Elementary Education ) ಯನ್ನು ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಅವರ ವೃತ್ತಿಪರ ಅಭಿವೃದ್ಧಿಗೆ ಒಂದು ಸಂಪನ್ಮೂಲ ಕೈಪಿಡಿ ದೊರೆಯುವಂತಾಗಬೇಕು ಎಂಬುದು ನನ್ನ ಬಹುದಿನದ ಕನಸಾಗಿತ್ತು. ಈ ನಿಟ್ಟಿನಲ್ಲಿ ಶ್ರೀಮತಿ ಸುಮಂಗಲ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ರವರ ಕಳಕಳಿಯ ಆಲೋಚನೆ ಮತ್ತು ಸಹಕಾರದಿಂದಾಗಿ ನನ್ನ ಕನಸು ಈಡೇರುವಂತಾಗಿದೆ. ಶಿಕ್ಷಕರ ಅರ್ಹತಾ ಪರೀಕ್ಷೆ ಪತ್ರಿಕೆ–01 ಒಳಗೊಂಡಿರುವ ಎಲ್ಲಾ ಐದು ವಿಷಯಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲ ಸಾಹಿತ್ಯ ಲಭ್ಯವಾಗುವಂತಾಗಿದೆ.

ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–1ರಲ್ಲಿನ ಒಂದು ಪ್ರಮುಖ ವಿಷಯ ಭಾಷೆ–01: ಕನ್ನಡ. ಶಿಕ್ಷಕರ ತರಬೇತಿ ಪಠ್ಯಕ್ರಮದಲ್ಲಿ ಅಳವಡಿಸಲಾಗಿರುವ 'ಕನ್ನಡ' ವಿಷಯದ ತಳಹದಿಯ ಮೇಲೆಯೇ ಈ ವಿಷಯಾಂಶವು ರೂಪುಗೊಂಡಿದೆ. ಈ ನಿಟ್ಟಿನಲ್ಲಿ ಪೂರ್ಣ ಪರಿಕಲ್ಪನಾತ್ಮಕ ದೃಷ್ಟಿಕೋನ ಮೂಡಿಸುವ ಉದ್ದೇಶದಿಂದ ಶಿಕ್ಷಕರ ಅರ್ಹತಾ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಮಾತ್ರವಲ್ಲದೆ ಸೇವಾ ನಿರತ ಶಿಕ್ಷಕರಿಗೆ ಹಾಗೂ ಶಿಕ್ಷಕ ಶಿಕ್ಷಣ ತರಬೇತಿ ವ್ಯಾಸಾಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಪರ್ಯಾಯ ಸಂಪನ್ಮೂಲವನ್ನಾಗಿ ಈ ಸಾಹಿತ್ಯವನ್ನು ರೂಪಿಸಲಾಗಿದೆ. ಡಿ.ಇಎಲ್.ಇಡಿ. ಪಠ್ಯವಸ್ತು ಹಾಗೂ ಶಿಕ್ಷಕರ ಅರ್ಹತಾ ಪರೀಕ್ಷೆಯ ಪಠ್ಯಕ್ರಮ ಎರಡು ಅಂಶಗಳನ್ನು ಆಧರಿಸಿ ಈ ಸಂಪನ್ಮೂಲವನ್ನು ಸಿದ್ಧಪಡಿಸಲಾಗಿದೆ.

ಈ ಸಂಪನ್ಮೂಲ ಸಾಹಿತ್ಯ ರೂಪಗೊಳ್ಳಲು ಪ್ರೇರಕ ಶಕ್ತಿಯಾದ ಶ್ರೀಮತಿ ಸುಮಂಗಲ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬೆಂಗಳೂರು ರವರಿಗೆ ಹೃತ್ಪೂರ್ವಕ ವಂದನೆಗಳು. ಒಂದು ಉತ್ಕೃಷ್ಟವಾದ ಸಾಹಿತ್ಯ ಹೊರಹೊಮ್ಮುವುದಕ್ಕೆ ಕಾರಣೀಭೂತರಾದ ಡಿಎಸ್.ಇಆರ್‌ಟಿಯ ಹಿರಿಯ ಸಹಾಯಕ ನಿರ್ದೇಶಕರುಗಳಾದ **ಶ್ರೀಯುತ ವಿಶ್ವನಾಥ್ ಕೆ ವಿ ಮತ್ತು ಶ್ರೀಮತಿ ಭಾನುಮತಿ ಟಿ ವಿ** ರವರಿಗೆ ಹಾಗೂ ಸಂಪನ್ಮೂಲ ಸಾಹಿತ್ಯ ನಿರ್ಮಾಣದಲ್ಲಿ ಪರಿಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಗುಣಮಟ್ಟ ಕಾಪಾಡುವಲ್ಲಿ ಶ್ರಮಿಸಿದ ನೋಡಲ್ ಅಧಿಕಾರಿಗಳಾದ **ಶ್ರೀಮತಿ ಟಿ ಎನ್ ಗಾಯತ್ರಿ** ಪ್ರಾಂಶುಪಾಲರು ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ ಮೈಸೂರು ರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸಂಪನ್ಮೂಲ ಸಾಹಿತ್ಯ ರೂಪುಗೊಳ್ಳಲು ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೂ ನಾನು ಆಭಾರಿ.

ಈ ಸಂಪನ್ಮೂಲ ಸಾಹಿತ್ಯವನ್ನು ಸಂಬಂಧಿಸಿದ ಎಲ್ಲರೂ ತಮ್ಮ ಅಗತ್ಯಕ್ಕೆ ತಕ್ಕಂತೆ ಯುಕ್ತವಾಗಿ ಬಳಸಿಕೊಂಡು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲಿ ಎಂಬುದೇ ನನ್ನ ಆಶಯ.

ನಾಗರಾಜಯ್ಯ. ಸಿ ಆರ್.
**ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು (ಅಭಿವೃದ್ಧಿ)**
**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮೈಸೂರು.**



## ಕೃತಜ್ಞತೆಗಳು

ಡಿ.ಇಎಲ್.ಇಡಿ ಕೋರ್ಸ್ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿಪರ ಪ್ರಗತಿಗಾಗಿ ಚಿಂತಿಸಿದ ಹಾಗೂ ಈ ಕೋರ್ಸ್‌ನ ಬೋಧನಾ ವಿಷಯಗಳಿಗೆ ಪೂರಕ ಸಂಪನ್ಮೂಲ ಸಾಹಿತ್ಯ ರಚನೆಯ ಗುರುತರವಾದ ಜವಾಬ್ದಾರಿಯನ್ನು ನಮ್ಮ ಸಂಸ್ಥೆಗೆ ವಹಿಸಿ, ಸಂಪನ್ಮೂಲ ಸಾಹಿತ್ಯ ಮೂರ್ತರೂಪವನ್ನು ಪಡೆಯಲು ಅವಕಾಶ ಕಲ್ಪಿಸಿದ **ಶ್ರೀಮತಿ ಸುಮಂಗಲ ವಿ** ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ. ಬೆಂಗಳೂರು. ಇವರಿಗೆ ನಾನು ಆಭಾರಿ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ನೀಡಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮೈಸೂರು ಇಲ್ಲಿನ ಪ್ರಾಂಶುಪಾಲರಾದ **ಶ್ರೀಯುತ ನಾಗರಾಜಯ್ಯ ಸಿ ಆರ್** ರವರು ಹಾಗೂ ಡಿಎಸ್.ಇ.ಆರ್.ಟಿ ಬೆಂಗಳೂರು. ಇಲ್ಲಿನ ಹಿರಿಯ ಸಹಾಯಕ ನಿರ್ದೇಶಕರುಗಳಾದ **ಶ್ರೀಯುತ ವಿಶ್ವನಾಥ್ ಕೆ ವಿ** ಹಾಗೂ **ಶ್ರೀಮತಿ ಭಾನುಮತಿ ಟಿ** ವಿ. ರವರಿಗೆ ಧನ್ಯವಾದಗಳು. ಈ ಸಂಪನ್ಮೂಲ ಸಾಹಿತ್ಯವನ್ನು ರಚಿಸಲು ಹಗಲಿರುಳು ಶ್ರಮಿಸಿದ ಎಲ್ಲಾ ಸಂಪನ್ಮೂಲ ತಂಡದವರಿಗೆ ಅಭಿನಂದನೆಗಳು.

ಈ ಸಂಪನ್ಮೂಲ ಸಾಹಿತ್ಯವು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗುತ್ತಿರುವ ಎಲ್ಲಾ ಅಭ್ಯರ್ಥಿಗಳಿಗೆ, ವೃತ್ತಿನಿರತ ಶಿಕ್ಷಕರಿಗೆ ಹಾಗೂ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ದಾರಿದೀಪವಾಗಲಿ ಎಂಬುದು ನನ್ನ ಆಶಯ.

**ಶ್ರೀಮತಿ ಗಾಯತ್ರಿ ಟಿ ಎನ್**
**ನೋಡಲ್ ಅಧಿಕಾರಿಗಳು ಹಾಗೂ ಪ್ರಾಂಶುಪಾಲರು**
**ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ**
**ಮೈಸೂರು**

## ಸಲಹೆ ಮತ್ತು ಸಹಕಾರ



**ಶ್ರೀ ಕೆ.ವಿ ವಿಶ್ವನಾಥ್**
**ಹಿರಿಯ ಸಹಾಯಕ ನಿರ್ದೇಶಕ**
**ಡಿ.ಎಸ್.ಇ.ಆರ್.ಟಿ ಬೆಂಗಳೂರು**



**ಶ್ರೀಮತಿ ಭಾನುಮತಿ ಟಿ ವಿ.**
**ಹಿರಿಯ ಸಹಾಯಕ ನಿರ್ದೇಶಕ**
**ಡಿ.ಎಸ್.ಇ.ಆರ್.ಟಿ ಬೆಂಗಳೂರು**



**ಶ್ರೀಯುತ ಡಿ ಆರ್ ಅಮಿತ್**
**ಹಿರಿಯಉಪನ್ಯಾಸಕರು**
**ಡಯಟ್ ಮೈಸೂರು**



**ಶ್ರೀಮತಿ ಉಮಾ ವಿ ಈ**
**ಉಪನ್ಯಾಸಕರು**
**ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ**
**ಮೈಸೂರು**



**ಶ್ರೀಮತಿ ಭಾಗ್ಯ**
**ಸಹ ನೋಡಲ್ ಅಧಿಕಾರಿ ಮತ್ತು ಉಪನ್ಯಾಸಕರು**
**ಡಯಟ್, ವಸಂತಮಹಲ್**
**ಮೈಸೂರು**

# ಕನ್ನಡ ಭಾಷಾ ಸಂಪನ್ಮೂಲ ರಚನಾ ತಂಡ




**ಶ್ರೀ ನಂದೀಶ್**
ಉಪನ್ಯಾಸಕರು
ಸರ್ಕಾರಿ ಮಹಾರಾಣಿ ಮಹಿಳಾ ಪ್ರಶಿಕ್ಷಣ ಸಂಸ್ಥೆ
ಮೈಸೂರು



**ಶ್ರೀ ತೋಪೆಗೌಡ**
ಉಪನ್ಯಾಸಕರು
ಶ್ರೀ ಹೆಚ್.ಎನ್. ಸೋಮಾನಿ ಡಿ.ಇಡಿ.ಕಾಲೇಜು
ಕುವೆಂಪುನಗರ ಮೈಸೂರು



**ಶ್ರೀ ಸಂಜಯ್‌ಕುಮಾರ್ ಹೆಚ್.ಕೆ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಕಂಪಲಾಪುರ, ಪಿರಿಯಾಪಟ್ಟಣ ತಾ.



**ಶ್ರೀಮತಿ ಶೈಲಜಾ ಹೆಚ್.ಪಿ.**
ಉಪನ್ಯಾಸಕರು
ಜೆ.ಎಸ್.ಎಸ್.ಮಹಿಳಾ ಡಿ.ಇಡಿ.ಕಾಲೇಜು
ಸರಸ್ವತಿಪುರಂ, ಮೈಸೂರು.

ತಾಂತ್ರಿಕ ಸಹಕಾರ



**ಶ್ರೀ ದಿನೇಶ್ ಎಂ**
ಪ್ರಾಜೆಕ್ಟ್ ಕೋಆರ್ಡಿನೇಟರ್
ಸ್ಫೂರ್ತಿ ಪರ್ಫಾರ್ಮೆನ್ಸ್ ಅಂಡ್ ಸಲ್ಯೂಷನ್ಸ್
ಮೈಸೂರು


ಮುಖಪುಟ ವಿನ್ಯಾಸ



**ಶ್ರೀ ಸತೀಶ ಬಿ ಸಿ**
ಬಾಲಕಿಯರ ಸರ್ಕಾರಿ ಪ್ರೌಢಶಾಲೆ
ಬನ್ನಿಮಂಟಪ ಬಡಾವಣೆ
ಕೆ.ಆರ್.ನಗರ. ಮೈಸೂರು ಜಿಲೆ

# ಪರಿವಿಡಿ


| ಭಾಷೆ – 1 ಕನ್ನಡ | | |
|---|---|---|
| ಕ್ರ.ಸಂ. | ವಿಷಯ/ ಘಟಕ/ ಪರಿಕಲ್ಪನೆ | ಪುಟ ಸಂಖ್ಯೆ |
| 1. | ಸಂಪನ್ಮೂಲ ಸಾಹಿತ್ಯ ಬಳಸುವ ಮುನ್ನ............ | 01 – 02 |
| 2. | ಮಾದರಿ ಗದ್ಯ – ಪದ್ಯಗಳು ...... ಪ್ರಶ್ನಾಕೋಶ | 02 – 10 |
| 3. | ವ್ಯಾಕರಣ ಸಂಬಂಧಿತ ವಿಷಯಗಳು | 10 – 25 |
| 4. | ಕನ್ನಡ ಸಾಹಿತ್ಯ ಚರಿತ್ರೆ ಅಧ್ಯಯನ ಸೂಚಿ | 26 – 26 |
| 5. | ಭಾಷಾ ಬೋಧನಾ ಶಾಸ್ತ್ರ ಅಧ್ಯಯನ ಸೂಚಿ ಹಾಗೂ ಪ್ರಶ್ನಾಕೋಶ | 26 – 48 |
| 6. | ಮಾದರಿ ಪ್ರಶ್ನೆ ಪತ್ರಿಕೆ–01 & 02 | 49 – 56 |
| 7. | ಮಾದರಿ ಪ್ರಶ್ನೆ ಪತ್ರಿಕೆ– ಉತ್ತರಗಳು | 57 – 57 |

# ಸಂಪನ್ಮೂಲ ಸಾಹಿತ್ಯ ಬಳಸುವ ಮುನ್ನ

ಆತ್ಮೀಯರೇ,

ಶಿಕ್ಷಕರಿಗೆ ವಿಷಯ ಜ್ಞಾನ ಮತ್ತು ಬೋಧನಾ ಶಾಸ್ತ್ರದ ಪರಿಪೂರ್ಣ ಅರಿವು ಇದ್ದಾಗ ಮಾತ್ರವೇ ಮಕ್ಕಳಲ್ಲಿ ನಿರೀಕ್ಷಿತ ಕಲಿಕಾ ಫಲಗಳನ್ನು ಕಾಣಲು ಸಾಧ್ಯ. ಆದ್ದರಿಂದ ನಮ್ಮ ಇಲಾಖೆಯಲ್ಲಿ ಡಿ.ಇಎಲ್.ಇಡಿ ಕೋರ್ಸ್‌ನ ಪ್ರಮಾಣ ಪತ್ರ ಪಡೆದವರಿಗೂ ಈ ವೃತ್ತಿ ಪ್ರವೇಶಕ್ಕೆ **ಶಿಕ್ಷಕರ ಅರ್ಹತಾ ಪರೀಕ್ಷೆ** ಮತ್ತು **ಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆ**ಗಳನ್ನು ನಡೆಸಿ, ವಿಷಯದ ಬಗ್ಗೆ ಆಳವಾದ ಜ್ಞಾನ ಹೊಂದಿರುವ ಶಿಕ್ಷಕರನ್ನು ಆಯ್ಕೆ ಮಾಡಲಾಗುತ್ತಿದೆ.

ಶಿಕ್ಷಕ ವೃತ್ತಿ ಪ್ರವೇಶದ ಮೊದಲ ಸ್ಪರ್ಧಾತ್ಮಕ ಪರೀಕ್ಷೆ– **ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)** ಎದುರಿಸುವ ಅಭ್ಯರ್ಥಿಗಳಿಗೆ ಈ ಸಂಪನ್ಮೂಲ ಸಾಹಿತ್ಯ ಸಹಕಾರಿಯಾಗುವಂತೆ ರಚಿಸಲಾಗಿದೆ. ಈ ಸಾಹಿತ್ಯವನ್ನು ಕೇವಲ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಗಳಿಸಲು ಮಾತ್ರ ಬಳಸದೆ, ಜ್ಞಾನಾರ್ಜನೆಯ ಕೈಪಿಡಿಯಾಗಿ ಬಳಸಿ. ಇದರಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯ ಪತ್ರಿಕೆ–01 ರ ಐದೂ ವಿಷಯಗಳ ( **ಭಾಷೆ–01: ಕನ್ನಡ, ಭಾಷೆ–02: ಇಂಗ್ಲೀಷ್, ಶಿಶು ವಿಕಸನ ಮತ್ತು ಬೋಧನಾ ಶಾಸ್ತ್ರ, ಗಣಿತ ಮತ್ತು ಪರಿಸರ ಅಧ್ಯಯನ**)ಪಠ್ಯವಸ್ತುವನ್ನು ಆಧರಿಸಿದ ಘಟಕಾಂಶಗಳು, ಪರಿಕಲ್ಪನೆಗಳಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಮತ್ತು ಆ ಪರಿಕಲ್ಪನೆಗೆ ಸಂಬಂಧಿಸಿದ ಕೆಲವು ಬಹು ಆಯ್ಕೆ ಪ್ರಶ್ನೋತ್ತರಗಳನ್ನೂ ಅಳವಡಿಸುವ ಪ್ರಯತ್ನ ಮಾಡಲಾಗಿದೆ.

**ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಟಿ.ಇ.ಟಿ. ಪರೀಕ್ಷೆಗೆ ಸಿದ್ಧಗೊಳ್ಳುವಾಗ ಗಮನಿಸಬೇಕಾದ ಅಂಶಗಳ ಬಗ್ಗೆ ಅವಲೋಕಿಸುವುದಾದರೆ,**

ಮೊದಲಿಗೆ ನಾವು ಪ್ರಶ್ನೆಪತ್ರಿಕೆಯ ಸ್ವರೂಪವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಪತ್ರಿಕೆ–1, ಒಂದರಿಂದ ಐದನೇ ತರಗತಿವರೆಗೆ ಬೋಧಿಸುವ ಶಿಕ್ಷಕರ ಸಾಮರ್ಥ್ಯವನ್ನು ಪರಿಶೀಲಿಸುವ ದೃಷ್ಟಿಕೋನದಲ್ಲಿ ರಚಿತವಾಗಿದ್ದರೆ, ಪತ್ರಿಕೆ–2 ಆರರಿಂದ ಎಂಟನೇ ತರಗತಿಗೆ ಬೋಧಿಸುವ ಶಿಕ್ಷಕರ ಸಾಮರ್ಥ್ಯವನ್ನು ಪರಿಶೀಲಿಸುವ ಹಿನ್ನೆಲೆಯಲ್ಲಿ ರಚನೆಯಾಗಿರುವುದು ಗಮನಾರ್ಹ ಅಂಶ. ಎರಡು ಪತ್ರಿಕೆಗಳು 30 ಅಂಕಗಳ 30 ಬಹುಆಯ್ಕೆಯ ಪ್ರಶ್ನೆಗಳನ್ನು ಹೊಂದಿರುತ್ತವೆ.

ಪ್ರಶ್ನೆಪತ್ರಿಕೆಯ ಒಳರಚನೆಯನ್ನು ಪರಿಶೀಲಿಸುವುದಾದರೆ 15 ಅಂಕಗಳಿಗೆ ಒಂದು ಗದ್ಯ ಮತ್ತು ಒಂದು ಪದ್ಯ ಭಾಗವನ್ನು ಕೊಟ್ಟು ಅದನ್ನು ಓದಿ ಅರ್ಥೈಸಿಕೊಂಡು ಉತ್ತರಿಸಬೇಕಾದ ಪ್ರಶ್ನೆಗಳ ರಚನೆಯನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಗದ್ಯದಲ್ಲಿ ಎಂಟು ಪ್ರಶ್ನೆಗಳು ಹಾಗೂ ಪದ್ಯ ಭಾಗದಿಂದ ಏಳು ಪ್ರಶ್ನೆಗಳನ್ನು ಕೇಳಿರುವ ಉದಾಹರಣೆಗಳಿದ್ದು. ಒಟ್ಟಾರೆ 15 ಅಂಕಗಳಿಗೆ ಈ ಗದ್ಯ/ಪದ್ಯ ಟಿಪ್ಪಣಿಗಳನ್ನು ಸ್ವತಂತ್ರವಾಗಿ ಓದಿ ಗ್ರಹಿಸಿ ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಪರಿಶೀಲಿಸುವ ಪ್ರಶ್ನೆಗಳು ರಚನೆಯಾಗಿರುವುದು ಗಮನಾರ್ಹ ಅಂಶ.

ಪ್ರಶ್ನೆಪತ್ರಿಕೆಯ ರಚನೆಯಲ್ಲಿ ಅರ್ಥೈಸಿಕೊಳ್ಳಬೇಕಾದ ಎರಡನೆಯ ಅಂಶವೆಂದರೆ ವ್ಯಾಕರಣಾಂಶ, ಭಾಷಾಂಶ, ಛಂದಸ್ಸು, ಗಾದೆಗಳು, ಒಗಟುಗಳು, ಪದರಚನೆ, ಕನ್ನಡ ಸಾಹಿತ್ಯದ ಇತಿಹಾಸ, ಭಾಷೆಯ ಇತಿಹಾಸ ಹಾಗೂ ಸಾಹಿತ್ಯ ಚರಿತ್ರೆಯ ಮುಖ್ಯ ಅಂಶಗಳನ್ನು ಒಳಗೊಂಡ ಪ್ರಶ್ನೆಗಳಿದ್ದು ಈ ಭಾಗಕ್ಕೆ ಇಷ್ಟೇ ಅಂಕಗಳಿಗೆ ಪ್ರಶ್ನೆ ರಚನೆಯಾಗಬೇಕೆಂಬ ನಿಯಮವಿಲ್ಲ. ಉಳಿದ 15 ಪ್ರಶ್ನೆಗಳಲ್ಲಿ ಈ ಯಾವುದೇ ಪ್ರಾತಿನಿಧಿಕ ವಿಭಾಗದಿಂದ ಕನಿಷ್ಠ ಮೂರರಿಂದ ಹತ್ತರವರೆಗೆ ಅದನ್ನು ಮೀರಿ ಪ್ರಶ್ನೆಗಳ ರಚನೆ ಮಾಡಬಹುದಾದ್ದರಿಂದ ಈ ಕುರಿತು ಅಧ್ಯಯನ ನಡೆಸಬೇಕಾದ ಅವಶ್ಯಕತೆ ಇರುತ್ತದೆ.

ಪ್ರಶ್ನೆಪತ್ರಿಕೆ ರಚನೆಯ ಮತ್ತೊಂದು ಮುಖ್ಯ ಅಂಶ ಕನ್ನಡ ಬೋಧನಾಶಾಸ್ತ್ರಕ್ಕೆ ಸಂಬಂಧಿಸಿದಾಗಿದೆ. ಈ ವಿಭಾಗದಲ್ಲಿ ಕನ್ನಡ ಭಾಷೆಯ ಅರ್ಥ, ಸ್ವರೂಪ, ಕಲಿಕೆ ಮತ್ತು ಗ್ರಹಿಕೆ ಭಾಷಾ ಬೋಧನಾ ತತ್ವಗಳು, ಭಾಷಾ ಕೌಶಲಗಳು, ಸಂವಹನ ಪ್ರಕ್ರಿಯೆ, ತರಗತಿ ಬೋಧನಾ ಸನ್ನಿವೇಶ, ಬೋಧನಾ ಸವಾಲುಗಳು, ಬೋಧನಾ ಸಂಪನ್ಮೂಲಗಳು, ಬಹುಭಾಷಿಕತೆ, ಪರಿಹಾರ ಬೋಧನೆ ಇತ್ಯಾದಿ ಅಂಶಗಳನ್ನು ಒಳಗೊಂಡು ಪ್ರಶ್ನೆಗಳು ರಚನೆಯಾಗಿದ್ದು ಈ ವಿಭಾಗದಿಂದಲೂ ಇಷ್ಟೇ ಅಂಕಗಳಿಗೆ ಇಷ್ಟೇ ಪ್ರಶ್ನೆಗಳು ರಚನೆಯಾಗಬೇಕು ಎಂಬ ನಿಯಮವಿಲ್ಲ. ಈ ಕ್ಷೇತ್ರ ಕುರಿತ ಪ್ರಶ್ನೆಗಳು ಐದರಿಂದ ಹತ್ತರವರೆಗೆ ರಚನೆಯಾಗಬಹುದು. ಒಟ್ಟಾರೆ ಗದ್ಯಪದ್ಯಭಾಗಕ್ಕೆ 15 ಅಂಕಗಳು ನಿಗದಿಯಾದರೆ ಉಳಿದ ಅಂಶಗಳಿಗೆ 15 ಅಂಕಗಳ ಪ್ರಶ್ನೆಗಳು ರಚನೆಯಾಗುತ್ತಿದ್ದು ಈ ಕುರಿತು ಅಭ್ಯಾಸ ಮತ್ತು ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

**ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕಾಗಿ ಮಾದರಿ ಗದ್ಯ ಮತು ಪದ್ಯ ಭಾಗಗಳನ್ನು ಕೊಡಲಾಗಿದೆ.**

**ಗದ್ಯಭಾಗ ಓದುವಾಗ ಗಮನಿಸಬೇಕಾದ ಅಂಶಗಳು:–**

1. ಗದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅದರ ಸಾರಾಂಶ, ಅರ್ಥಗ್ರಹಿಕೆಯ ಆಧಾರ ತತ್ವಗಳನ್ನೊಳಗೊಂಡ ಪ್ರಶ್ನೆಗಳನ್ನು ಕೇಳಬಹುದು.
2. ಸಾಮಾನ್ಯವಾಗಿ ನಾಲ್ಕರಿಂದ ಹತ್ತನೇ ತರಗತಿಯ ಕನ್ನಡ ಪುಸ್ತಕಗಳ ಯಾವುದಾದರೂ ತುಣುಕು ನೀಡಬಹುದು ಇಲ್ಲವೇ ಅಪರಿಚಿತ ಪಠ್ಯವನ್ನು ಆಯ್ಕೆ ಮಾಡಬಹುದು.
3. ಕೆಲವೊಮ್ಮೆ ಈ ಗದ್ಯಭಾಗದಲ್ಲಿ ಪದಗಳ ಅರ್ಥ, ಸಂಧಿಪದ, ಸಮಾಸಪದ, ತತ್ಸಮ–ತದ್ಭವಪದ, ಇತ್ಯಾದಿ ವ್ಯಾಕರಣಾಂಶ ಕುರಿತ ಪ್ರಶ್ನೆಗಳನ್ನು ಸಹ ಕೇಳಬಹುದು. ಈ ಕುರಿತು ಮಾದರಿ ಗದ್ಯಭಾಗಗಳ ಅಧ್ಯಯನವನ್ನು ಹಿಂದಿನ ಪ್ರಶ್ನೆ ಪತ್ರಿಕೆಗಳಲ್ಲಿ ಗಮನಿಸುವುದು ಸೂಕ್ತ.
4. ಗದ್ಯಭಾಗದ ಒಳಾರ್ಥವನ್ನು ಧ್ವನಿಸುವ ಪ್ರಶ್ನೆಗಳನ್ನು ಕೇಳಬಹುದು ಹಾಗಾಗಿ ಮೊದಲಿಗೆ ಒಮ್ಮೆ ಪೂರ್ಣವಾಗಿ ಗದ್ಯಭಾಗವನ್ನು ಓದಿ ಆನಂತರ ಉತ್ತರಿಸಲು ಪ್ರಾರಂಭಿಸುವುದು ಸೂಕ್ತ.
5. ಸಂಬಂಧ ಸ್ಥಾಪಿತ ಉತ್ತರ/ ಪದಗಳು, ಗದ್ಯ ರಚನೆಕಾರರ ಆಶಯ ಆಧಾರಿತ ಹೇಳಿಕೆಗಳು ಮುಂತಾದ ಪ್ರಶ್ನೆಗಳನ್ನು ಕೇಳಬಹುದು.
6. ಭಾಷಾ ವ್ಯತ್ಯಾಸಗಳು, ಧ್ವನಿ ಮತ್ತು ಅರ್ಥ ವ್ಯತ್ಯಾಸ ಕುರಿತು ಪ್ರಶ್ನೆಗಳನ್ನು ಕೇಳಬಹುದು.

ಹಾಗಾಗಿ ಗದ್ಯಭಾಗವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಅದರ ಸಾರಾಂಶವನ್ನು ಗ್ರಹಿಸಿ ಅದರ ಆಧಾರದ ಮೇಲೆ ಉತ್ತರಿಸಬೇಕಾಗುತ್ತದೆ. ಈ ಕುರಿತು ಹಳೆಯ ಪ್ರಶ್ನೆ ಪತ್ರಿಕೆಯ ಮಾದರಿ ಗದ್ಯಭಾಗವನ್ನು ನೋಡಿ ಅಧ್ಯಯನ ಮಾಡುವುದು ಸೂಕ್ತ.

**ಪದ್ಯ ಭಾಗವನ್ನು ಓದುವಾಗ ಗಮನಿಸಬೇಕಾದ ಅಂಶಗಳು :–**

1. ಗದ್ಯಭಾಗದಲ್ಲಿ ಗಮನಿಸಿದಂತೆ ಪದ್ಯಭಾಗದಲ್ಲಿಯೂ ಸಹ ಅದರ ಸಾರಾಂಶ, ಭಾವಾರ್ಥ, ತಾತ್ಪರ್ಯ, ಸಂದೇಶ, ಕವಿಯ ಆಶಯಗಳನ್ನು ಅರ್ಥಗ್ರಹಿಸಿ ಉತ್ತರಿಸಬೇಕಾದ ಅವಶ್ಯಕತೆ ಇದೆ.
2. ಪದ್ಯಭಾಗದಲ್ಲಿ ವಾಚ್ಯಾರ್ಥದ ಜೊತೆಗೆ ಗೂಡಾರ್ಥ, ವ್ಯಂಗ್ಯಾರ್ಥಗಳ ಕುರಿತು ಪ್ರಶ್ನೆಗಳು ಬರುವುದರಿಂದ ಪದ್ಯಭಾಗವನ್ನು ಕವಿಯ ಆಶಯದ ಹಿನ್ನೆಲೆಯಲ್ಲಿ ಓದಿ ಅರ್ಥೈಸಿಕೊಂಡು ಉತ್ತರಿಸಬೇಕಾಗುತ್ತದೆ.
3. ಪ್ರಸ್ತುತ ಪದ್ಯದಲ್ಲಿ ಕವಿಯ ಆಶಯವೇನು? ಕವಿಯು ಯಾವ ಸಂದೇಶವನ್ನು ಸಾರಿದ್ದಾರೆ? ಕವಿಯ ಈ ಮಾತುಗಳ ಒಳಾರ್ಥವೇನು? ಎಂಬ ಪ್ರಶ್ನೆಗಳನ್ನು ಸಹ ಕೇಳಬಹುದು.
4. ಒಂದು ಪದ್ಯ ಭಾಗವನ್ನು ಸ್ವತಂತ್ರವಾಗಿ ಓದಿ ಹೇಗೆ ಅರ್ಥೈಸಿಕೊಳ್ಳಬಲ್ಲಿರಿ? ಎಂಬ ನಿಮ್ಮ ಸಾಮರ್ಥ್ಯವನ್ನು ಪರಿಶೀಲಿಸುವ ಪ್ರಶ್ನೆಗಳನ್ನು ರಚಿಸಲಾಗಿರುತ್ತದೆ.
5. ಪದ್ಯ ಭಾಗದಲ್ಲಿಯೂ ಪದಗಳ ಅರ್ಥ, ಪ್ರಾಸ, ಅಲಂಕಾರ, ಮೊದಲಾದ ಛಂದಸ್ಸು ಮತ್ತು ವ್ಯಾಕರಣಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಬಹುದಾದ್ದರಿಂದ ಸೂಕ್ಷ್ಮವಾಗಿ ಪದ್ಯ ಭಾಗವನ್ನು ಓದಬೇಕಾಗುತ್ತದೆ.

## ಮಾದರಿ ಗದ್ಯ – 1

**ಸೂಚನೆ: (ಪ್ರಶ್ನೆ ಸಂಖ್ಯೆ 1 ರಿಂದ 8) ಕೆಳಗಿನ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಪ್ರಪಂಚದಲ್ಲಿ ಒಂದು ಮಿಲಿಯನ್ ಅಂದರೆ 10 ಲಕ್ಷಕ್ಕೂ ಹೆಚ್ಚು ಜನ ಮಾತನಾಡುವ ಭಾಷೆಗಳ ಸಂಖ್ಯೆ 2000ಕ್ಕೂ ಹೆಚ್ಚಾಗಿದೆ.ಅವುಗಳಲ್ಲಿ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಜನರ ಸಂಖ್ಯೆ ಸುಮಾರು 13 ಕೋಟಿ. ಆ ಸಂಖ್ಯೆಯಲ್ಲಿ ಕನ್ನಡವನ್ನು ಮಾತನಾಡುವವರ ಸಂಖ್ಯೆ ಸುಮಾರು ನಾಲ್ಕು ಕೋಟಿ.

ಭಾರತದ ಉತ್ತರ ಭಾಗದಲ್ಲಿ ಇಂಡೋ ಯುರೋಪಿಯನ್ ಗುಂಪಿಗೆ ಸೇರಿದ ಭಾಷೆಗಳ ಪ್ರಚಾರ ಅಧಿಕವಾಗಿದೆ. ದಕ್ಷಿಣ ಭಾರತದಲ್ಲಿ ದ್ರಾವಿಡ ಭಾಷೆಗಳ ಪ್ರಚಾರ ಹೆಚ್ಚು. ದ್ರಾವಿಡ ಭಾಷೆಯನ್ನು ಅಧಿಕ ಮಾತನಾಡುವವರಲ್ಲಿ ತೆಲುಗರ ಸಂಖ್ಯೆ ಹೆಚ್ಚು. ಆ ಬಳಿಕ ತಮಿಳು ಆಮೇಲೆ ಕನ್ನಡಿಗರು ಬರುತ್ತಾರೆ. ನಾಲ್ಕನೆಯ ಸ್ಥಾನದಲ್ಲಿ ಮಲೆಯಾಳಿಗಳಿದ್ದಾರೆ. ತುಳು ಮಾತನಾಡುವವರು ಸುಮಾರು 30 ಲಕ್ಷ ಇರಬಹುದು. ಹಿಂದಿ, ಬಂಗಾಳಿ, ಉರ್ದು, ಬಿಹಾರಿ, ಮರಾಠಿ, ಪಂಜಾಬಿ, ಗುಜರಾತಿ, ರಾಜಸ್ತಾನಿ, ಒರಿಯ, ನೇಪಾಳಿ ಮತ್ತು ಕಾಶ್ಮೀರಿ ಭಾಷೆಗಳು ಉತ್ತರ ಭಾರತದಲ್ಲಿ ಹರಡಿಕೊಂಡಿವೆ. ದಕ್ಷಿಣದಲ್ಲಿರುವ ದ್ರಾವಿಡ ಭಾಷೆಗಳಲ್ಲದೆ ಇತರೆ ಕೆಲವು ದ್ರಾವಿಡ ವರ್ಗದ ಭಾಷೆಗಳು ಉತ್ತರದಲ್ಲಿ ಹುದುಗಿಕೊಂಡಿವೆ.

ಕನ್ನಡ ತುಂಬಾ ಪ್ರಾಚೀನವಾದ ಭಾಷೆ ಕ್ರಿ.ಪೂ. ಒಂದನೆಯ ಶತಮಾನದಲ್ಲಿಯೇ ಕನ್ನಡದ ಅಸ್ತಿತ್ವವಿತ್ತು ಎಂದು ಒಂದು ಪ್ರಾಚೀನ ಗ್ರೀಕ್ ಪ್ರಹಸನದ ಆಧಾರದ ಮೇಲೆ ವಾದಿಸುವವರಿದ್ದಾರೆ. ಆದರೆ ಖಚಿತವಾದ ಶಾಸನದ ಆಧಾರ ದೊರಕಬೇಕಾದರೆ ನಾವು ಕ್ರಿ.ಶ. 450ರ ಹತ್ತಿರ ಬರಬೇಕು. ಹಲ್ಮಿಡಿಯ ಶಾಸನ ಕ್ರಿ. ಶ.450ಕ್ಕೆ ಸೇರಿರುವುದರಿಂದ ಅದಕ್ಕಿಂತ ಒಂದೆರಡು ಶತಮಾನಗಳಷ್ಟು ಹಿಂದಿನಿಂದ ಕನ್ನಡ ಆಡು ಮಾತಾಗಿ ಇದ್ದಿರಬೇಕೆಂದು ಊಹಿಸಬಹುದು. ಈ ಭಾಷೆಯ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸುತ್ತಾರೆ.

1. ಪೂರ್ವದ ಹಳಗನ್ನಡ 2. ಹಳಗನ್ನಡ 3. ನಡುಗನ್ನಡ 4. ಹೊಸಗನ್ನಡ. ಹೊಸ/ಪೊಸಗನ್ನಡ ಶಬ್ದವು ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ. 1112ರಲ್ಲಿಯೇ ದೊರಕುತ್ತದೆ. ಆದರೆ ಭಾಷೆ ನಿಜವಾಗಿ ಹೊಸತನವನ್ನು ಪಡೆಯುವುದು 18ನೇ ಶತಮಾನದ ವೇಳೆಗೆ. ಹಿಂದಿನ ಶತಮಾನದ ಕೊನೆಯ ಕನ್ನಡವನ್ನು ಇಂದು ನಾವು ಆಡುವ ಬರೆಯುವ ಕನ್ನಡವನ್ನು ಹೋಲಿಸಿದರೆ ಈಗಿನ ಕನ್ನಡವನ್ನು ಆಧುನಿಕ ಕನ್ನಡವೆಂದು ಬೇರೆಯ ಹೆಸರಿನಿಂದಲೇ ಕರೆಯಬೇಕು ಎಂದು ಅಭಿಪ್ರಾಯ ಬರುವಷ್ಟು ವ್ಯತ್ಯಾಸ ಕಂಡು ಬರುತ್ತದೆ. (ಆಯ್ಕೆ:– ಇಗೋ ಕನ್ನಡ)

1. ಸುಮಾರು ನಾಲ್ಕು ಕೋಟಿ ಜನರು ಮಾತನಾಡುವ ಭಾಷೆ

ಎ)ಹಿಂದಿ ಭಾಷೆ ಬಿ) ಬಂಗಾಳಿ ಭಾಷೆ

ಸಿ) ತಮಿಳು ಭಾಷೆ **ಡಿ) ಕನ್ನಡ ಭಾಷೆ**

2. ದ್ರಾವಿಡ ಭಾಷೆಯನ್ನು ಮಾತನಾಡುವವರನ್ನು ಇಳಿಕೆ ಕ್ರಮದಲ್ಲಿ ಬರೆದಾಗ

ಎ. ತಮಿಳರು ಬಿ.ಕನ್ನಡಿಗರು ಸಿ. ಮಲೆಯಾಳಿಗರು ಡಿ. ತೆಲುಗರು

ಎ) ಎ, ಬಿ, ಸಿ, ಡಿ ಬಿ)ಡಿ, ಸಿ, ಎ, ಬಿ

**ಸಿ)ಡಿ, ಎ, ಬಿ, ಸಿ** **ಡಿ)** ಸಿ, ಬಿ, ಎ, ಡಿ

3. ಉತ್ತರ ಭಾರತದಲ್ಲಿ ಪ್ರಚಾರವಿರುವ ಭಾಷೆಗಳು

ಎ) ದ್ರಾವಿಡ ಭಾಷೆಗಳು **ಬಿ)ಇಂಡೋ ಯುರೋಪಿಯನ್ ಭಾಷೆಗಳು**

ಸಿ)ಇಂಡೋ ಗ್ರೀಕ್ ಭಾಷೆಗಳು ಡಿ)ಇತರ ಭಾಷೆಗಳು

4. ಈ ಗದ್ಯಭಾಗವು ಕೆಳಗಿನ ಅಂಶವನ್ನು ಪ್ರಧಾನವಾಗಿ ಪ್ರತಿನಿಧಿಸುತ್ತದೆ.

ಎ) ಕರ್ನಾಟಕದ ಇತಿಹಾಸದ ಬಗ್ಗೆ ಬಿ)ಭಾರತದ ಇತಿಹಾಸದ ಬಗ್ಗೆ

**ಸಿ) ಕನ್ನಡ ಭಾಷೆಯ ಬೆಳವಣಿಗೆಯ ಬಗ್ಗೆ**ಜ. ಡಿ)ವಿಶ್ವದಲ್ಲಿ ವಿವಿಧ ಭಾಷೆಗಳನ್ನು ಮಾತನಾಡುವವರ ಬಗ್ಗೆ

5. 18ನೇ ಶತಮಾನದಲ್ಲಿ ಆದ ಮಹತ್ತರವಾದ ಬದಲಾವಣೆ

**ಎ) ಕನ್ನಡ ಭಾಷೆ ನಿಜವಾಗಿ ಹೊಸತನ ಪಡೆದುದು**

ಬಿ)ದ್ರಾವಿಡ ಭಾಷೆಗಳು ನಿಜವಾಗಿ ವಿಭಾಗವಾದುದು

ಸಿ)ದ್ರಾವಿಡ ಭಾಷೆಗಳು ಇಂಡೋ ಯುರೋಪಿಯನ್ ವರ್ಗಕ್ಕೆ ಸೇರಿದುದು

ಡಿ) ತಮಿಳು ಭಾಷೆ ನಿಜವಾಗಿ ಹೊಸತನ ಪಡೆದುದು

6. ದ್ರಾವಿಡ ಭಾಷೆಗಳಲ್ಲಿ ನಾಲ್ಕನೆಯ ಸ್ಥಾನದಲ್ಲಿ ಮಾತನಾಡುವ ಭಾಷೆ

ಎ)ತೆಲುಗು ಬಿ)ತಮಿಳು

**ಸಿ)ಮಲೆಯಾಳಿ** ಡಿ)ಕನ್ನಡ

7. 'ಹಳಗನ್ನಡ' ಪದದಲ್ಲಿರುವ ಸಂಧಿ

ಎ) ಲೋಪಸಂಧಿ ಬಿ)ಆಗಮಸಂಧಿ
**ಸಿ)ಆದೇಶಸಂಧಿ** ಡಿ) ಸ್ವರಸಂಧಿ

8. 'ನಾಲ್ಕನೆಯ' ಪದದಲ್ಲಿರುವ ನಾಮವಾಚಕ

ಎ)ಸಂಖ್ಯಾವಾಚಕ **ಬಿ)ಸಂಖ್ಯೇಯವಾಚಕ**
ಸಿ)ಗುಣವಾಚಕ ಡಿ)ಪರಿಮಾಣವಾಚಕ

## ಮಾದರಿ ಪದ್ಯ – 1

**ಸೂಚನೆ: (ಪ್ರ.ಸಂ. 9 ರಿಂದ 15) ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಚಳಿಗಾಲ ಬಂದಾಗ 'ಎಷ್ಟು ಚಳಿ'? ಎಂದರು
ಬಂತಲ್ಲ ಬೇಸಿಗೆ, ಕೆಟ್ಟ ಬಿಸಿಲೆಂದರು,
ಮಳೆ ಬಿತ್ತೋ 'ಬಿಡದಲ್ಲ ಶನಿ!' ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ಚಿಗುರ ಚಿನ್ನದ ನಡುವೆ ಹೂವ ಬಯಸುವರು
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು
ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ನಿಂತವರ ಕೇಳುವರು; ನೀನೇಕೆ ನಿಂತೆ?
ಮಲಗಿದರೆ ಗೊಣಗುವರು; ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ಓದಿದರೆ ಹೇಳುವರು; ಮತ್ತೊಮ್ಮೆ ಬರೆಯೋ!
ಬರೆದಿಡಲು ಬೆದಕುವರು; ಬರೆವಣಿಗೆ ಸರಿಯೇ?
ಇವರ ಬಯಕೆಗಳೇನೋ! ಇವರದೇ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ಕೆ.ಎಸ್.ನರಸಿಂಹಸ್ವಾಮಿ
(ಶಿಲಾಲತೆ ಕವನ ಸಂಕಲನ)

9. 'ಬಿಡದಲ್ಲ ಶನಿ' ಎಂಬುದಾಗಿ ಜನರು ಟೀಕೆ ಮಾಡಿದ್ದು

ಎ) ಚಳಿಗಾಲ ಬಂದಾಗ ಬಿ)ಬೇಸಿಗೆ ಕಾಲ ಬಂದಾಗ
**ಸಿ)ಮಳೆಗಾಲ ಬಂದಾಗ** ಡಿ)ಮಲಗಿದ್ದಾಗ

10. 'ಚಿಂತೆ ನಿನಗಿಲ್ಲ' ಎಂದು ಹೇಳಿರುವುದು

ಎ) ನಿಂತಿರುವುದರಿಂದ ಬಿ)ಓಡುವುದರಿಂದ
**ಸಿ)ಮಲಗಿರುವುದರಿಂದ** ಡಿ)ನಡೆಯುವುದರಿಂದ

11. ಪ್ರಸ್ತುತ ಕವನದಲ್ಲಿ ಓದಿದವರನ್ನು ಕುರಿತಂತೆ ಜನರು ಟೀಕಿಸುವುದು.

ಎ) ವೇಗವಾಗಿ ಓದಬೇಕೆಂದು **ಬಿ)ಬರೆಯಬೇಕೆಂದು**
ಸಿ)ಆಲಿಸಬೇಕೆಂದು ಡಿ)ಕೇಳಬೇಕೆಂದು

12. ಹೂಗಳ ಕಾಲದಲ್ಲಿ ಜನರು ಹೊಗಳುವುದು

ಎ) ಚಿಗುರನ್ನು ಬಿ)**ಹಣ್ಣನ್ನು**
ಸಿ)ಹೂವನ್ನು ಡಿ)ಎಲೆಯನ್ನು

13. ಈ ಕವನದ ಪ್ರಮುಖ ಆಶಯ

ಎ) ಮನುಷ್ಯನ ಸ್ವಾರ್ಥತೆಯ ಕುರಿತು ಬಿ)ಪ್ರಕೃತಿಯ ಸೊಬಗನ್ನು ಕುರಿತು
**ಸಿ)ಮನುಷ್ಯನ ಅತೃಪ್ತಿ ಹಾಗೂ ಚಂಚಲತೆಯನ್ನು ಕುರಿತು** ಡಿ)ಮೇಲಿನ ಯಾವುದೂ ಅಲ್ಲ

14. 'ಬೆದಕು' ಪದದ ಅರ್ಥ

ಎ) ಬೆದರಿಕೆ ಬಿ)ಹೆದರಿಕೆ
**ಸಿ)ಪ್ರಶ್ನಿಸು** ಡಿ)ತೆಳ್ಳನೆ

15. 'ಹೂಗಳಿಂದ' ಪದದಲ್ಲಿ ಆಗಿರುವ ವಿಭಕ್ತಿ ಪ್ರತ್ಯಯ

ಎ) ಪ್ರಥಮ ಬಿ)ದ್ವಿತೀಯ
**ಸಿ)ತೃತೀಯ** ಡಿ)ಚತುರ್ಥಿ

## ಮಾದರಿ ಗದ್ಯ – 2

**ಸೂಚನೆ: (ಪ್ರ.ಸಂ. 1 ರಿಂದ 8) ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಡಾ. ರಾಜೇಂದ್ರಪ್ರಸಾದ್‌ರು ಭಾರತದ ಪ್ರಥಮ ರಾಷ್ಟ್ರಪತಿಗಳು. ಅತ್ಯಂತ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನ ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿ ಸದೃಶ ಜೀವನ. ಅವರು ಕೋಪವನ್ನು ಹತ್ತಿಕ್ಕಬಲ್ಲವರಾಗಿದ್ದರು. ಬಾಳಿನಲ್ಲಿ ಶಿಸ್ತು-ಸಂಯಮ, ಸಮಯಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.

ಒಂದು ದಿನ ಕಛೇರಿಯ ಕೆಲಸ ಮುಗಿಸಿ ರಾಜೇಂದ್ರಪ್ರಸಾದರು ಮನೆಗೆ ಬಂದಾಗ ಅವರ ಒಂದು ಪುಸ್ತಕದ ಹಲವು ಪುಟಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿರುವುದನ್ನು ನೋಡಿದರು. ಇದೆಲ್ಲ ಮಕ್ಕಳ ಕೆಲಸ ಎಂಬುದು ಅವರಿಗೆ ಹೊಳೆಯಲು ಹೆಚ್ಚು ವೇಳೆ ಬೇಕಾಗಲಿಲ್ಲ. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು. ಆದರೆ ಆ ಮಕ್ಕಳನ್ನು ಅಪರಾಧಿಗಳಾಗಿಸಲು ಅವರ ಮನ ಒಪ್ಪಲಿಲ್ಲ. ಒಂದು ಉಪಾಯ ಹೂಡಿದರು.

ಪ್ರಸಾದರು ಮುಖ, ಕೈಕಾಲು ತೊಳೆದು ಬಂದರು. ನಿಧಾನವಾಗಿ ಕೋಣೆಯಲ್ಲಿ ಹರಿದು ಬಿದ್ದಿದ್ದ ಪುಸ್ತಕದ ಪುಟಗಳನ್ನು ಒಂದೊಂದಾಗಿ ಎತ್ತಿ ಮೇಜಿನ ಮೇಲಿಟ್ಟರು. ಬಳಿಕ ಮಕ್ಕಳನ್ನೆಲ್ಲ ಬಳಿಗೆ ಕರೆದರು. ಮಕ್ಕಳು ಓಡೋಡಿ ಬಂದರು. ರಾಜೇಂದ್ರಪ್ರಸಾದರು "ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದು ಹೋಗಿವೆ. ಇವೆಲ್ಲ ಪುಸ್ತಕದ ಪುಟಗಳು. ನಿಮ್ಮಲ್ಲಿ ಯಾರು ಯಾರು ಎಷ್ಟೆಷ್ಟು ಪುಟಗಳನ್ನು ಹರಿದಿದ್ದೀರೋ ಅವರಿಗೆ ಆ ಪುಟಗಳ ಸಂಖ್ಯೆಗನುಗುಣವಾಗಿ ಕಾಸು ಕೊಡುತ್ತೇನೆ ಆಗಬಹುದೆ?"ಎಂದರು.

ಮಕ್ಕಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಒಬ್ಬೊಬ್ಬರು ಕಾಸು ಸಿಗುವುದು ಎಂಬ ಸಂತೋಷದಿಂದ ತಾವು ಹರಿದ ಪುಟಗಳ ಸಂಖ್ಯೆಯನ್ನು ತಿಳಿಸಿದರು. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ಕಾಸು ಕೊಟ್ಟರು. ಹುಡುಗರಿಗೆ ಖುಷಿಯೋ ಖುಷಿ! ಆಗ ಪ್ರಸಾದರು "ನೋಡಿ ಮಕ್ಕಳೇ ಪುಸ್ತಕಗಳು ಜ್ಞಾನ ಭಂಡಾರ, ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವ ಆಕರಗಳು. ಪುಸ್ತಕದ ಪುಟಗಳನ್ನು ಹರಿದು ಹಾಕುವುದು ಒಳ್ಳೆಯ ಅಭ್ಯಾಸವಲ್ಲ. ತಿಳಿಯಿತೇ?ಎಂದು ಮಕ್ಕಳಿಗೆ ತಿಳಿಯುವಂತೆ ಹೇಳಿದರು. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಯಿತು. ಅವರೆಲ್ಲಾ ರಾಜೇಂದ್ರರಿಗೆ "ತಾತಾ ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ, ಜೋಪಾನ ಮಾಡುತ್ತೇವೆ" ಎಂದು ಪ್ರಮಾಣ ಮಾಡಿ ಹೇಳಿದರು.ಪ್ರಸಾದರಿಗೆ ಸಮಾಧಾನವಾಯಿತು.

ಆಯ್ಕೆ :- ಬೇ.ಗೂ. ರಮೇಶ್‌ರವರ 'ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ಘಟನೆ' ಕೃತಿ

1. ಡಾ॥ ರಾಜೇಂದ್ರ ಪ್ರಸಾದರು ಮನೆಗೆ ಬಂದಾಗ ನೋಡಿದ ದೃಶ್ಯ

ಎ) ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಮನೆಯ ವಸ್ತುಗಳು
ಬಿ) ಕಸಕಡ್ಡಿಯಿಂದ ಕೂಡಿದ ಮನೆಯ ಅಂಕಣ
**ಸಿ) ಪುಸ್ತಕದ ಹಲವು ಪುಟಗಳು ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿದ್ದ ದೃಶ್ಯ**
ಡಿ) ಇದಾವುದೂ ಅಲ್ಲ

2. ಪುಸ್ತಕಗಳು ನಮಗೆ ಹೀಗೆ ಉಪಯೋಗವಾಗುತ್ತವೆ.

**ಎ) ತಿಳುವಳಿಕೆಯ ಆಕರಗಳಾಗಿವೆ** ಬಿ) ಅಜ್ಞಾನವನ್ನು ಬೆಳೆಸುತ್ತವೆ
ಸಿ) ಮೌಢ್ಯತೆಯನ್ನು ಹೆಚ್ಚಿಸುತ್ತವೆ ಡಿ) ಅಂಧಕಾರವನ್ನು ಪ್ರೋತ್ಸಾಹಿಸುತ್ತವೆ

3. ಡಾ॥ ರಾಜೇಂದ್ರ ಪ್ರಸಾದರು ಬಾಳಿನಲ್ಲಿ ಇವುಗಳಿಗೆ ಮಹತ್ವ ನೀಡಿದ್ದರು.

ಎ) ಶಿಸ್ತು ಬಿ) ಸಂಯಮ
ಸಿ) ಸಮಯ ಪಾಲನೆ **ಡಿ) ಮೇಲಿನ ಎಲ್ಲವೂ**

4. ಡಾ॥ ರಾಜೇಂದ್ರ ಪ್ರಸಾದರು ಇದನ್ನು ಹತ್ತಿಕ್ಕಬಲ್ಲವರಾಗಿದ್ದರು

ಎ) ನಗೆಯನ್ನು ಬಿ) ಆಸ್ತಿಯನ್ನು
**ಸಿ) ಕೋಪವನ್ನು** ಡಿ) ಮಕ್ಕಳನ್ನು

5. ಮಕ್ಕಳಲ್ಲಿ ಈ ಕೀಳರಿಮೆ ಕಾಡುತ್ತಿತ್ತು.

ಎ) ಮನೆಯ ವಸ್ತುಗಳನ್ನು ಹಾಳು ಮಾಡಿದ್ದರಿಂದ
ಬಿ) ಮನೆಯ ಪೀಠೋಪಕರಣಗಳನ್ನು ಹಾಳು ಮಾಡಿದ್ದರಿಂದ
**ಸಿ) ಮನೆಯಲ್ಲಿನ ಪುಸ್ತಕಗಳ ಕೆಲವು ಪುಟಗಳನ್ನು ಹಾಳು ಮಾಡಿದ್ದರಿಂದ**
ಡಿ) ಮನೆಯಲ್ಲಿನ ಆಹಾರ ವಸ್ತುಗಳನ್ನು ಹಾಳು ಮಾಡಿದ್ದರಿಂದ

6. ಮಕ್ಕಳಿಗೆ ಇದು ಒಳ್ಳೆಯ ಅಭ್ಯಾಸ

**ಎ) ಪುಸ್ತಕಗಳ ಪುಟ ಹರಿಯದಿರುವುದು**
ಬಿ) ಪುಸ್ತಕಗಳ ಪುಟ ಹರಿಯುವುದು
ಸಿ) ಮೌಢ್ಯತೆಯ ಪರವಾಗಿ ಮಾತನಾಡುವುದು
ಡಿ) ಪುಸ್ತಕಗಳ ಪುಟವನ್ನು ಮಾರಾಟ ಮಾಡುವುದು

7. 'ಕಾಸು' ಪದದ ಅರ್ಥ

ಎ) ಕಾಗೆ **ಬಿ) ಹಣ**
ಸಿ) ಕಂದು ಡಿ) ಕಪ್ಪು

8. 'ಸಂತೋಷ' ಪದದ ವಿರುದ್ಧ ಪದ

ಎ) ದುಗುಡ ಬಿ) ಶೋಕ
ಸಿ) ನೋವು **ಡಿ) ದುಃಖ**

## ಮಾದರಿ ಪದ್ಯ – 2

**ಸೂಚನೆ: (ಪ್ರ.ಸಂ. 9 ರಿಂದ 15) ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು। ನನಕಂದ
ಜ್ಯೋತಿಯೇ ಆಗು ಜಗಕೆಲ್ಲ॥

ಸಂಸಾರವೆಂಬುದು ಸಾಗರ ಹೊಳೆಯಪ್ಪ
ಈಸಬಲ್ಲವನಿಗೆ ಎದೆಯುದ್ದ । ನನಕಂದ
ಓದುಬಲ್ಲವನಿಗೆ ಕೈಲಾಸ ॥

ಬಂಗಾರದ ಬಳೆತೊಟ್ಟು ಬೈಬ್ಯಾಡ ಬಡವರ
ಬಂಗಾರ ನಿನಗೆ ಸ್ಥಿರವಲ್ಲ। ಮದ್ದಿನದ
ಹೊತ್ತು ಹೊರಳೋದು ತಡವಲ್ಲ ॥

ಕೊಟ್ಟು ಕುದಿಯಲು ಬೇಡ ಇಟ್ಟು ಹಂಗಿಸಬೇಡ
ಎಷ್ಟುಂಡರೆಂದು ಅನಬೇಡ। ಇವು ಮೂರು
ಮುಟ್ಟುವುದು ಶಿವನ ಬಳಿಯಲ್ಲಿ ॥

ಅಕ್ಕ ಇದ್ದರೆ ಬಾವ ರೊಕ್ಕ ಇದ್ದರೆ ಸಂತೆ
ಮಕ್ಕಳಿದ್ದರೆ ಮನಿಮಾರು । ಹಡೆದವ್ವ
ನೀ ಇದ್ದರೆ ನಮಗೆ ಸಾಂರಾಜ್ಯ ॥

ಉಂಡಾಗ ಉಡುವಾಗ ಜನವೆಲ್ಲ ನೆಂಟರು
ಅಡವಿಯ ಸೊಪ್ಪು ತಲೆಯಲ್ಲಿ । ತಪ್ಪಾಗ
ಒಡಹುಟ್ಟಿದಣ್ಣ ಮುಖನೋಡ ॥

(ಜನಪದಗೀತೆ)
ಗರತಿಯ ಹಾಡು (ದೇ.ಜ.ಗೌ)

9. ತಾಯಿ ಮಗುವಿನ ಮಾತು ಹೀಗಿರಬೇಕು ಎಂದು ಬಯಸಿದ್ದಾಳೆ.

ಎ) ಚುರುಕಾಗಿರಬೇಕು
ಬಿ) ಮಿತವಾಗಿರಬೇಕು
ಸಿ) ಹೆಚ್ಚಾಗಿರಬೇಕು
**ಡಿ) ಚೂಡಾಮಣಿಯಾಗಿರಬೇಕು**

10. ಜನಪದರು ಸಂಸಾರವನ್ನು ಇದಕ್ಕೆ ಹೋಲಿಸಿದ್ದಾರೆ.

**ಎ) ಸಾಗರ**
ಬಿ) ನದಿ
ಸಿ) ಬಾವಿ
ಡಿ) ಕೆರೆ

11. ಈಸ ಬಲ್ಲವನಿಗೆ ಸಂಸಾರವೆಂಬ ಸಾಗರ ಹೀಗೆ ಕಾಣಿಸುತ್ತದೆ.

ಎ) ಚೂಡಾಮಣಿ
**ಬಿ) ಎದೆಯುದ್ದ**
ಸಿ) ಮನಿಮಾರು
ಡಿ) ಅಡವಿಯ ಸೊಪ್ಪು

12. ಪದ್ಯದಲ್ಲಿ **'ಕೈಲಾಸ'** ದೊರಕುವುದು ಇವರಿಗೆ;

ಎ) ಊಟ ಬಲ್ಲವನಿಗೆ
ಬಿ) ಮಾತು ಬಲ್ಲವನಿಗೆ
**ಸಿ) ಓದು ಬಲ್ಲವನಿಗೆ**
ಡಿ) ಆಟ ಬಲ್ಲವನಿಗೆ

13. ಜನಪದರ ಪ್ರಕಾರ ಇದು ಸ್ಥಿರವಲ್ಲ.

ಎ) ನೀತಿ
**ಬಿ) ಬಂಗಾರ**
ಸಿ) ಮಾತು
ಡಿ) ಆಚಾರ

14. 'ಸಂತೆ' ಇರುವಿಕೆ ಸಾಧ್ಯವಾಗುವುದು.

ಎ) ಮಕ್ಕಳಿದ್ದಾಗ
**ಬಿ) ರೊಕ್ಕವಿದ್ದಾಗ**
ಸಿ) ಬಂಗಾರವಿದ್ದಾಗ
ಡಿ) ಮಾತಿದ್ದಾಗ

15. "ಕೊಟ್ಟು ಕುದಿಯಲು ಬೇಡ" ಈ ಸಾಲಿನಲ್ಲಿ **'ಕುದಿ'** ಪದದ ಅರ್ಥ

ಎ) ಸಂತೋಷ ಪಡು
**ಬಿ) ಸಂಕಟ ಪಡು**
ಸಿ) ಊಟಕ್ಕೆ ಕೊಡು
ಡಿ) ಆಟಕ್ಕೆ ಬಿಡು

## ಮಾದರಿ ಗದ್ಯ –3

**ಸೂಚನೆ: (ಪ್ರ.ಸಂ. 1 ರಿಂದ 8) ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಡಾ॥ ಜಾಕಿರ್ ಹುಸೇನ್ ಭಾರತೀಯ ಶಿಕ್ಷಣದ ಅಭಿವೃದ್ಧಿ ಹಾಗೂ ಸುಧಾರಣೆ ಕುರಿತಂತೆ ಹಲವು ಪುಸ್ತಕಗಳನ್ನು ಬರೆದವರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಿಹಾರದ ರಾಜ್ಯಪಾಲರಾಗಿ, ಭಾರತದ ಉಪರಾಷ್ಟ್ರಪತಿಗಳಾಗಿ ದುಡಿದರು. ಕೆಲಕಾಲ ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಶಿಕ್ಷಣ ಅವರ ಪ್ರಮುಖ ಕಾರ್ಯಕ್ಷೇತ್ರವಾಗಿತ್ತು.

ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ ಉನ್ನತ ಶಿಕ್ಷಣಕ್ಕೆ ಹೆಸರಾದ ಸಂಸ್ಥೆ. ಅದರ ಸ್ಥಾಪಕರು ಡಾ॥ ಜಾಕಿರ್ ಹುಸೇನ್‌ರು.ಅವರು ತಮ್ಮ ಜೀವನದ ಬಹುಭಾಗವನ್ನು ಆ ವಿಶ್ವವಿದ್ಯಾಲಯದಲ್ಲಿಯೇ ಕಳೆದರೆನ್ನಬಹುದು. ಅಲ್ಲಿನ ಒಂದು ಘಟನೆ ತುಂಬಾ ರೋಚಕವಾಗಿದೆ.

ಡಾ॥ ಜಾಕಿರ್ ಹುಸೇನ್‌ರು ಶಿಸ್ತು ಮತ್ತು ಶುಚಿಗೆ ಅಪಾರ ಮಹತ್ವ ನೀಡುತ್ತಿದ್ದರು. ಎಲ್ಲ ವಿದ್ಯಾರ್ಥಿಗಳೂ ಪ್ರತಿನಿತ್ಯ ಶುಚಿಯಾದ ಬಟ್ಟೆಗಳನ್ನು ಧರಿಸಿ ಕಾಲೇಜಿಗೆ ಬರಬೇಕು ಹಾಗೂ ಕಾಲಿಗೆ ಹಾಕಿದ ಬೂಟುಗಳನ್ನು ಚೆನ್ನಾಗಿ ಪಾಲಿಶ್ ಮಾಡಿರಬೇಕು ಎಂದು ಹೇಳುತ್ತಿದ್ದರು. ಆದರೆ ಎಷ್ಟೋ ವಿದ್ಯಾರ್ಥಿಗಳು ಜಾಕಿರ್ ಹುಸೇನ್‌ರು ಹೇಳಿದುದನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ. ಇದರಿಂದ ಶಿಸ್ತಿಗೆ ಭಂಗವಾಗುವುದೆಂದು ಹುಸೇನರು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು ದಾರಿ ಕಂಡುಕೊಂಡರು.

ಒಂದು ದಿನ ವಿಶ್ವವಿದ್ಯಾಲಯದ ಪ್ರವೇಶ ದ್ವಾರದಲ್ಲಿ ಜಾಕಿರ್ ಹುಸೇನರು ಒಬ್ಬ ಪಾಲಿಶ್ ಹಾಕುವವನ ವೇಷದಲ್ಲಿ ಕುಳಿತಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂತು. ಕುಲಪತಿಗಳು ಕೈಯಲ್ಲಿ ಪಾಲಿಶ್ ಡಬ್ಬಿ ಹಿಡಿದು ಕುಳಿತಿದ್ದ ದೃಶ್ಯ ಕಂಡ ವಿದ್ಯಾರ್ಥಿಗಳು ತಮ್ಮ ವರ್ತನೆಗೆ ನಾಚಿದರು. ಒಂದಿಬ್ಬರು ಪಾಲಿಶ್ ಹಾಕಿಸಿಕೊಂಡು ಆಗಿತ್ತು.

ಅಂದಿನಿಂದ ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಹಾಕಿಕೊಂಡು, ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು. ಇದು ವಿದ್ಯಾರ್ಥಿಗಳ ಬಾಳಿನಲ್ಲಿ ಶಿಸ್ತು ಬೆಳೆಸಿಕೊಳ್ಳಲು ನೆರವಾಯಿತು.

'ಶಿಸ್ತು ಮೂಡಿಸಿಕೊಳ್ಳಿ' ಇದು ಜಾಕಿರ್ ಹುಸೇನ್‌ರ ಆದೇಶವಾಗಿತ್ತು.

ಆಯ್ಕೆ :– ಬೇ.ಗೂ. ರಮೇಶ್‌ರವರ 'ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ಘಟನೆ' ಕೃತಿ

1. ಡಾ॥ ಜಾಕಿರ್ ಹುಸೇನ್‌ರ ಪ್ರಮುಖ ಕಾರ್ಯಕ್ಷೇತ್ರ

   ಎ) ಆರ್ಥಿಕತೆ   ಬಿ) ಸಾಮಾಜಿಕ ಆಡಳಿತ ನಿರ್ವಹಣೆ

   **ಸಿ) ಶಿಕ್ಷಣ**   ಡಿ) ಮಿಲಿಟರಿ ಸುವ್ಯವಸ್ಥೆ

2. ಹುಸೇನರು ಸ್ಥಾಪಿಸಿದ ವಿಶ್ವವಿದ್ಯಾಲಯ

   ಎ) ಆಲಿಗಡ ವಿಶ್ವವಿದ್ಯಾಲಯ   **ಬಿ) ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ**

   ಸಿ) ಕಲ್ಕತ್ತಾ ವಿಶ್ವವಿದ್ಯಾಲಯ   ಡಿ) ದೆಹಲಿ ವಿಶ್ವವಿದ್ಯಾಲಯ

3. ಗದ್ಯದ ಪ್ರಕಾರ ಹುಸೇನರು ಇದಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು.

   ಎ) ಶಿಸ್ತು ಮತ್ತು ಶಿಕ್ಷಣಕ್ಕೆ   ಬಿ) ಶಿಕ್ಷಣ ಮತ್ತು ಶುಚಿಗೆ

   **ಸಿ) ಶಿಸ್ತು ಮತ್ತು ಶುಚಿಗೆ**   ಡಿ) ಶಿಕ್ಷಣ ಮತ್ತು ಶಾಂತಿಗೆ

4. ಹುಸೇನರು ಬರೆದ ಹಲವು ಪುಸ್ತಕಗಳು ಒಳಗೊಂಡ ಪ್ರಮುಖವಾದ ಅಂಶ

   ಎ) ಭಾರತದ ಆರ್ಥಿಕ ಅಭಿವೃದ್ಧಿ ಹಾಗೂ ಸುಧಾರಣೆ

   ಬಿ) ಭಾರತದ ತಾಂತ್ರಿಕತೆ ಅಭಿವೃದ್ಧಿ ಹಾಗೂ ಸುಧಾರಣೆ

   ಸಿ) ಭಾರತದ ಕೃಷಿಯ ಅಭಿವೃದ್ಧಿ ಹಾಗೂ ಸುಧಾರಣೆ

   **ಡಿ) ಭಾರತದ ಶಿಕ್ಷಣದ ಅಭಿವೃದ್ಧಿ ಹಾಗೂ ಸುಧಾರಣೆ**

5. ಈ ಗದ್ಯಭಾಗದ ಪ್ರಧಾನ ಆಶಯ

**ಎ) ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸುವುದು** ಬಿ) ವಿದ್ಯಾರ್ಥಿಗಳಲ್ಲಿ ಒಗ್ಗಟ್ಟು ಮೂಡಿಸುವುದು
ಸಿ) ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಬೆಳೆಸುವುದು ಡಿ) ವಿದ್ಯಾರ್ಥಿಗಳಲ್ಲಿ ದಾನದ ಗುಣ ಬೆಳೆಸುವುದು

6. ವಿದ್ಯಾರ್ಥಿಗಳ ಶಿಸ್ತಿನಲ್ಲಿ ಉಂಟಾದ ಬದಲಾವಣೆಗೆ ಮೂಲ ಕಾರಣ

**ಎ) ಕುಲಪತಿಗಳ ಕೈಯಲ್ಲಿನ ಪಾಲಿಶ್‌ನಿಂದಾಗಿ**
ಬಿ) ಕುಲಪತಿಗಳು ಶಿಕ್ಷೆ ನೀಡಿದ್ದರಿಂದಾಗಿ
ಸಿ) ಕುಲಪತಿಗಳು ಕಾಲೇಜಿನಿಂದ ವರ್ಗಾವಣೆಯಿಂದಾಗಿ
ಡಿ) ಕುಲಪತಿಗಳು ಹೊಸದಾಗಿ ಬಂದಿದ್ದರಿಂದ

7. 'ಮಗು' ಪದದ ಬಹುವಚನ ರೂಪ

ಎ) ಮಗುಗಳು ಬಿ) ವಿದ್ಯಾರ್ಥಿಗಳು
**ಸಿ) ಮಕ್ಕಳು** ಡಿ) ಮಕ್ಕಳುಗಳು

8. 'ಜಾಕಿರ್ ಹುಸೇನ್' ಪದವು ಈ ನಾಮವಾಚಕಕ್ಕೆ ಸೇರಿದೆ.

ಎ) ರೂಢನಾಮ **ಬಿ) ಅಂಕಿತನಾಮ**
ಸಿ) ಅನ್ವರ್ಥನಾಮ ಡಿ) ಸರ್ವನಾಮ

## ಮಾದರಿ ಪದ್ಯ – 3

**ಸೂಚನೆ: (ಪ್ರ.ಸಂ. 9 ರಿಂದ 15 ) ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ ॥

ಎಲ್ಲಿದೆ ನಂದನ?ಎಲ್ಲಿದೆ ಬಂಧನ?
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಿಗೆಗೆ ॥

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ ॥

ಜಿ.ಎಸ್.ಶಿವರುದ್ರಪ್ಪ
(ಗೋಡೆ–ಕವನ ಸಂಕಲನ)

9. ಇಲ್ಲದ ದೇವರನ್ನು ಹುಡುಕುವುದು ಇಲ್ಲಿ.

**ಎ. ಗುಡಿಯೊಳಗೆ** ಬಿ. ಕೋಟೆಯೊಳಗೆ
ಸಿ. ನಮ್ಮೊಳಗೆ ಡಿ. ಕಲ್ಲಿನೊಳಗೆ

10. ಕವಿ ಹೇಳುವ ಹಾಗೆ **"ದೇವರು"** ಎಂಬುದು ಸಂಕೇತಿಸುವುದು.

ಎ. ಕಲ್ಲು–ಮಣ್ಣು **ಬಿ. ಪ್ರೀತಿ–ಸ್ನೇಹ**
ಸಿ. ದ್ವೇಷ–ಅಸೂಯೆ ಡಿ. ಗುಡಿ–ಗೋಪುರ

11. ನಾಲ್ಕು ದಿನದ ಬದುಕಿನಲಿ ಕಷ್ಟವಾದುದು.

ಎ. ನಂದನ  ಬಿ. ಬಂಧನ

**ಸಿ. ಹೊಂದಿಕೆ**  ಡಿ. ಅಮೃತ

12. ಇದರಿಂದ ಹತ್ತಿರವಿದ್ದೂ ದೂರ ಸರಿಯುತ್ತಿದ್ದೇವೆ.

ಎ. ಕಷ್ಟದಿಂದ  **ಬಿ. ಅಹಮಿನಿಂದ**

ಸಿ. ಅಮೃತದಿಂದ  ಡಿ. ಬದುಕಿನಿಂದ

13. ಈ ಕವಿತೆಯ ಪ್ರಮುಖ ಆಶಯ;

ಎ. ಗರ್ವವನ್ನು ಬಿಟ್ಟು ಇನ್ನೊಬ್ಬರೊಂದಿಗೆ ಹೊಂದಿಕೊಳ್ಳದಿರುವುದು

ಬಿ. ಗರ್ವದಿಂದ ಇನ್ನೊಬ್ಬರಿಂದ ದೂರ ಸರಿಯುವುದು

ಸಿ. ನಾನು ಹೇಳಿದ್ದೇ ಸರಿ ಎಂಬ ದುರಭಿಮಾನವನ್ನು ಹೇಳುವುದು

**ಡಿ. ಗರ್ವಬಿಟ್ಟು ಪ್ರೀತಿ ಸ್ನೇಹಗಳಿಂದ ಇತರರೊಂದಿಗೆ ಹೊಂದಿಕೊಳ್ಳುವುದು**

14. ನಮ್ಮೊಳಗಿನ ತಿಳಿಯನು ಕಲಕದೆ ಇದ್ದರೆ ನಾಲಗೆಗೆ ಅದು

ಎ. ಹುಳಿಯಾಗಿರುತ್ತದೆ  ಬಿ. ವಿಷವಾಗುತ್ತದೆ

ಸಿ. ಒಗರಾಗಿರುತ್ತದೆ  **ಡಿ. ಅಮೃತವಾಗಿರುತ್ತದೆ**

15. "ಅನ್ವೇಷಣೆ" ಪದದ ಅರ್ಥ

**ಎ. ಶೋಧಿಸು**  ಬಿ. ಬಾಧಿಸು

ಸಿ. ಹೆದರಿಸು  ಡಿ. ಓಡಿಸು

## ವ್ಯಾಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾರ್ಗದರ್ಶಿ

ಪರೀಕ್ಷಾ ಸಿದ್ಧತೆಯಲ್ಲಿ ವ್ಯಾಕರಣಾಂಶಗಳ ಕುರಿತು ಅಧ್ಯಯನ ಒಂದು ಮುಖ್ಯವಾಗಿ ಗಮನಿಸಬೇಕಾದ ಅಂಶ ಈ ವಿಭಾಗದಲ್ಲಿ ಇಂತಿಷ್ಟೇ ಅಂಕಗಳಿಗೆ ನಿರ್ದಿಷ್ಟವಾಗಿ ಪ್ರಶ್ನೆಗಳನ್ನು ಕೇಳಲಾಗುತ್ತದೆ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಕನಿಷ್ಠ ಮೂರು ಅಂಕಗಳಿಂದ 8 ಅಂಕಗಳವರೆಗೂ ಈ ಹಿಂದಿನ ಪರೀಕ್ಷೆಯಲ್ಲಿ ಕೇಳಿರುವ ಉದಾಹರಣೆಗಳಿದ್ದು, ಅಧ್ಯಯನ ಮಾಡುವುದು ಸೂಕ್ತ ಮತ್ತೊಂದು ಮುಖ್ಯ ಅಂಶವೆಂದರೆ ವ್ಯಾಕರಣದಲ್ಲಿ ಇದೇ ವಿಭಾಗದಿಂದ ಪ್ರಶ್ನೆಗಳನ್ನು ನಿರೀಕ್ಷೆ ಮಾಡಬಹುದೆಂದು ಪಟ್ಟಿ ಮಾಡುವುದು ಸಾಧ್ಯವಿಲ್ಲ, ಅಂದರೆ ವರ್ಣಮಾಲೆಯಿಂದ ಪ್ರಾರಂಭಿಸಿ ಅಲಂಕಾರ, ವಾಕ್ಯ ರಚನೆ, ಛಂದಸ್ಸುಗಳನ್ನು ಒಳಗೊಂಡಂತೆ ಯಾವುದೇ ವಿಭಾಗದಿಂದಲೂ ಪ್ರಶ್ನೆಗಳು ರಚನೆಯಾಗಬಹುದು ಹಾಗಾಗಿ ಮುಖ್ಯವಾಗಿ ಗಮನಿಸುವುದಾದರೆ,

| | |
|---|---|
| • ವರ್ಣಮಾಲೆ | • ವಾಕ್ಯ ಪ್ರಭೇದಗಳು |
| • ನಾಮಪದಗಳು | • ಲೇಖನ ಚಿಹ್ನೆಗಳು |
| • ಸರ್ವನಾಮಗಳು | • ಪದಗಳ ಅರ್ಥ |
| • ವಿಭಕ್ತಿ ಪ್ರತ್ಯಯಗಳು (ಹಳಗನ್ನಡ ಮತ್ತು ಹೊಸಗನ್ನಡ) | • ಹೊಸಗನ್ನಡ ರೂಪ |
| • ಕ್ರಿಯಾ ಪದಗಳು | • ಅಲಂಕಾರಗಳು |
| • ಸಂಧಿಗಳು | • ವಿರುದ್ಧ ಪದಗಳು |
| • ಸಮಾಸಗಳು | • ಪದಗಳನ್ನು ಬಿಡಿಸಿ ಬರೆಯುವುದು |
| • ಅನ್ಯದೇಶಿ ಪದಗಳು/ ಪಾರಿಭಾಷಿಕ ಪದಗಳು | • ಶುದ್ಧ ಪದಗಳು |
| • ತತ್ಸಮ ತದ್ಭವಗಳು | • ನುಡಿಗಟ್ಟುಗಳ ಅರ್ಥ |
| • ಗ್ರಾಂಥಿಕ ರೂಪಗಳು | • ರಗಳೆಗಳು |
| • ದ್ವಿರುಕ್ತಿ ಜೋಡುನುಡಿ ಅನುಕರಣಾವ್ಯಯಗಳು | • ಪತ್ರಲೇಖನ |
| • ಅವ್ಯಯಗಳು ಕೃದಂತಗಳು | • ಪ್ರಬಂಧ |
| • ಕೃದಂತಗಳು | • ತದ್ಧಿತಾಂತಗಳು |
| • ಛಂದಸ್ಸು, ಪ್ರಸ್ತಾರ, ಕಂದಪದ್ಯ, ಷಟ್ಪದಿ ಇತರೆ ಛಂಧೋಪ್ರಕಾರಗಳು | |

ಮೇಲಿನ ವ್ಯಾಕರಣಾಂಶಗಳ ಪಟ್ಟಿಯ ಜೊತೆಗೆ, ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಯಲ್ಲಿ ಬಂದಿರುವ ಕೆಲ ಮಾದರಿಯ ವ್ಯಾಕರಣಾಂಶಗಳನ್ನು ನೋಡಿ ಅಧ್ಯಯನ ಮಾಡುವುದು ಸೂಕ್ತವಾಗಿದೆ.

ಮಾದರಿಯಾಗಿ ಕೆಲವೊಂದು ವ್ಯಾಕರಣ ಪರಿಕಲ್ಪನೆಗಳನ್ನು ಚರ್ಚಿಸುವುದಾದರೆ,

## ಸಂಧಿಗಳು

### ಕನ್ನಡ ಸಂಧಿಗಳು

| ಲೋಪ ಸಂಧಿ | ಆಗಮ ಸಂಧಿ |
|---|---|
| ಮಾತು + ಇಲ್ಲ= ಮಾತಿಲ್ಲ | ತೆನೆ + ಅನ್ನು = ತೆನೆಯನ್ನು |
| ಬೇರೆ + ಒಬ್ಬ = ಬೇರೊಬ್ಬ | ಚಳಿ + ಅಲ್ಲಿ = ಚಳಿಯಲ್ಲಿ |
| ನಿನಗೆ + ಅಲ್ಲದೆ = ನಿನಗಲ್ಲದೆ | ಮೇ + ಇಸು = ಮೇಯಿಸು |
| ನಾವು + ಎಲ್ಲಾ = ನಾವೆಲ್ಲ | ಕಾ + ಅದೆ =ಕಾಯದೆ |
| ಆಡು + ಇಸು = ಆಡಿಸು | ಮೈ + ಅನ್ನು = ಮೈಯನ್ನು |
| ಒಲ್ಲೆನು + ಎಂದು = ಒಲ್ಲೆನೆಂದು | ಮಡು + ಅನ್ನು = ಮಡುವನ್ನು |
| ಇವನಿಗೆ + ಏನು = ಇವನಿಗೇನು | ಹೂ + ಇಂದ = ಹೂವಿನಿಂದ |
| ಊರು + ಊರು = ಊರೂರು | ಮರ + ಅನ್ನು = ಮರವನ್ನು |
| ದೇವರು + ಇಂದ = ದೇವರಿಂದ | ಗೋ + ಅನ್ನು = ಗೋವನ್ನು |
| ಇವನಿಗೆ + ಆನು =ಇವನಿಗಾನು | ಈ + ಉಂಗುರ = ಈವುಂಗುರ |
| ಆದೇಶ ಸಂಧಿ | |
| ಚಳಿ + ಕಾಲ = ಚಳಿಗಾಲ | ಬೆಟ್ಟದ + ತಾವರೆ =ಬೆಟ್ಟದಾವರೆ |
| ಬಾಯ್ + ತೆರೆ = ಬಾಯ್ದೆರೆ | ಮೇಲ್ + ತುಟಿ = ಮೇಲ್ದುಟಿ |
| ತಲೆ + ಕಟ್ಟು = ತಲೆಗಟ್ಟು | ಕಣ್ + ಪನಿ = ಕಂಬನಿ |
| ಕಣ್ + ಕೆಟ್ಟು = ಕಂಗೆಟ್ಟು | ಮೈ + ತೋರು = ಮೈದೋರು |
| ಬೆನ್ + ಪತ್ತು = ಬೆಂಬತ್ತು | ಮರೆ + ತಪ್ಪು = ಮರೆದಪ್ಪು |

### ಸಂಸ್ಕೃತ ಸಂಧಿಗಳು

| ಸವರ್ಣದೀರ್ಘ ಸಂಧಿ | ಗುಣ ಸಂಧಿ |
|---|---|
| ದೇವ + ಅಸುರ = ದೇವಾಸುರ | ಮಹಾ+ ಈಶ = ಮಹೇಶ |
| ಸುರ + ಅಸುರ = ಸುರಾಸುರ | ನರ + ಇಂದ್ರ = ನರೇಂದ್ರ |
| ಮಹಾ + ಆತ್ಮ = ಮಹಾತ್ಮ | ಏಕ + ಊನ =ಏಕೋನ |
| ರವಿ +ಇಂದ್ರ = ರವೀಂದ್ರ | ದೇವ + ಋಷಿ = ದೇವರ್ಷಿ |
| ಲಕ್ಷ್ಮಿ + ಈಶ = ಲಕ್ಷ್ಮೀಶ | ಚಂದ್ರ + ಉದಯ = ಚಂದ್ರೋದಯ |
| ಗುರು + ಉಪದೇಶ = ಗುರೂಪದೇಶ | ಗಣ + ಈಶ = ಗಣೇಶ |
| ವಿದ್ಯ +ಅಭ್ಯಾಸ = ವಿದ್ಯಾಭ್ಯಾಸ | ಗಂಗ + ಉದಕ = ಗಂಗೋದಕ |
| ಗಿರಿ + ಈಶ = ಗಿರೀಶ | ಮಹಾ + ಈಶ್ವರ = ಮಹೇಶ್ವರ |
| ವೇದ + ಉಪದೇಶ = ವೇದೋಪದೇಶ | ರಾಜ + ಋಷಿ = ರಾಜರ್ಷಿ |
| ರಾಮ + ಆಯಣ = ರಾಮಾಯಣ | ಅರುಣ + ಉದಯ = ಅರುಣೋದಯ |

| ವೃದ್ಧಿ ಸಂಧಿ | ಯಣ್ ಸಂಧಿ |
|---|---|
| ಏಕ +ಏಕ = ಏಕೈಕ | ಅತಿ + ಅಂತ = ಅತ್ಯಂತ |
| ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ | ಮನು + ಅಂತರ = ಮನ್ವಂತರ |
| ವಿದ್ಯಾ + ಐಶ್ವರ್ಯ= ವಿದ್ಯೈಶ್ವರ್ಯ | ಪಿತೃ + ಅರ್ಜಿತ = ಪಿತ್ರಾರ್ಜಿತ |
| ಮಹಾ + ಔನ್ನತ್ಯ = ಮಹೌನ್ನತ್ಯ | ಗತಿ + ಅಂತರ = ಗತ್ಯಂತರ |
| ಲೋಕ + ಏಕವೀರ = ಲೋಕೈಕವೀರ | ಪ್ರತಿ + ಅರ್ಥ = ಪ್ರತ್ಯರ್ಥ |
| ವಿಶ್ವ + ಐಕ್ಯ = ವಿಶ್ವೈಕ್ಯ | ಮಾತೃ+ ಅಂಶ = ಮಾತ್ರಾಂಶ |
| ಜನ + ಐಕ್ಯ = ಜನೈಕ್ಯ | ಅಧಿ + ಆತ್ಮ = ಅಧ್ಯಾತ್ಮ |
| | ವಧೂ + ಆಭರಣ = ವಧ್ವಾಭರಣ |
| | ಜಾತಿ +ಅತೀತ ಜಾತ್ಯತೀತ |
| | ಕರ್ತೃ + ಅರ್ಥ = ಕರ್ತ್ರಾರ್ಥ |

## ಸಂಸ್ಕೃತ ವ್ಯಂಜನ ಸಂಧಿಗಳು

| ಜಶ್ತ್ವ ಸಂಧಿ | ಶ್ಚುತ್ವ ಸಂಧಿ |
|---|---|
| ದಿಕ್ + ಅಂತ = ದಿಗಂತ | ಮನಸ್ + ಶುದ್ಧಿ + ಮನಶ್ಶುದ್ಧಿ |
| ಅಚ್ + ಅಂತ = ಅಜಂತ | ಯಶಸ್ + ಚಂದ್ರಿಕೆ= ಯಶಶ್ಚಂದ್ರಿಕೆ |
| ಷಟ್ + ಆಸನ = ಷಡಾಸನ | ಸತ್ + ಚಿತ್ರ = ಸಚ್ಚಿತ್ರ |
| ಸತ್ + ಆನಂದ= ಸದಾನಂದ | ಬೃಹತ್ + ಛತ್ರ = ಬೃಹಚ್ಛತ್ರ |
| ಅಪ್ + ದಿ = ಅಬ್ಧಿ | ಶರತ್ + ಚಂದ್ರ = ಶರಶ್ಚಂದ್ರ |
| ವಾಕ್ + ದೇವಿ = ವಾಗ್ದೇವಿ | ಜಗತ್ + ಜ್ಯೋತಿ = ಜಗಜ್ಜ್ಯೋತಿ |
| ಸತ್ + ಉದ್ದೇಶ = ಸದುದ್ದೇಶ | ಮನಸ್ + ಚಂಚಲ= ಮನಶ್ಚಂಚಲ |
| ಅಚ್ +ಆದಿ = ಅಜಾದಿ | ಲಸತ್+ ಚಿತ್ರ = ಲಸಚ್ಚಿತ್ರ |
| ವಿರಾಟ್ + ರೂಪ = ವಿರಾಡ್ರೂಪ | ಮನಸ್+ ಶಾಸ್ತ್ರ = ಮನಃಶಾಸ್ತ್ರ |
| ದಿಕ್ + ದಿಗಂತ = ದಿಗ್ದಿಗಂತ | ಪಯಸ್+ ಶಯನ = ಪಯಶ್ಶಯನ |
| ಅನುನಾಸಿಕ ಸಂಧಿ | |
| ವಾಕ್+ಮಯ= ವಾಙ್ಮಯ | ಸತ್+ಮಣಿ= ಸನ್ಮಣಿ |
| ಷಟ್ + ಮುಖ= ಷಣ್ಮುಖ | ಷಟ್+ ಮಾಸ= ಷಣ್ಮಾಸ |
| ಸತ್+ಮಾನ =ಸನ್ಮಾನ | ವಾಕ್+ ಮಾನಸ= ವಾಙ್ಮನಸ |
| ಚಿತ್ + ಮಯ = ಚಿನ್ಮಯ | ಉತ್+ ಮಾದ = ಉನ್ಮಾದ |
| ವಾಕ್ + ಮಾಧುರ್ಯ = ವಾಙ್ಮಧುರ್ಯ | ಚಿತ್+ಮೂಲ = ಚಿನ್ಮೂಲ |

## ಸಮಾಸಗಳು

| ತತ್ಪುರುಷ ಸಮಾಸ | ಕರ್ಮಧಾರೆಯ ಸಮಾಸ |
|---|---|
| ಮರದ+ ಕಾಲು = ಮರಗಾಲು | ಇನಿದು +ಸರ= ಇಂಚರ |
| ಕಲ್ಲಿನ+ ಹಾಸಿಗೆ =ಕಲ್ಲುಹಾಸಿಗೆ | ಬಿಳಿದು+ ಕೊಡೆ =ಬೆಳ್ಗೊಡೆ |
| ತೇರಿಗೆ + ಮರ= ತೇರುಮರ | ಹೊಸದು+ ಕನ್ನಡ =ಹೊಸಗನ್ನಡ |
| ಕಣ್ಣಿನಿಂದ + ಕುರುಡ =ಕಣ್ಕುರುಡ | ಮೆಲ್ಲಿತು+ ಮಾತು = ಮೆಲ್ಮಾತು |
| ಅರಸನ+ ಮನೆ= ಅರಮನೆ | ನೀಲವಾದ+ ಶರಧಿ= ನೀಲಶರಧಿ |
| ಹಗಲಿನಲ್ಲಿ+ ಕನಸು =ಹಗಲುಗನಸು | ದಿವ್ಯವಾದ +ಪ್ರಕಾಶ =ದಿವ್ಯಪ್ರಕಾಶ |
| ಬೆಟ್ಟದ +ತಾವರೆ= ಬೆಟ್ಟದಾವರೆ | ಚಿಕ್ಕವಳು + ಹುಡುಗಿ = ಚಿಕ್ಕಹುಡುಗಿ |
| ಕವಿಗಳಿಂದ + ವಂದಿತ = ಕವಿವಂದಿತ | ನೀಲವಾದ + ಉತ್ಪಲ = ನೀಲೋತ್ಪಲ |
| ಉತ್ತಮರಲ್ಲಿ + ಉತ್ತಮ = ಉತ್ತಮೋತ್ತಮ | ಹಿರಿದು + ಮರ = ಹೆಮ್ಮರ |
| | ಕರವು+ ಕಮಲದಂತೆ = ಕರಕಮಲ |

| ದ್ವಿಗು ಸಮಾಸ | ಅಂಶಿ ಸಮಾಸ |
|---|---|
| ಮೂರು + ಮಡಿ= ಮುಮ್ಮಡಿ | ಕೈಯ + ಅಡಿ = ಅಂಗೈ |
| ಎರಡು + ಕೆಲ = ಇಕ್ಕೆಲ | ತಲೆಯ + ಹಿಂದೆ = ಹಿಂದಲೆ |
| ಏಕವಾದ + ಅಂಗ = ಏಕಾಂಗ | ಹುಬ್ಬಿನ + ಕೊನೆ = ಕೊನೆಹುಬ್ಬು |
| ಸಪ್ತಗಳಾದ+ ಸಾಗರಗಳು = ಸಪ್ತಸಾಗರಗಳು | ಕೋಟೆಯ + ಕೆಳಗು = ಕೆಳಗೋಟೆ |
| ಐದು+ ಮಡಿ= ಐವಡಿ ( ಐದುಮಡಿ) | ಮೂಗಿನ + ತುದಿ = ತುದಿಮೂಗು |
| ಒಂದು+ ಕಟ್ಟು = ಒಕ್ಕಟ್ಟು | ಮೈಯ + ಒಳಗು = ಒಳಮೈ |
| ಎರಡು + ಪೆಂಡಿರ್ = ಇರ್ಪ೦ಡಿರ್ | ಕೋಟೆಯ + ಮೇಗು = ಮೇಗೋಟೆ |
| ಮೂರು + ಗಾವುದ = ಮೂಗಾವುದ | ಕಾಲಿನ + ಮುಂದು = ಮುಂಗಾಲು |
| ದಶಗಳಾದ + ಮುಖಗಳು = ದಶಮುಖಗಳು | ಕೆರೆಯ + ಒಳಗು = ಒಳಗೆರೆ |
| ಮೂರು + ಕಣ್ಣು = ಮುಕ್ಕಣ್ಣು | |

| ದ್ವಂದ್ವ ಸಮಾಸ | |
|---|---|
| ಗಿಡವು + ಮರವು + ಬಳ್ಳಿಯು =ಗಿಡಮರಬಳ್ಳಿ | |
| ಗುಡುಗು + ಸಿಡಿಲು + ಮಿಂಚು = ಗುಡುಗುಸಿಡಿಲುಮಿಂಚು | |
| ರಾಮನು+ ಲಕ್ಷ್ಮಣನು+ ಸೀತೆಯು= ರಾಮಲಕ್ಷ್ಮಣಸೀತೆ | |
| ಆನೆಯೂ + ಕುದುರೆಯು + ಒಂಟೆಯು =ಆನೆಕುದುರೆಒಂಟೆ | |
| ಗಿರಿಯೂ + ವನವೂ + ದುರ್ಗವೂ= ಗಿರಿವನದುರ್ಗ | |
| ಕೆರೆಯು + ಕಟ್ಟೆಯೂ + ಬಾವಿಯು = ಕೆರೆಕಟ್ಟೆಬಾವಿ | ಲವನೂ + ಕುಶನೂ = ಲವಕುಶ |
| ಹಣ್ಣೂ+ ಕಾಯಿ = ಹಣ್ಣುಕಾಯಿ | ಕಸವೂ + ಕಡ್ಡಿಯೂ = ಕಸಕಡ್ಡಿ |

| ಬಹುವ್ರೀಹಿ ಸಮಾಸ | ಕ್ರಿಯಾ ಸಮಾಸ |
|---|---|
| ಮೂರು + ಕಣ್ಣು– ಉಳ್ಳವ =ಮುಕ್ಕಣ್ಣ | ಮೈಯನ್ನು + ತಡವಿ = ಮೈದಡವಿ |
| ನಾಲ್ಕು + ಮೊಗ– ಉಳ್ಳವ= ನಾಲ್ಮೊಗ | ಕೈಯನ್ನು + ಮುಟ್ಟಿ = ಕೈಮುಟ್ಟಿ |
| ಕುಂಟು+ ಕಾಲು –ಉಳ್ಳವ = ಕುಂಟ | ಕಣ್ಣನ್ನು + ಮುಟ್ಟಿ = ಕಣ್ಮುಟ್ಟಿ |
| ಹಣೆಯಲ್ಲಿ + ಕಣ್ಣು– ಉಳ್ಳವ = ಹಣೆಗಣ್ಣ | ಬಟ್ಟೆಯನ್ನು + ತೋರು = ಬಟ್ಟೆದೋರು |
| ಪಾಣಿಯಲ್ಲಿ+ ಚಕ್ರ– ಉಳ್ಳವ = ಚಕ್ರಪಾಣಿ | ದಾರಿಯನ್ನು + ಕಾಣನು = ದಾರಿಗಾಣನು |
| ಪಾಲದಲ್ಲಿ+ ನೇತ್ರ– ಉಳ್ಳವ =ಪಾಲನೇತ್ರ | ಕಣ್ಣಿನಿಂದ + ಕೆಡು= ಕಂಗೆಡು |
| ನೀಡಿದು+ ಮೂಗು– ಉಳ್ಳವ = ನೀಡುಮೂಗ | ಮೈಯಂ + ತೊಳೆದು= ಮೈದೊಳೆದು |
| ಡೊಂಕು+ ಕಾಲು– ಉಳ್ಳವ= ಡೊಂಕುಗಾಲ | ತಲೆಯನ್ನು + ಕೊಡವಿ = ತಲೆಗೊಡವಿ |
| ಕಣ್ಣಿನಲ್ಲಿ + ಕಿಚ್ಚು– ಉಳ್ಳವ = ಕಿಚ್ಚುಗಣ್ಣ | ಕೈಯಂ + ತೊಳೆದು = ಕೈದೊಳೆದು |
| | ಕಣ್ಣಂ +ತೆರೆ = ಕಣ್ದೆರೆ. |

## ಅನ್ಯದೇಶಿಯ ಪದಗಳು/ ಪಾರಿಭಾಷಿಕ ಪದಗಳು

ಅನ್ಯದೇಶಿಯ/ ಪಾರಿಭಾಷಿಕ ಪದಗಳನ್ನು ವ್ಯಾಕರಣಾಂಶದಲ್ಲಿ ಬಹು ಮುಖ್ಯವಾಗಿ ನೀಡಲಾಗುತ್ತದೆ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಪ್ರಚಲಿತ ಪದಗಳನ್ನು ಗುರುತಿಸಿಕೊಳ್ಳುವುದು ನಾಲ್ಕನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಪ್ರಥಮ ಭಾಷಾ ಪಠ್ಯಪುಸ್ತಕದಲ್ಲಿನ ಭಾಷಾಭ್ಯಾಸದಲ್ಲಿ ನೀಡಿರುವ ಅನ್ಯದೇಶಿಯ/ ಪಾರಿಭಾಷಿಕ ಪದಗಳನ್ನು ಅಧ್ಯಯನ ಮಾಡುವುದು ಪ್ರಶ್ನೆಪತ್ರಿಕೆಯಲ್ಲಿ ಕೊಡಬಹುದಾದ ಅನ್ಯದೇಶಿಯ/ ಪಾರಿಭಾಷಿತ ಪದಗಳ ಪಟ್ಟಿಯ ಮಾದರಿಯನ್ನು ಕೊಡಲಾಗಿದೆ. ಅವುಗಳೊಂದಿಗೆ ಇನ್ನೂ ಹೆಚ್ಚಿನ ಪಾರಿಭಾಷಿಕ ಪದಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಸಂಸ್ಕೃತ, ಪ್ರಾಕೃತ,ಹಿಂದಿ, ಇಂಗ್ಲಿಷ್, ತಮಿಳು, ಮರಾಠಿ, ಉರ್ದು, ಅರೇಬಿಕ್, ಪೋರ್ಚುಗೀಸ್ ಮೊದಲಾದ ಭಾಷೆಗಳಿಂದ ಎರವಲಾಗಿ ಬಂದು ಕನ್ನಡಕ್ಕೆ ಸೇರಿವೆ ಈ ಹಿನ್ನೆಲೆಯಲ್ಲಿ ಕನ್ನಡಕ್ಕೆ ಬಂದಿರುವ ಕೆಲವು ಮಾದರಿ ಪದಗಳನ್ನು ಗಮನಿಸುವುದಾದರೆ....

**ಸಂಸ್ಕೃತ ಭಾಷೆಯಿಂದ:–** ಪೃಥ್ವಿ, ರಾತ್ರಿ, ಯಾತ್ರೆ, ಸಂಧ್ಯಾ, ನದಿ, ವಿದ್ಯೆ, ಪೂರ್ವ, ಪಶ್ಚಿಮ, ಆಕಾಶ, ಈಶಾನ್ಯ, ಸಂಸ್ಥ/ ಸಂಸ್ಥೆ, ರಾಮ, ಲಕ್ಷ್ಮಣ, ಮಾತೃ, ಸಹೋದರ, ಗ್ರಹ, ವಿವಾಹ, ವಿಶೇಷ, ಚಕ್ರವರ್ತಿ, ನಕ್ಷತ್ರ, ಪಿತೃ, ದಶ, ಪಂಚಮಿತ್ರ, ಶಿರಾ, ಮುಖ, ಉತ್ತರ, ದಕ್ಷಿಣ, ಋತು, ವೇದ, ಬ್ರಾಹ್ಮಣ, ಲಗ್ನ, ಸಾಮ್ರಾಜ್ಯ, ಧರ್ಮ, ಮೋಕ್ಷ, ಹಸ್ತ, ಪಾದನೇತ್ರ, ಪಂಚಾಂಗ, ಧೃತರಾಷ್ಟ್ರ, ಕಾವೇರಿ, ಶಿವ, ವಿಷ್ಣು , ಋಷಿ, ಫಲಹಾರ ಮುಂತಾದವು

**ಆಂಗ್ಲ ಭಾಷೆಯಿಂದ:–** ರೋಡ್, ರೈಲು, ಬ್ಯಾಂಕು, ಕೋರ್ಟ್, ಲಾಯರ್, ಬೆಂಚ್, ಪೆನ್, ಡಾಕ್ಟರ್, ಪೊಲೀಸ್, ಪೋಸ್ಟ್ ಕಾರ್ಡು, ಡ್ರೈವರ್, ಟಿಕೆಟ್, ರೂಮ್, ಸ್ಕೂಲ್, ಕಾಲೇಜ್, ಫರ್ನಿಚರ್, ಯುನಿವರ್ಸಿಟಿ, ಡಿಗ್ರಿ, ಲೈಟ್, ಇನ್ ಪ್ಲಾನ್, ಆರ್ಡರ್, ಪ್ರೈಮರಿ, ಲೈಬ್ರರಿ, ನಂಬರ್, ಪಾಸ್, ಸಿನಿಮಾ, ಸೊಸೈಟಿ, ಸರ್ಟಿಫಿಕೇಟ್, ಲೀವ್, ಸರ್ಕಲ್, ಬಾಟಲ್, ರೆಕಾರ್ಡ್ ಮುಂತಾದವು.

**ಪೋರ್ಚುಗೀಸ್ ಭಾಷೆಯಿಂದ:–**ಅಲಮಾರು, ಸಾಬೂನು, ಪಾದ್ರಿ, ಮೇಜು, ಆಸ್ಪತ್ರೆ, ಬಟಾಣಿ, ಇಸ್ತ್ರಿ, ಮೇಸ್ತ್ರಿ,ಪಿಸ್ತೂಲು, ರಸೀದಿ,ವರಾಂಡ, ಕಂದೀಲು,ಲಾಟೀನೂ, ಹರಾಜು, ಪಗಾರ, ತಂಬಾಕು, ಬೊಂಬು, ಬಾವಿ ಮುಂತಾದವು.

**ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯಿಂದ:–**ಇನಾಮು, ಕಾಯಿದೆ, ಗಲೀಜು, ತಕರಾರು, ಮಸೀದಿ,ಬಂದೂಕ, ಇಲಾಖೆ, ಪಿತೂರಿ, ಹಾಜರಿ, ಖಜಾನೆ, ಮೊಕದ್ದಮೆ, ದಾವೆ, ಕಸುಬು, ದಿನಸಿ,  ಮುದ್ದಾಮ್ ಮುಂತಾದವು.

**ಹಿಂದಿ/ ಹಿಂದುಸ್ತಾನಿ ಭಾಷೆಯಿಂದ:–** ಅರ್ಜಿ, ಕಚೇರಿ, ಕಾರ್ಖಾನೆ, ಬದಲಾವಣೆ, ಚುನಾವಣೆ, ಮಂಜೂರು, ಕಾನೂನು, ಸಲಾಮು, ರೈತ, ಸರ್ಕಾರ, ಹುಕುಂ, ದರ್ಬಾರ್, ಅಸಲಿ, ನಕಲಿ, ರಸ್ತೆ, ಕುರ್ಚಿ, ಜಮೀನ್ದಾರ್, ಗುಲಾಮ, ಬಾಜಿ, ಸುಬೇದಾರ್, ದಫೇದಾರ್, ಸವಾರ, ದವಾಖಾನೆ, ಖುಜು, ಹೂಜೂರ್, ಕಾವಲ್, ಮಹಲ್, ಗುಲಾಮ ಮುಂತಾದವು.

## ವಿಭಕ್ತಿ ಪ್ರತ್ಯಯ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿಭಕ್ತಿ ಪ್ರತ್ಯಯ ಪರಿಕಲ್ಪನೆ ಕುರಿತು ಪ್ರಶ್ನೆಗಳು ಹಲವಾರು ದೃಷ್ಟಿಕೋನದಲ್ಲಿ ಕೇಳಲಾಗುತ್ತದೆ. "ನಾಮ ಪ್ರಕೃತಿಗಳ ಮುಂದೆ ಬಂದು ಅವುಗಳ ಅರ್ಥವನ್ನು ಬದಲಾಯಿಸಬಲ್ಲ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು" ಎನ್ನಬಹುದು. ಕನ್ನಡದಲ್ಲಿ ಹಳಗನ್ನಡ ಮತ್ತು ಹೊಸಗನ್ನಡ ಪ್ರತ್ಯಯದ ಸ್ಥಾನ, ಆ ಸ್ಥಾನದಲ್ಲಿ ಬಳಕೆಯಾಗುವ ಪ್ರತ್ಯಯ ಮತ್ತು ಅದರ ಕಾರಕಾರ್ಥಗಳನ್ನು ಕುರಿತ  ಪ್ರಶ್ನೆಗಳು ಬರಬಹುದು. ಅಧ್ಯಯನಕ್ಕಾಗಿ ಈ ಕೆಳಗಿನ ಕೋಷ್ಟಕವನ್ನು ಅಧ್ಯಯನ ಮಾಡುವುದು.

| ಕ್ರ.ಸಂ. | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿಪ್ರತ್ಯಯ | ಹೊಸಗನ್ನಡದ ವಿಭಕ್ತಿಪ್ರತ್ಯಯ | ಕಾರಕಾರ್ಥಗಳು | ಹೊಸಗನ್ನಡ ಪದ ರೂಪಗಳು | ಹಳಗನ್ನಡ ರೂಪಗಳು |
|---|---|---|---|---|---|---|
| 1 | ಪ್ರಥಮ ವಿಭಕ್ತಿ | ಮ್ | ಉ | ಕರ್ತ್ರಾರ್ಥ | ಸಾವಿತ್ರಿಯು | ಸಾವಿತ್ರಿಯಮ್ |
| 2 | ದ್ವಿತೀಯ ವಿಭಕ್ತಿ | ಅಂ | ಅನ್ನು | ಕರ್ಮಾರ್ಥ | ಸಾವಿತ್ರಿಯಂ | ಸಾವಿತ್ರಿಯಂ |
| 3 | ತೃತೀಯ ವಿಭಕ್ತಿ | ಇಂ | ಇಂದ | ಕರಣಾರ್ಥ | ಸಾವಿತ್ರಿಯಿಂದ | ಸಾವಿತ್ರಿಯಿಂ |
| 4 | ಚತುರ್ಥಿ ವಿಭಕ್ತಿ | ಗೆ/ಇಗೆ/ಕೆ/ಇಕ್ಕೆ | ಗೆ/ಕೆ/ಇಕ್ಕೆ | ಸಂಪ್ರದಾನ | ಸಾವಿತ್ರಿಗೆ/ಕೆ/ಇಕ್ಕೆ | ಸಾವಿತ್ರಿಂಗೆ |
| 5 | ಪಂಚಮಿ ವಿಭಕ್ತಿ | ಅತ್ತಣಿಂ | ದೆಸೆಯಿಂದ | ಅಪದಾನ | ಸಾವಿತ್ರಿಯ ದೆಸೆಯಿಂದ | ಸಾವಿತ್ರಿಯತ್ತಣಿಂ |
| 6 | ಷಷ್ಠಿ ವಿಭಕ್ತಿ | ಅ | ಅ | ಸಂಬಂಧ | ಸಾವಿತ್ರಿಯ | ಸಾವಿತಿಯ್ರ |
| 7 | ಸಪ್ತಮಿ ವಿಭಕ್ತಿ | ಒಳ್ | ಅಲ್ಲಿ | ಅಧಿಕರಣ | ಸಾವಿತ್ರಿಯಲ್ಲಿ | ಸಾವಿತ್ರಿಯೊಳ್ |
| 8 | ಸಂಬೋಧನೆ | ಆ, ಏ, ಇರಾ, ಈ | ಆ, ಏ, ಇರಾ, ಈ | ಅಭಿಮುಖೀಕರಣ (ಕರೆಯುವಿಕೆ) | ಸಾವಿತ್ರಿಯೇ | ಸಾವಿತ್ರಿಯೇ |

## ಕನ್ನಡ ಭಾಷೆಯಲ್ಲಿನ ಕೆಲವು ಪದಗಳ ಸರಿಯಾದ ರೂಪ

| ತಪ್ಪಾದ ರೂಪ | ಸರಿ ರೂಪ | ತಪ್ಪಾದ ರೂಪ | ಸರಿ ರೂಪ | ತಪ್ಪಾದ ರೂಪ | ಸರಿ ರೂಪ |
|---|---|---|---|---|---|
| ಅನವಶ್ಯಕ | ಅನಾವಶ್ಯಕ | ಜಾತ್ಯಾತೀತ | ಜಾತ್ಯತೀತ | ಗೂಢಾಚಾರ | ಗೂಢಚಾರ |
| ಅನಾನುಕೂಲ | ಅನನುಕೂಲ | ನಾಗರೀಕ | ನಾಗರಿಕ | ಕ್ರೋಢೀಕರಣ | ಕ್ರೋಡೀಕರಣ |
| ಅಪರಾತ್ರಿ | ಅಪರರಾತ್ರಿ | ಪಠ | ಪಟ | ಚತುರೋಪಾಯ | ಚತುರುಪಾಯ |
| ಅರ್ಧಾಂಗಿನಿ | ಅರ್ಧಾಂಗಿ | ಫಲಹಾರ | ಫಲಾಹಾರ | ಹಾರ್ಧಿಕ | ಹಾರ್ದಿಕ |
| ಉಚ್ಛಾರಣೆ | ಉಚ್ಚಾರಣೆ | ಪಾಶ್ಚಿಮಾತ್ಯ | ಪಾಶ್ಚಾತ್ಯ | ಮಾಂಸಹಾರಿ | ಮಾಂಸಾಹಾರಿ |
| ಉಪಹಾರ | ಉಪಾಹಾರ | ಪುತ್ಥಳಿ | ಪುತ್ತಳಿ | ಮನರಂಜನೆ | ಮನೋರಂಜನೆ |
| ಏಕಾಂಗಿ | ಏಕಾಕಿ | ಬೇಧ | ಭೇದ | ವಿದೂಷಿ | ವಿದುಷಿ |
| ಶೃತಿ | ಶ್ರುತಿ | ಶಬ್ಧ | ಶಬ್ದ | | |

## ನಾನಾರ್ಥಕ ಪದಗಳು

ಒಂದು ಪದವು ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಅರ್ಥಗಳನ್ನು ನೀಡಿದರೆ ಅದನ್ನು ನಾನಾರ್ಥಕ ಪದವೆನ್ನುವರು.

| | |
|---|---|
| ಕರ | ಕೈ, ತೆರಿಗೆ |
| ಹೊಳೆ | ಹರಿಯುವ ನೀರು/ನದಿ, ಪ್ರಕಾಶಿಸು, ನೆನಪಾಗು |
| ಬಟ್ಟೆ | ವಸ್ತ್ರ, ದಾರಿ |
| ಕವಿ | ಪದ್ಯ ರಚಿಸುವವ ಅಥವಾ ಕಾವ್ಯರಚನಾಕಾರ, ಆವರಿಸು |
| ಪಡೆ | ಸೈನ್ಯ, ಹೊಂದು |
| ಬಗೆ | ವಿಧ, ಯೋಚಿಸು |
| ಅರಿ | ತಿಳಿ, ಶತ್ರು |
| ಮುನಿ | ಕೋಪಗೊಳ್ಳು, ಋಷಿ |
| ದೊರೆ | ಅರಸ, ಸಿಗು |
| ಅರಸು | ರಾಜ, ಹುಡುಗ |
| ಸೂಳ್ | ಸರದಿ, ಸಮಯ |
| ನರ | ಮನುಷ್ಯ, ರಕ್ತನಾಳ |
| ಗುಡಿ | ದೇವಾಲಯ, ಬಾವುಟ |
| ಕಲಿ | ವೀರ/ಶೂರ, ಯುಗದ ಹೆಸರು, ಅರಿ/ತಿಳಿ |
| ಮಡಿ | ನಿರ್ಮಲ, ಸಾವು |
| ಲಘು | ಚಿಕ್ಕದು, ಹಗುರ, ಛಂದಸ್ಸಿನ ಒಂದು ಬೆಲೆಯುಳ್ಳ ಮಾತ್ರೆ |
| ತೊರೆ | ಹರಿಯುವ ನೀರು, ತ್ಯಜಿಸು |
| ಕಳೆ | ಕಾಂತಿ, ಕಡಿಮೆಯಾಗು, ನಷ್ಟ |

## ತತ್ಸಮ – ತದ್ಭವ ಪದಗಳು

| | |
|---|---|
| ಶರ್ಕರ – ಸಕ್ಕರೆ | ವೃಷಭ – ಬಸವ |
| ವಿದ್ಯೆ – ಬಿಜ್ಜೆ | ವಸತಿ – ಬಸದಿ |
| ಸ್ಥಾನ – ಠಾಣ | ಕಾರ್ಯ – ಕಜ್ಜ |
| ದೃಷ್ಟಿ – ದಿಟ್ಟಿ | ಕುಠಾರ – ಕೊಡಲಿ |
| ವ್ಯಾಪಾರಿ – ಬೇಹಾರಿ | ವಿಜ್ಞಾನ – ಬಿನ್ನಾಣ |
| ಯಜ್ಞ – ಜನ್ನ | ಸಂದೇಹ – ಸಂದೆಯ |
| ವಿಜ್ಞಾಪನೆ – ಬಿನ್ನಹ | ಶುನಕ – ಸೊಣಗ |
| ವ್ಯಯ – ಬೀಯ | ವಂಶ – ಬಂಚ |
| ವೈಶಾಖ – ಬೇಸಗೆ | ಯಶ – ಜಶ |
| ದ್ಯೂತ – ಜೂಜು | ಪುಣ್ಯ – ಹೊನ್ನ |
| ವ್ಯಸನ – ಬೆಸನ | ವೃದ್ಧ – ವಡ್ಡ |
| ಉದ್ಯೋಗ – ಉಜ್ಜುಗ | ಆಕಾಶ – ಆಗಸ |
| ತ್ರಿಪದಿ – ತ್ರಿವಟ | ಪುಸ್ತಕ – ಹೊತ್ತಿಗೆ |
| ಸಂಜೆ – ಸಂಧ್ಯಾ | ಹರಣ – ಪ್ರಾಣ |
| ಶೃಂಕಲೆ – ಸಂಕೋಲೆ | ವರ್ಣ – ಬಣ್ಣ |
| ಮನುಷ್ಯ – ಮಾನಿಸ | ಪರ್ವ – ಪಬ್ಬ |
| ತ್ಯಾಗ – ಚಾಗ | ಯಾತ್ರೆ – ಜಾತ್ರೆ |
| ಪ್ರಸಾದ – ಹಸಾದ | ಬ್ರಹ್ಮ – ಬೊಮ್ಮ |
| ವಿದ್ಯಾಧರ – ಬಿಜ್ಜೋದರ | ಕೋಕಿಲ – ಕೋಗಿಲೆ |
| ದಾತೃ – ದಾತಾರ | ಸಾಮಂತ – ಸಾವಂತ |
| ಅರ್ಕ – ಎಕ್ಕ | ಸುಧೆ – ಸೊದೆ |
| ಯೋಗಿ – ಜೋಗಿ | ಸುಖ – ಸೋಗ |

## ವ್ಯಾಕರಣಕ್ಕೆ ಸಂಬಂಧಿಸಿದಂತೆ ಮಾದರಿ ಬಹು ಆಯ್ಕೆ ಪ್ರಶ್ನೆಗಳು

1. ಕನ್ನಡ ವರ್ಣಮಾಲೆಯ ಒಟ್ಟು ಅಕ್ಷರಗಳ ಸಂಖ್ಯೆ;

ಎ) 48 ಬಿ) 47

**ಸಿ) 49** ಡಿ) 50

2. ಕೇಶಿರಾಜನ ಪ್ರಕಾರ ಕನ್ನಡ ಭಾಷೆಯಲ್ಲಿರುವ ವರ್ಣಗಳ ಸಂಖ್ಯೆ;

ಎ) 50 ಬಿ) 48

ಸಿ) 29 **ಡಿ) 47**

3. 'ಂ' 'ಃ' ಗಳನ್ನು ಹೀಗೆಂದು ಕರೆಯಲಾಗುತ್ತದೆ.

ಎ) ಸಂಧ್ಯಾಕ್ಷರ **ಬಿ) ಯೋಗವಾಹಕಗಳು**

ಸಿ) ಸ್ವರಗಳು ಡಿ) ವ್ಯಂಜನಗಳು

4. ಕನ್ನಡ ವರ್ಣ ಮಾಲೆಯ ಒಟ್ಟು ಸ್ವರಗಳ ಸಂಖ್ಯೆ;

ಎ) 14 ಬಿ) 15

**ಸಿ) 13** ಡಿ) 12

5. ರಕ್ತ ಈ ಪದದ ಕ್ತ ಎಂಬುದು.

ಎ) ಸಜಾತಿಯ ಒತ್ತಕ್ಷರ ಬಿ) ಒತ್ತಕ್ಷರ

**ಸಿ) ವಿಜಾತೀಯ ಒತ್ತಕ್ಷರ** ಡಿ) ಗುಣಿತಾಕ್ಷರ

6. ಇವುಗಳನ್ನು ಸಂಧ್ಯಾಕ್ಷರ ಎನ್ನುವರು.

ಎ) ಎ ಏ ಬಿ) ಇ ಈ

**ಸಿ) ಐ ಔ** ಡಿ) ಯಾವುದು ಅಲ್ಲ

7. ಙ, ಞ, ಣ, ನ, ಮ ಗಳನ್ನು ಹೀಗೆಂದು ಕರೆಯುತ್ತಾರೆ.

ಎ) ಕಂಠ್ಯಾಕ್ಷರಗಳು ಬಿ) ತಾಲವ್ಯಗಳು

**ಸಿ) ಅನುನಾಸಿಕಗಳು** ಡಿ) ಮಹಾಪ್ರಾಣಾಕ್ಷರಗಳು

8. ವಾಕ್ಯೋಕ್ತಿ ಬಿಡಿಸಿ ಬರೆದಾಗ.

ಎ) ವಾಕ್ಯ + ಓಕ್ತಿ **ಬಿ) ವಾಕ್ಯ + ಉಕ್ತಿ**

ಸಿ) ವಾಕ್ಯೋ + ಉಕ್ತಿ ಡಿ) ವಾಕ್ + ಉಕ್ತಿ

9. ದೇವರೇ ಕಾಪಾಡು ಇದಕ್ಕೆ ಉದಾಹರಣೆ;

ಎ) ಕ್ರಿಯಾಪದ ಬಿ) ನಾಮಪದ

**ಸಿ) ಪ್ರಕೃತಿಭಾವ** ಡಿ) ಪ್ರಕೃತಿ

10. ಪದ್ಯದ ಸಾಲುಗಳಲ್ಲಿ ಒಂದೇ ಅಕ್ಷರ ಪದೇ ಪದೇ ಪುನರಾವರ್ತನೆಯಾದರೆ ಅದನ್ನು ಹೀಗೆನ್ನುತ್ತಾರೆ.

ಎ) ಆದಿಪ್ರಾಸ ಬಿ) ಪ್ರಾಸ

**ಸಿ) ಅನುಪ್ರಾಸ** ಡಿ) ಅಂತ್ಯಪ್ರಾಸ

11. ಇವರುಗಳಿಂದ ದೇಶದ ಸ್ಥಿತಿ ಹೀಗಾಗಿದೆ ಈ ವಾಕ್ಯದಲ್ಲಿ'ಇವರು' ಎಂಬುದು

**ಎ) ಪ್ರಥಮ ಪುರುಷ ಸರ್ವನಾಮ** ಬಿ) ಉತ್ತಮ ಪುರುಷ ಸರ್ವನಾಮ

ಸಿ) ಮಧ್ಯಮ ಪುರುಷ ಸರ್ವನಾಮ ಡಿ) ಆತ್ಮಾರ್ಥಕ ಸರ್ವನಾಮ

12. ವಿಶ್ವಾಮಿತ್ರಂಗೆ ಎಂಬಲ್ಲಿರುವ ವಿಭಕ್ತಿ ಪ್ರತ್ಯಯ;

ಎ) ತೃತೀಯ ಬಿ) ಷಷ್ಠೀ

**ಸಿ) ಚತುರ್ಥಿ** ಡಿ) ಪ್ರಥಮ

13. 'ಒಳ್' ಪ್ರತ್ಯಯವು ಯಾವ ವಿಭಕ್ತಿ ಪ್ರತ್ಯಯ;

ಎ) ಪ್ರಥಮ **ಬಿ) ಸಪ್ತಮಿ**

ಸಿ) ತೃತೀಯ ಡಿ) ಪಂಚಮಿ

14. ಒಂದು ವಿಭಕ್ತಿಯ ಜಾಗದಲ್ಲಿ ಮತ್ತೊಂದು ವಿಭಕ್ತಿ ಬಳಕೆಯಾದರೆ ಹೀಗೆನ್ನುತ್ತಾರೆ.

ಎ) ಅರ್ಥ ಬದಲಾವಣೆ ಬಿ) ಪದ ಬದಲಾವಣೆ

**ಸಿ) ವಿಭಕ್ತಿ ಪಲ್ಲಟ** ಡಿ) ಕಾರಕ

15. ಪಂಚಮಿಯ ಅರ್ಥದಲ್ಲಿ ಈ ವಿಭಕ್ತಿ ಬಳಕೆಯಾಗುತ್ತದೆ.

**ಎ) ತೃತೀಯ** ಬಿ) ಪ್ರಥಮ

ಸಿ) ಷಷ್ಠೀ ಡಿ) ಸಂಬೋಧನೆ

16. ನಾಮ ಪ್ರಕೃತಿಗಳ ಮೇಲೆ ಹತ್ತುವ ಪ್ರತ್ಯಯಗಳು.

ಎ) ಅಖ್ಯಾತ ಪ್ರತ್ಯಯಗಳು **ಬಿ) ವಿಭಕ್ತಿ ಪ್ರತ್ಯಯಗಳು**

ಸಿ) ಕ್ರಿಯಾ ಪ್ರತ್ಯಯಗಳು ಡಿ) ಯಾವುದು ಅಲ್ಲ

17. ಪ್ರಥಮ ವಿಭಕ್ತಿಯ ಯಾವ ಕಾರಕವನ್ನು ಹೊಂದಿದೆ.

ಎ) ಕರ್ಮ ಬಿ) ಕರಣ

ಸಿ) ಅಪದಾನ **ಡಿ) ಕರ್ತೃ**

18. ವಿಶೇಷಣಗಳು ಯಾವುದಕ್ಕೆ ಹೇಳಲ್ಪಡುತ್ತವೆಯೋ ಅವು

ಎ) ಗುಣವಾಚಕಗಳು ಬಿ) ವಸ್ತುಗಳು

**ಸಿ) ವಿಶೇಷ್ಯಗಳು** ಡಿ) ಸ್ವಭಾವೋಕ್ತಿಗಳು

19. ಯಾವುದು ವಿಶೇಷಣ ಅಲ್ಲ

ಎ) ಹೆಬ್ಬಂಡೆ ಬಿ) ಕಾಳೋರಗ

ಸಿ) ಕರಿನೆರಳು **ಡಿ) ಚಾಮರ**

20. 'ಕಿರಿತನ' ಎಂಬುದು

**ಎ) ತದ್ಧಿತಾಂತ** ಬಿ) ಕೃದಂತ

ಸಿ) ತದ್ಧಿತ ಭಾವನಾಮ ಡಿ) ತದ್ಧಿತಾಂತವ್ಯಯ

21. 'ಇನಿಯ' ಪುಲ್ಲಿಂಗವಾದರೆ ನಪುಂಸಕ ರೂಪ.

ಎ) ಇನಿಯಳ **ಬಿ) ಇನಿದು**

ಸಿ) ಇನಿಯವರ್ ಡಿ) ಯಾವುದು ಅಲ್ಲ

22. 'ತುದಿಗಾಲು' ಈ ಪದವು ಯಾವ ಸಮಾಸಕ್ಕೆ ಉದಾಹರಣೆ

ಎ) ದ್ವಿಗುಸಮಾಸ **ಬಿ) ಅಂಶಿ ಸಮಾಸ**

ಸಿ) ಕರ್ಮಧಾರೆಯ ಸಮಾಸ ಡಿ) ಕ್ರಿಯಾ ಸಮಾಸ

23. ಉತ್ತರ ಪದ ಪ್ರಧಾನವಾಗಿ ಉಳ್ಳ ಸಮಾಸ ಯಾವುದು.

ಎ) ದ್ವಂದ್ವ ಸಮಾಸ **ಬಿ) ತತ್ಪುರುಷ ಸಮಾಸ**

ಸಿ) ಕ್ರಿಯಾ ಸಮಾಸ ಡಿ) ಬಹುವ್ರೀಹಿ ಸಮಾಸ

24. ಇದು ಕರ್ಮಧಾರೆಯ ಸಮಾಸ.

**ಎ) ಹೆಮ್ಮಾವು** ಬಿ) ಕೆಳದುಟಿ

ಸಿ) ಡೊಂಕುಗಾಲು ಡಿ) ಮುಕ್ಕಣ್ಣು

25. ರಾಮಲಕ್ಷ್ಮಣಭರತರು ವಿಗ್ರಹ ವಾಕ್ಯ ಮಾಡಿ ಬರೆಯಿರಿ.

ಎ) ರಾಮ+ಲಕ್ಷಣ+ಭರತ **ಬಿ) ರಾಮನು+ಲಕ್ಷ್ಮಣನೂ+ಭರತನೂ**

ಸಿ) ರಾಮಲಕ್ಷ್ಮಣ+ಭರತ ಡಿ) ಯಾವುದು ಅಲ್ಲ

26. ಏಕೋನ ಇದು ಈ ಸಂಧಿ ಪದವಾಗಿದೆ.

ಎ) ವೃದ್ಧಿಸಂಧಿ ಬಿ) ಯಣ್‌ಸಂಧಿ

**ಸಿ) ಗುಣಸಂಧಿ** ಡಿ) ಲೋಪಸಂಧಿ

27. ಇದು ಯಣ್‌ಸಂಧಿಗೆ ಉದಾಹರಣೆ.

ಎ) ಗುಪ್ತಚಾರ **ಬಿ) ಗತ್ಯಂತರ**

ಸಿ) ಮಹರ್ಷಿ ಡಿ) ಮನಶ್ಯುದ್ಧಿ

28. ಇದು ದಿಗ್ವಾಚಕ.

ಎ) ನಡುಗಲು **ಬಿ) ಬಡಗಲು**

ಸಿ) ಕುಡುಗಲು ಡಿ) ತೆಕಲು

29. ತೊಡುವುದುರ ಭಾವನಾಮ.

ಎ) ತೊಡೆ ಬಿ) ತಾಟು

**ಸಿ) ತೊಡುಗೆ** ಡಿ) ತೋಟ

30. 'ಕಂಬಾರ' ಎಂಬ ಪದದಲ್ಲಿರುವ ತದ್ಧಿತ ಪ್ರತ್ಯಯ.

ಎ) ರ **ಬಿ) ಆರ**

ಸಿ) ಬಾರ ಡಿ) ಕಂಬ

31. ಕನ್ನಡದಲ್ಲಿರುವ ವಚನಗಳ ಸಂಖ್ಯೆ.

ಎ) 3 ಬಿ) 4

ಸಿ) 5 **ಡಿ) 2**

32. ಇದು ಕ್ರಿಯಾಧಾತು

ಎ) ರಾಮ ಬಿ) ಲಂಕೆ

**ಸಿ) ನೋಡು** ಡಿ) ಕೇಡು

33. 'ಹೆಂಗಸರು' ಎಂಬ ಪದದಲ್ಲಿರುವ ಬಹುವಚನ ಸೂಚಕ.

**ಎ) ಅರು** ಬಿ) ಮೂರು

ಸಿ) ಸರು ಡಿ) ಯಾವುದು ಅಲ್ಲ

34. 'ತಂಗಿ ಬಂದಳು' ಎಂಬುದು.

ಎ) ಸಕರ್ಮಕ ವಾಕ್ಯ ಬಿ) ಸಹಜಧಾತು

ಸಿ) ಸಾಧಿತ ವಾಕ್ಯ **ಡಿ) ಅಕರ್ಮಕ ವಾಕ್ಯ**

35. 'ತಿಂದನು' ಎಂಬುದರ ಭವಿಷ್ಯತ್ ಕಾಲ ರೂಪ.

**ಎ) ತಿನ್ನುವನು** ಬಿ) ತಿನ್ನುತ್ತಿದ್ದಾನೆ

ಸಿ) ತಿನ್ನು ಡಿ) ಯಾವುದು ಅಲ್ಲ

36. ಇದು ಅನುಕರಣಾವ್ಯಯ.

ಎ) ಬೇಗ ಬೇಗ ಬಿ) ತರುಲತೆ

ಸಿ) ಮನೆ ಮಠ **ಡಿ) ಗುಡು ಗುಡು**

37. ಪೂರ್ವ ಪದವು ಸಂಖ್ಯಾವಾಚಕವಾಗಿ ಉಳ್ಳ ಸಮಾಸ.

ಎ) ದ್ವಂದ್ವ ಸಮಾಸ ಬಿ) ಕ್ರಿಯಾ ಸಮಾಸ

**ಸಿ) ದ್ವಿಗು ಸಮಾಸ** ಡಿ) ಅರಿ ಸಮಾಸ

38. ಭೀಮನು ಕೀಚಕನನ್ನು ಕೊಂದನು ಇಲ್ಲಿ ಇರಬೇಕಾದ ಲೇಖನ ಚಿಹ್ನೆ.

ಎ) ಅರ್ಧ ವಿರಾಮ ಬಿ) ಅಲ್ಪ ವಿರಾಮ

**ಸಿ) ಪೂರ್ಣ ವಿರಾಮ** ಡಿ) ಉದ್ಧರಣ

39. 'ಆಹಾ ಎಷ್ಟು ಮನೋಹರವಾಗಿದೆ' ಎಂಬಲ್ಲಿರಬೇಕಾದ ಲೇಖನ ಚಿಹ್ನೆ.

ಎ) ಉದ್ಧರಣ	ಬಿ) ಅಲ್ಪವಿರಾಮ

**ಸಿ) ಆಶ್ಚರ್ಯ ಸೂಚಕ**	ಡಿ) ಯಾವುದು ಅಲ್ಲ

40. ತಮ್ಮನಿಗೆ ಬರೆಯುವ ಪತ್ರವನ್ನು ಹೀಗೆನ್ನುತ್ತಾರೆ.

ಎ) ವ್ಯಾವಹಾರಿಕ ಪತ್ರ	ಬಿ) ಸಾಂದರ್ಭಿಕ ಪತ್ರ

**ಸಿ) ಖಾಸಗಿ ಪತ್ರ**	ಡಿ) ಯಾವುದು ಅಲ್ಲ

41. ಪತ್ರದ ಮುಖ್ಯ ಭಾಗಕ್ಕೆ ಏನೆಂದು ಕರೆಯುತ್ತಾರೆ.

ಎ) ಪತ್ರದ ಆರಂಭ	**ಬಿ) ಪತ್ರದ ಒಡಲು**

ಸಿ) ಪತ್ರದ ಒಕ್ಕಣೆ	ಡಿ) ಪತ್ರದ ಮುಕ್ತಾಯ

42. ಸಂತೆ ಸೇರುವ ಮೊದಲೆ ______________ ಸೇರಿದ್ದರು ಈ ಗಾದೆಯನ್ನು ಪೂರ್ಣಗೊಳಿಸಿ.

ಎ) ಕೊಳ್ಳುವವರು	**ಬಿ) ಗಂಟುಕಳ್ಳರು**

ಸಿ) ಮಾರುವವರು	ಡಿ) ದಳ್ಳಾಳಿಗಳು

43. ವಿದ್ಯೆಗೆ ______________ ವೇ ಭೂಷಣ ಈ ಗಾದೆಯನ್ನು ಪೂರ್ಣಗೊಳಿಸಿ.

ಎ) ಆಭರಣ	**ಬಿ) ವಿನಯ**

ಸಿ) ವಸ್ತ್ರ	ಡಿ) ನಡತೆ

44. ಅಂಕೆಯಿಲ್ಲದ ಕಪಿ ______________ ಮಾಡಿತು.

ಎ) ಮುಗಿಲಿಗೆ ನೆಗೆಯಿತು	ಬಿ) ಊರು ಸುಟ್ಟಿತು

ಸಿ) ಆಕಾಶಕ್ಕೆ ನೆಗೆಯಿತು	**ಡಿ) ಲಂಕೆ ಸುಟ್ಟಿತು**

45. ಗುಂಪಿಗೆ ಸೇರದೆ ಇರುವ ಪದವನ್ನು ಗುರುತಿಸಿ.

**ಎ) ಆದೇಶಸಂಧಿ**	ಬಿ) ಗುಣಸಂಧಿ

ಸಿ) ವೃದ್ಧಿಸಂಧಿ	ಡಿ) ಯಣ್‌ಸಂಧಿ

46. "ಸಮ್ಮತಿಯನ್ನು" ಸೂಚಿಸುವ ಪದ

ಎ) ಅವನತಿ	**ಬಿ) ಒಪ್ಪಿಗೆ**

ಸಿ) ಅಸಮ್ಮತಿ	ಡಿ) ಯಾವುದು ಅಲ್ಲ

47. ಹಳೆಯ ಕಟ್ಟಡವನ್ನು ಮತ್ತೆ ಮೊದಲನೆ ಸ್ಥಿತಿಗೆ ತರುವುದು.

ಎ) ಪುನರ್ರಚನೆ	**ಬಿ) ಜೀರ್ಣೋದ್ಧಾರ**

ಸಿ) ಉದ್ಧಾರ	ಡಿ) ಸಂರಚನೆ

48. 'ಅಭೇದ್ಯ' ಈ ಪದದ ವಿರುದ್ಧ ಪದ

ಎ) ವಿಬೇದ್ಯ	ಬಿ) ನಿರ್ಭೇದ್ಯ

**ಸಿ) ಭೇದ್ಯ**	ಡಿ) ಅನ್ಯಭೇದ್ಯ

49. 'ದುರುಪಯೋಗ' ಪದದ ವಿರುದ್ಧ ಪದ

ಎ) ಅನುಪಯೋಗ	**ಬಿ) ಸದುಪಯೋಗ**

ಸಿ) ಉಪಯೋಗ	ಡಿ) ವಿಯೋಗ

50. 'ಕರ್ಕಶ' ಇದರ ವಿರುದ್ಧ ಪದ;

ಎ) ಬಿಸಿ	**ಬಿ) ಇಂಪು**

ಸಿ) ಕಂಪು	ಡಿ) ತಂಪು

## ಅನ್ಯದೇಶೀಯ / ಅನ್ಯದೇಶ್ಯ / ಪಾರಿಭಾಷಿಕ ಪದಗಳು

### ಪ್ರಶ್ನಾ ಉದಾಹರಣೆಗಳು

51. 'ಸಾಬೂನು' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.

ಎ) ಆಂಗ್ಲ ಭಾಷೆ ಬಿ) ಸಂಸ್ಕೃತ ಭಾಷೆ
**ಸಿ) ಪೋರ್ಚುಗೀಸ್** ಡಿ) ಅರಾಬಿಕ್

52. 'ಕಾಗದ' ಈ ಪದವು ಈ ಭಾಷೆಯಿಂದ ಬಂದಿದೆ:

ಎ) ಇಂಗ್ಲಿಷ್ ಬಿ) ಫ್ರೆಂಚ್
**ಸಿ) ಹಿಂದೂಸ್ಥಾನಿ** ಡಿ) ಪೋರ್ಚುಗೀಸ್

53. ಇವುಗಳಲ್ಲಿರುವ ಅನ್ಯದೇಶ್ಯ ಪದ:

ಎ) ಮೊಗ ಬಿ) ಮನೆ
ಸಿ) ನೀರು **ಡಿ) ಮೇಜು**

54. 'ಆಮದು' ಪದವು ಈ ಭಾಷೆಯಾಗಿದೆ

**ಎ) ಪಾರ್ಸಿ** ಬಿ) ಫ್ರೆಂಚ್
ಸಿ) ಪೋರ್ಚುಗೀಸ್ ಡಿ) ಹಿಂದೂಸ್ಥಾನಿ

55. 'ರುಜು' ಪದವು ಈ ಭಾಷೆಯ ಪದವಾಗಿದೆ.

ಎ) ಇಂಗ್ಲಿಷ್ ಬಿ) ಫ್ರೆಂಚ್
**ಸಿ) ಉರ್ದು** ಡಿ) ಪೋರ್ಚುಗೀಸ್

## ತತ್ಸಮ – ತದ್ಭವ

56. 'ಚಾಗ' ಪದದ ತತ್ಸಮ ರೂಪ:

ಎ) ಜಾಗ **ಬಿ) ತ್ಯಾಗ**
ಸಿ) ಛಾಗ ಡಿ) ಚಾಫ

57. 'ಸನ್ನೆ' ಪದದ ತತ್ಸಮ ರೂಪ :

**ಎ) ಸಂಜ್ಞಾ** ಬಿ) ಸೊನ್ನೆ
ಸಿ) ಶೂನ್ಯ ಡಿ) ಸಂಜೆ

58. 'ಉದ್ಯೋಗ' ಪದದ ತದ್ಭವ ರೂಪ :

ಎ) ಕಾಯಕ ಬಿ) ಕೆಲಸ
ಸಿ) ಉದ್ಯುಗ **ಡಿ) ಉಜ್ಜುಗ**

59. 'ರಾಜ' ಪದದ ತದ್ಭವ ರೂಪ:

ಎ) ಅರಸ **ಬಿ) ರಾಯ**
ಸಿ) ಪ್ರಭು ಡಿ) ವಿಭು

60. 'ಆಕಾಶ' ಪದದ ತದ್ಭವ ರೂಪ:

ಎ) ಗಗನ ಬಿ) ಬಾನು
**ಸಿ) ಆಗಸ** ಡಿ) ಅಗಸ

## ಸಂಧಿಗಳು

61. 'ವಧೂಪೇತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

ಎ) ಲೋಪಸಂಧಿ ಬಿ) ವೃದ್ಧಿಸಂಧಿ
ಸಿ) ಗುಣಸಂಧಿ **ಡಿ) ಸವರ್ಣದೀರ್ಘಸಂಧಿ**

62. 'ಷಣ್ಮುಖ' ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ:

ಎ) ಷನ್+ಮುಖ | **ಬಿ) ಷಟ್+ಮುಖ**
ಸಿ) ಷಡ್+ಮುಖ | ಡಿ) ಷಣ್+ಮುಖ

63. 'ಜಗಜ್ಜ್ಯೋತಿ' ಪದವು ಈ ಸಂಧಿಪದವಾಗಿದೆ.

**ಎ) ಶ್ಚುತ್ವಸಂಧಿ** | ಬಿ) ಜಶ್ತ್ವಸಂಧಿ
ಸಿ) ಗುಣಸಂಧಿ | ಡಿ) ವೃದ್ಧಿಸಂದಿ

64. 'ವಾಗ್ದೇವಿ' ಪದವು ಈ ಸಂಧಿಪದವಾಗಿದೆ:

ಎ) ಆದೇಶಸಂಧಿ | ಬಿ) ಲೋಪಸಂಧಿ
**ಸಿ) ಜಶ್ತ್ವಸಂಧಿ** | ಡಿ) ಅನುನಾಸಿಕಸಂಧಿ

65. 'ಪಿತ್ರಾರ್ಜಿತ' ಪದವು ಈ ಸಂಧಿಪದವಾಗಿದೆ.

ಎ) ಅನುನಾಸಿಕ ಸಂಧಿ | **ಬಿ) ಯಣ್‌ಸಂಧಿ**
ಸಿ) ವೃದ್ಧಿಸಂಧಿ | ಡಿ) ಗುಣಸಂಧಿ

## ನಾಮಪದಗಳು

66. 'ವ್ಯಾಪಾರಿ' ಪದವು ಈ ನಾಮಪದದ ವಿಧವಾಗಿದೆ:

ಎ) ರೂಢನಾಮ | ಬಿ) ಅಂಕಿತನಾಮ
**ಸಿ) ಅನ್ವರ್ಥನಾಮ** | ಡಿ) ಗುಣನಾಮ

67. "**ಅಷ್ಟು** ಕಲ್ಲುಗಳು ಇವೆ" ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಈ ನಾಮ ಪ್ರಕೃತಿಯ ವಿಧವಾಗಿದೆ.

ಎ) ಸಂಖ್ಯಾವಾಚಕ | ಬಿ) ಸಂಖ್ಯೇಯ ವಾಚಕ
ಸಿ) ಪ್ರಕಾರ ವಾಚಕ | **ಡಿ) ಪರಿಮಾಣ ವಾಚಕ**

68. 'ಈಶಾನ್ಯ' ಪದವು ಈ ನಾಮವಾಚಕವಾಗಿದೆ.

ಎ) ಸಂಖ್ಯಾವಾಚಕ | ಬಿ) ಪ್ರಕಾರವಾಚಕ
**ಸಿ) ದಿಗ್ವಾಚಕ** | ಡಿ) ಪರಿಮಾಣ ವಾಚಕ

69. 'ಎಂತಹ' ಪದವು ಈ ನಾಮಪದ ವಾಚಕವಾಗಿದೆ.

**ಎ) ಪ್ರಕಾರವಾಚಕ** | ಬಿ) ದಿಗ್ವಾಚಕ
ಸಿ) ಪರಿಮಾಣವಾಚಕ | ಡಿ) ಪ್ರಶ್ನಾವಾಚಕ

70. 'ಮೂರನೆಯ' ಪದವು ಈ ನಾಮಪದದ ವಿಧವಾಗಿದೆ

ಎ) ಸಂಖ್ಯಾವಾಚಕ ನಾಮಪದ | ಬಿ) ದಿಗ್ವಾಚಕ ನಾಮಪದ
**ಸಿ) ಸಂಖ್ಯೇಯವಾಚಕ ನಾಮಪದ** | ಡಿ) ಪ್ರಕಾರವಾಚಕ ನಾಮಪದ

## ವಿಭಕ್ತಿ ಪ್ರತ್ಯಯಗಳು

71. 'ಸಂಶಯಮಂಬಿಟ್ಟೆನು' ಈ ವಾಕ್ಯದಲ್ಲಿ ಅಡಿ ಗೆರೆ ಎಳೆದಿರುವ ಪದದ ವಿಭಕ್ತಿ.

**ಎ) ಪ್ರಥಮಾ** | ಬಿ) ದ್ವಿತೀಯಾ
ಸಿ) ತೃತೀಯ | ಡಿ) ಚತುರ್ಥಿ

72. ಕರಣಾರ್ಥವಿರುವ ವಿಭಕ್ತಿ

ಎ) ಪ್ರಥಮಾ | ಬಿ) ದ್ವಿತೀಯಾ
**ಸಿ) ತೃತೀಯ** | ಡಿ) ಚತುರ್ಥಿ

73. 'ಕೆಲದೊಳ್' ಪದವು ಈ ವಿಭಕ್ತಿಯಲ್ಲಿದೆ

ಎ) ಚತುರ್ಥಿ | ಬಿ) ಪಂಚಮಿ

ಸಿ) ಷಷ್ಠೀ | **ಡಿ) ಸಪ್ತಮಿ**

74. **ಅಪಾದಾನ**ಕಾರಕಾರ್ಥ ಸಂಬಂಧವಿರುವ ವಿಭಕ್ತಿ ಎಂದರೆ,

ಎ) ಚತುರ್ಥಿ | **ಬಿ) ಪಂಚಮಿ**

ಸಿ) ಷಷ್ಠೀ | ಡಿ) ಸಪ್ತಮಿ

75. '**ಕೌ**ರವನಿಂದ' ಈ ಪದದಲ್ಲಿರುವ ವಿಭಕ್ತಿಯ ಕಾರಕಾರ್ಥ:

ಎ) ಕರ್ತೃಕಾರಕ | **ಬಿ) ಕರಣಾರ್ಥ /ಸಾಧನಾರ್ಥ**

ಸಿ) ಸಂಪ್ರದಾನ/ಕೊಡುವಿಕೆ | ಡಿ) ಸಂಬಂಧ ಕಾರಕ

76. ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ ಇದಾಗಿದೆ.

**ಎ) ಅತ್ತಣಿಂ/ಅತ್ತಣಿಂದಂ** | ಬಿ) ದೆಸೆಯಿಂದ

ಸಿ) ಒಳ್ | ಡಿ) ಅ

77. 'ಎಲೈ <u>ಪುರುಷನೇ'</u> ಈ ವಾಕ್ಯದಲ್ಲಿ ಗೆರೆ ಎಳೆದ ಪದವು ಈ ವಿಭಕ್ತಿಯಲ್ಲಿದೆ:

ಎ) ಸಪ್ತಮೀ | **ಬಿ) ಸಂಬೋಧನಾ**

ಸಿ) ಷಷ್ಠೀ | ಡಿ) ಪಂಚಮೀ

78. 'ಮಗುವು <u>ಹಾಡಿತು</u>' ಈ ವಾಕ್ಯದಲ್ಲಿ ಅಡಿಗೆರೆ ಹಾಕಿದ ಕ್ರಿಯಾಪದದ ಧಾತು ರೂಪ.

ಎ) ತುಡಿ | **ಬಿ) ಹಾಡು**

ಸಿ) ಹಾತು | ಡಿ) ಹಾಡಿ

79. 'ಮಕ್ಕಳು ಹಣ್ಣನ್ನು <u>ತಿಂದರು</u>' ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಕ್ರಿಯಾಪದದ ಧಾತು :

ಎ) ತಿಂದ | ಬಿ) ದರು

**ಸಿ) ತಿನ್ನು** | ಡಿ) ದಂತಿ

80. 'ಅವನು ಊರಿಗೆ <u>ಹೋಗನು</u>' ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಕ್ರಿಯಾಪದ ರೂಪ"

**ಎ) ನಿಷೇಧಾರ್ಥಕ** | ಬಿ) ಸಂಭಾವನಾರ್ಥಕ

ಸಿ) ವಿಧ್ಯರ್ಥಕ | ಡಿ) ಕ್ರಿಯಾರ್ಥಕ

## ವ್ಯಾಕರಣಕ್ಕೆ ಸಂಬಂಧಿಸಿದಂತೆ ಮಾದರಿ ಬಹು ಆಯ್ಕೆ ಪ್ರಶ್ನೆಗಳು

81. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು.

**ಎ. ದೀರ್ಘಸ್ವರ** | ಬಿ. ಪ್ಲುತ

ಸಿ. ಹ್ರಸ್ವಸ್ವರ | ಡಿ. ಸಪ್ತಸ್ವರ

82. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಸಂಖ್ಯೆ.

ಎ. ಹದಿಮೂರು | ಬಿ. ಮೂವತ್ನಾಲ್ಕು

**ಸಿ. ಇಪ್ಪತ್ತೈದು** | ಡಿ. ಒಂಭತ್ತು

83. 'ಅನುಭವ' ಪದದಲ್ಲಿರುವ ಅವರ್ಗೀಯ ವ್ಯಂಜನಾಕ್ಷರ.

ಎ. ಅ | ಬಿ. ನ

ಸಿ. ಭ | **ಡಿ. ವ**

84. "ಮೈದೋರು" ಪದದಲ್ಲಿ ಆಗಿರುವ ಸಂಧಿ.

ಎ. ಲೋಪಸಂಧಿ | **ಬಿ. ಆದೇಶಸಂಧಿ**

ಸಿ. ಆಗಮಸಂಧಿ | ಡಿ. ಜಶ್ತ್ವಸಂಧಿ

85. 'ಮಹೇಶ' ಪದದಲ್ಲಿ ಆಗಿರುವ ಸಂಧಿ.

ಎ. ಆಗಮಸಂಧಿ | ಬಿ. ಆದೇಶಸಂಧಿ
ಸಿ. ಲೋಪಸಂಧಿ | **ಡಿ. ಗುಣಸಂಧಿ**

86. "ಏಕೈಕ" ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ. ಸವರ್ಣದೀರ್ಘ ಸಂಧಿ | **ಬಿ. ವೃದ್ಧಿಸಂಧಿ**
ಸಿ. ಗುಣಸಂಧಿ | ಡಿ. ಗುಣ

87. "ದಿಗ್ಭ್ರಮೆ" ಇದು ಈ ಸಂಧಿಗೆ ಉದಾಹರಣೆಯಾಗಿದೆ.

ಎ. ಗುಣಸಂಧಿ | **ಬಿ. ಜಶ್ತ್ವಸಂಧಿ**
ಸಿ. ಆದೇಶಸಂಧಿ | ಡಿ. ಲೋಪಸಂಧಿ

88. 'ಉನ್ಮಾದ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ. ಗುಣಸಂಧಿ | ಬಿ. ಲೋಪಸಂಧಿ
ಸಿ. ಸವರ್ಣದೀರ್ಘಸಂಧಿ | **ಡಿ. ಅನುನಾಸಿಕಸಂಧಿ**

89. "ಪಾರ್ಥಭೀಮರು" ಪದದಲ್ಲಿ ಏರ್ಪಟ್ಟಿರುವ ಸಮಾಸ.

**ಎ. ದ್ವಂದ್ವ ಸಮಾಸ** | ಬಿ. ಕ್ರಿಯಾ ಸಮಾಸ
ಸಿ. ತತ್ಪುರುಷ ಸಮಾಸ | ಡಿ. ಗಮಕ ಸಮಾಸ

90. 'ತಂಗಾಳಿ' ಪದವು ಈ ಸಮಾಸಕ್ಕೆ ಉದಾಹರಣೆ.

ಎ. ದ್ವಿಗು ಸಮಾಸ | ಬಿ. ಕ್ರಿಯಾ ಸಮಾಸ
**ಸಿ. ತತ್ಪುರುಷ ಸಮಾಸ** | ಡಿ. ಗಮಕ ಸಮಾಸ

91. "ಅವನು ವಿದ್ಯೆಯಲ್ಲಿ ಬಲು ಜಾಣ" ಈ ವಾಕ್ಯದಲ್ಲಿರುವ ಸರ್ವನಾಮ ಪದ"

**ಎ. ಅವನು** | ಬಿ. ವಿದ್ಯೆ
ಸಿ. ಬಲು | ಡಿ. ಜಾಣ

92. 'ತಾವು ಕಡಿಮೆ ಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡಿದ್ದೀರಿ' ಈ ವಾಕ್ಯದಲ್ಲಿ **'ತಾವು'** ಎಂಬುದು ಸರ್ವನಾಮದ ಈ ವಿಭಾಗಕ್ಕೆ ಸೇರಿದೆ.

ಎ. ಪ್ರಶ್ನಾರ್ಥಕ | ಬಿ. ನಿರ್ದೇಶನಾತ್ಮಕ
ಸಿ. ಪುರುಷಾರ್ಥಕ | **ಡಿ. ಆತ್ಮಾರ್ಥಕ**

93. 'ಹನ್ನೆರೆಡು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.

ಎ. ಗುಣವಾಚಕ | ಬಿ. **ಸಂಖ್ಯಾವಾಚಕ**
ಸಿ. ಸಂಖ್ಯೇಯ ವಾಚಕ | ಡಿ. ಪರಿಮಾಣವಾಚಕ

94. 'ಮೂಡಣ' ಈ ಪದದಲ್ಲಿರುವ ವ್ಯಾಕರಣಾಂಶ.

ಎ. ಪಡೆನುಡಿ | ಬಿ. ಗುಣವಾಚಕ
**ಸಿ. ದಿಗ್ವಾಚಕ** | ಡಿ. ಸರ್ವನಾಮ

95. 'ಸಮರದೊಳ್' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ.

ಎ. ಪ್ರಥಮಾ | ಬಿ. ಚತುರ್ಥಿ
ಸಿ. ಷಷ್ಠೀ | **ಡಿ. ಸಪ್ತಮೀ**

96. ಪಂಚಮೀ ವಿಭಕ್ತಿಯ ಕಾರಕಾರ್ಥ.

ಎ. ಸಂಪ್ರದಾನ | **ಬಿ. ಅಪಾದಾನ**
ಸಿ. ಸಮಾಧಾನ | ಡಿ. ಅಧಿಕರಣ

97. 'ಅಹುದು' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.

ಎ. ಸಾಮಾನ್ಯಾವ್ಯಯ | ಬಿ. ಸಂಬಂಧಾರ್ಥಕಾವ್ಯಯ
**ಸಿ. ಕ್ರಿಯಾರ್ಥಕಾವ್ಯಯ** | ಡಿ. ಭಾವಸೂಚಕಾವ್ಯಯ

98. 'ತಟ್ಟನೆ' ಪದವು ಈ ಅವ್ಯಯಕ್ಕೆ ಸೇರಿದೆ.

ಎ. ಕ್ರಿಯಾರ್ಥಕಾವ್ಯಯ **ಬಿ. ಸಾಮಾನ್ಯಾವ್ಯಯ**

ಸಿ. ಭಾವಸೂಚಕಾವ್ಯಯ ಡಿ. ಅವಧಾರಣಾರ್ಥಕಾವ್ಯಯ

99. 'ಬರೆ' ಈ ಪದದ ವಿಧ್ಯರ್ಥಕ ರೂಪ.

ಎ. ಬರೆದಾನು ಬಿ. ಬರೆಯನು

ಸಿ. ಬರೆಯಿತು **ಡಿ. ಬರೆಯಲಿ**

100.ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆಯಾದ ಪದ.

ಎ. ಹಾಡಲಿ ಬಿ. ಹಾಡಿಯಾನು

**ಸಿ. ಹಾಡನು** ಡಿ. ಹಾಡುವನು

101. 'ಪ್ರೀತಿಯ ಹಣತೆಯ ಹಚ್ಚೋಣ' ಈವಾಕ್ಯದಲ್ಲಿಯ ಕ್ರಿಯಾ ಪದದ ರೂಪ.

**ಎ. ಸಂಭಾವನಾರ್ಥಕ ರೂಪ** ಬಿ. ನಿಷೇಧಾರ್ಥಕ ರೂಪ

ಸಿ. ವಿಧ್ಯರ್ಥಕ ರೂಪ ಡಿ. ಆತ್ಮಾರ್ಥಕ ರೂಪ

102.'ಬಿದ್ದರು' ಪದದಲ್ಲಿರುವ ಧಾತು.

ಎ. ಬಿದ್ದ ಬಿ. ಬೀದ

**ಸಿ. ಬೀಳು** ಡಿ. ದರು

103. 'ವಂಶ' ಪದದ ತದ್ಭವ ರೂಪ.

ಎ. ವಂಷ ಬಿ. ವಂಜ

**ಸಿ. ಬಂಚ** ಡಿ. ವಾಂಸ

104.'ಯಜ್ಞ' ಪದದ ತದ್ಭವ ರೂಪ.

**ಎ. ಜನ್ನ** ಬಿ. ಯಜನ

ಸಿ. ಜನನ ಡಿ. ಯಾಜನ

105.'ಕುಠಾರ' ಪದದ ತದ್ಭವ ರೂಪ.

ಎ. ಕುಟೀರ **ಬಿ. ಕೊಡಲಿ**

ಸಿ. ಕಣ ಡಿ. ಕಾತುರ

106.ಇವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆಯಾದ ಪದ.

**ಎ. ಮೊಟ್ಟಮೊದಲು** ಬಿ. ಹಾಲುಜೇನು

ಸಿ. ಕೆನೆ ಮೊಸರು ಡಿ. ಪಟ ಪಟ

107. 'ಥಳ ಥಳ' ಪದವು ಈ ವ್ಯಾಕರಣಕ್ಕೆ ಸೇರಿದೆ.

ಎ. ದ್ವಿರುಕ್ತಿ **ಬಿ. ಅನುಕರಣಾವ್ಯಯ**

ಸಿ. ನುಡಿಗಟ್ಟು ಡಿ. ಜೋಡುನುಡಿ

108.'ಸತಿಪತಿ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.

**ಎ. ಜೋಡುನುಡಿ** ಬಿ. ದ್ವಿರುಕ್ತಿ

ಸಿ. ಅನುಕರಣಾವ್ಯಯ ಡಿ. ನುಡಿಗಟ್ಟು

109.'ಕಂಗೆಡು' ಪದವನ್ನು ಬಿಡಿಸಿ ಬರೆದಾಗ ಬರುವ ರೂಪ.

ಎ. ಕಣ್ಣು + ಕೆಡು **ಬಿ. ಕಣ್ಣಿನಿಂದ + ಕೆಡು**

ಸಿ. ಕಣ್ಣಿನಿಂದ + ಗೆಡು ಡಿ. ಕಣ್ಣಿನಲ್ಲಿ + ಕೆಡು

110.'ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದಾಗ ಗುರುಗಳು ಬೆನ್ನು ತಟ್ಟಿದರು' ಈ ವಾಕ್ಯದಲ್ಲಿ 'ಬೆನ್ನುತಟ್ಟು' ಎಂಬ ನುಡಿಗಟ್ಟಿನ ಅರ್ಥ.

ಎ. ದ್ವೇಷ ಸಾಧಿಸು **ಬಿ. ಪ್ರೋತ್ಸಾಹಿಸು**

ಸಿ. ಸಮಯ ಸಾಧಿಸು ಡಿ. ಮೋಸಮಾಡು

111. 'ಕಾಯಕವೇ ಕೈಲಾಸ' ಈ ವಾಕ್ಯದಲ್ಲಿ 'ಕಾಯಕ' ಎಂಬ ಪದದ ಅರ್ಥ.

ಎ. ದೇಹ | ಬಿ. ಗುರು
ಸಿ. ಕಾಗೆ | **ಡಿ. ಕೆಲಸ**

112. ಕೈಕೆಸರಾದರೆ: ------------ ಈ ಗಾದೆಯ ಪೂರ್ಣ ರೂಪವಿದು.

ಎ. ಹಾಲು ಮೊಸರು | ಬಿ. ಕೆನೆ ಮೊಸರು
**ಸಿ. ಬಾಯಿ ಮೊಸರು** | ಡಿ. ಕಾಲು ಮೊಸರು

113. ಮಾತ್ರಾಗಣ ಛಂದಸ್ಸಿನ 'ಭಾಮಿನಿಷಟ್ಪದಿ;ಯ ಒಂದು ಪದ್ಯದಲ್ಲಿ ಬರುವ ಒಟ್ಟು ಮಾತ್ರಗಳ ಸಂಖ್ಯೆ.

**ಎ. 102** | ಬಿ. 51
ಸಿ. 144 | ಡಿ. 32

114. ಕೆಳಗಿನವುಗಳಲ್ಲಿ ಇದು ಅರ್ಥಾಲಂಕಾರಕ್ಕೆ ಸೇರಿದೆ.

ಎ. ಚಿತ್ರಕವಿತ್ವ | **ಬಿ. ಉಪಮಾ**
ಸಿ. ಯಮಕ | ಡಿ. ಅನುಪ್ರಾಸ

115. ತಂದೆಗೆ ಪತ್ರ ಬರೆಯುವಾಗ ಪ್ರಾರಂಭದ ಸಂಬೋಧನೆ ಹೀಗಿರುತ್ತದೆ.

**ಎ. ತೀರ್ಥರೂಪರಾದ** | ಬಿ. ಮಾನ್ಯರೇ,
ಸಿ. ಮಾತೃಶ್ರೀಯವರಿಗೆ | ಡಿ. ಪೂಜ್ಯ ಗುರುಗಳಿಗೆ

116. 'ನ, ಜ, ಭ, ಜ, ಜ, ಜ, ರ' ಗಣ ವಿನ್ಯಾಸವಿರುವ ಅಕ್ಷರಗಣ ಛಂದಸ್ಸು.

**ಎ. ಚಂಪಕ ಮಾಲಾವೃತ್ತ** | ಬಿ. ಉತ್ಪಲಮಾಲಾವೃತ್ತ
ಸಿ. ಸ್ರಗ್ಧರಾ ವೃತ್ತ | ಡಿ. ಮಹಾಸ್ರಗ್ಧರಾ ವೃತ್ತ

117. ಕೊಟ್ಟಿರುವ ಪದಗಳಲ್ಲಿ "ಪೋರ್ಚುಗೀಸ್" ಭಾಷೆಯಿಂದ ಬಂದ ಪದ.

ಎ. ಅಮಾನತು | ಬಿ. ಇನಾಮು
**ಸಿ. ಸಾಬೂನು** | ಡಿ. ತಕರಾರು

118. ಶುದ್ಧ ಭಾಷಾ ಪ್ರಯೋಗದಿಂದ ಕೂಡಿದ ಪದವಿದು.

**ಎ. ಕಾರ್ರ್ಯಾಗಾರ** | ಬಿ. ಕಾರ್ಯಗಾರ
ಸಿ. ಕಾರ್ಯಗರ | ಡಿ. ಕರ್ಯಾಗಾರ

119. 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಪಡೆದ ಕವಿ.

ಎ. ರನ್ನ | ಬಿ.ಜನ್ನ
**ಸಿ. ಕುಮಾರವ್ಯಾಸ** | ಡಿ. ಪಂಪ

120. "ಅರಳು-ಮರಳು" ಕವನ ಸಂಕಲನದ ಕರ್ತೃ.

ಎ. ಕುವೆಂಪು | **ಬಿ. ದ.ರಾ.ಬೇಂದ್ರೆ**
ಸಿ. ಜಿ.ಎಸ್.ಶಿವರುದ್ರಪ್ಪ | ಡಿ. ಕೆ.ಎಸ್.ನರಸಿಂಹಸ್ವಾಮಿ

121. ಬಂಡಾಯ ಹಾಗೂ ದಲಿತ ಸಾಹಿತ್ಯದ ಪ್ರಮುಖರಲ್ಲಿ ಇವರು ಪ್ರಮುಖರು.

**ಎ. ದೇವನೂರ ಮಹಾದೇವ** | ಬಿ. ಗೋವಿಂದ ಪೈ
ಸಿ. ಗಿರೀಶ್ ಕಾರ್ನಾಡ್ | ಡಿ. ಸಾರಾ ಅಬೂಬಕರ್

122. "ಮಂದಾರ" ಪದಕ್ಕೆ ಪ್ರಸ್ತಾರ ಹಾಕಿದಾಗ ಬರುವ ಗಣ

**ಎ. ತಗಣ** | ಬಿ.ಜಗಣ
ಸಿ. ಸಗಣ | ಡಿ. ಭಗನ

123. "ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ" ಇಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆ.

ಎ. ತಲಕಾಡು | ಬಿ. ವೈದ್ಯೇಶ್ವರ
ಸಿ. ಕಟ್ಟಡಗಳು | **ಡಿ. ದೇವಾಲಯ**

## ಕನ್ನಡ ಸಾಹಿತ್ಯ ಚರಿತ್ರೆ – ಭಾಷಾ ಚರಿತ್ರೆ ಕುರಿತಂತೆ ಅಧ್ಯಯನ ಮಾರ್ಗದರ್ಶಿ

ಕನ್ನಡ ಸಾಹಿತ್ಯ ಚರಿತ್ರೆಯ ಕುರಿತಂತೆ ಅಧ್ಯಯನದ ವ್ಯಾಪ್ತಿ ತುಂಬಾ ವಿಶಾಲವಾದದ್ದು ಈ ಕುರಿತು ಹಲವಾರು ದೃಷ್ಟಿಕೋನದಲ್ಲಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

ಕನ್ನಡ ಭಾಷೆಯ ಪ್ರಾಚೀನತೆ,ಇತಿಹಾಸ, ಪ್ರಮುಖ ಶಾಸನಗಳು, ಗ್ರಂಥಗಳು, ಪ್ರಮುಖ ಲೇಖಕರು, ಸಾಹಿತ್ಯ ಯುಗದ ಘಟ್ಟಗಳು ಹೀಗೆ ಸಾಹಿತ್ಯ ಚರಿತ್ರೆಯ ಅಧ್ಯಯನ ಸಾಮಗ್ರಿಯ ಪಟ್ಟಿ ಮುಂದುವರೆಯುತ್ತಾ ಹೋಗುತ್ತದೆ ಅತ್ಯಂತ ಪ್ರಮುಖವಾಗಿ ಈ ಕುರಿತು ಅಧ್ಯಯನ ನಡೆಸಬೇಕಾದ ಅಂಶಗಳೆಂದರೆ,

- ಕನ್ನಡದ ಪ್ರಾಚೀನತೆ, ಪ್ರಾಚೀನತೆಗೆ ಸಿಗುವ ಆಧಾರಗಳು.
- ಪಂಪ ಪೂರ್ವ ಯುಗದ ಕವಿಗಳು ಮತ್ತು ಕೃತಿಗಳು.
- ಪೂರ್ವದ ಹಳಗನ್ನಡ ಹಳಗನ್ನಡ ನಡುಗನ್ನಡ ಹೊಸಗನ್ನಡ ಕಾಲದ ಪ್ರಮುಖ ಕವಿಗಳು, ಕೃತಿಗಳು.
- ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಆಧುನಿಕ ಕಾಲದ ಪ್ರಮುಖ ಕವಿಗಳು, ಕೃತಿಗಳು.
- ರಾಜಾಶ್ರಯ ಹಾಗೂ ಆ ಕಾಲದ ಕವಿಗಳು, ಕೃತಿಗಳು.
- ಹೊಸಗನ್ನಡ ಸಾಹಿತ್ಯದ ಪ್ರಮುಖ ಕವಿಗಳು ಮತ್ತು ಕೃತಿಗಳು.
- ನವೋದಯ, ನವ್ಯ, ಪ್ರಗತಿಶೀಲ, ಬಂಡಾಯಸಾಹಿತ್ಯದ ಪ್ರಮುಖ ಕವಿಗಳು ಕೃತಿಗಳು.
- ಪ್ರಸ್ತುತದವರೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳು, ಕೃತಿ, ವರ್ಷ.
- ಪಂಪಪ್ರಶಸ್ತಿ ವಿಜೇತ ಕವಿಗಳು ಮತ್ತು ಕೃತಿಗಳು.
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕವಿಗಳು ಮತ್ತು ಕೃತಿಗಳು.
- ಕನ್ನಡದ ಮಹಾ ಕಾವ್ಯಗಳು ಹಾಗೂ ಅವುಗಳ ರಚನಾಕಾರರು.
- ಕನ್ನಡದ ಮೊದಲುಗಳು ಹಾಗೂ ವಿಶೇಷತೆಗಳು.
- ಕರ್ನಾಟಕರತ್ನ ಪುರಸ್ಕೃತರು.
- ವಚನಕಾರರು, ಅವರ ಅಂಕಿತನಾಮ ಮತ್ತು ಪ್ರಮುಖ ಮಾತುಗಳು.
- ದಾಸಸಾಹಿತ್ಯದ ಪ್ರಮುಖರು, ಅಂಕಿತನಾಮ ಮತ್ತು ಪ್ರಮುಖ ಸಂದೇಶ.

ಹೀಗೆಇತ್ಯಾದಿ ಮುಖ್ಯ ಪರಿಕಲ್ಪನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಮಾಡುವುದು ಸೂಕ್ತ.

## ಭಾಷಾ ಬೋಧನಾ ಶಾಸ್ತ್ರ

ಭಾಷಾ ಬೋಧನಾಶಾಸ್ತ್ರ ಕುರಿತ ಅಧ್ಯಯನವೂ ಸಹ ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತೆಯಲ್ಲಿ ಅತ್ಯಂತ ಪ್ರಮುಖವಾದ ವಿಷಯ. ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ಭಾಷಾ ಕಲಿಕೆ ಅನುಕೂಲಿಸುವ ವಿಷಯ ಕುರಿತು ಏನನ್ನು ಕಲಿತಿದ್ದೀರೋ ಆ ವಿಷಯ ಕುರಿತು ನೇರ ಹಾಗೂ ಅನ್ವಯಿಕ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಶಿಕ್ಷಕರಾಗಬಯಸುವರು. ಕಲಿಕಾ ಪ್ರಕ್ರಿಯೆ, ಶಿಶುಕೇಂದ್ರಿತ ಕಲಿಕಾ ಪದ್ಧತಿ, ಸುಗಮಕಾರರ ಪಾತ್ರದಲ್ಲಿ ಶಿಕ್ಷಕರ ಕರ್ತವ್ಯ ಇತ್ಯಾದಿಯಾಗಿ ಪರಿಕಲ್ಪನೆಗಳನ್ನು ಹೇಗೆ ಅರ್ಥೈಸಿಕೊಂಡಿದ್ದೀರಿ ಎಂದು ಪರಿಶೀಲಿಸುವ ದೃಷ್ಟಿಯಿಂದ ಪ್ರಶ್ನೆಗಳನ್ನು ರಚಿಸಿರುವುದನ್ನು ಹಿಂದಿನ ಪ್ರಶ್ನೆಪತ್ರಿಕೆಗಳಲ್ಲಿ ನಾವು ಗಮನಿಸಬಹುದು. ಈ ವಿಷಯದಲ್ಲಿ ಅತ್ಯಂತ ಪ್ರಮುಖವಾಗಿ ಅಧ್ಯಯನ ಮಾಡಲೇಬೇಕಾದ ಪರಿಕಲ್ಪನೆಗಳೆಂದರೆ,

* ಭಾಷೆ, ಅರ್ಥ, ಉಗಮ, ಸ್ವರೂಪ, ವ್ಯಾಪ್ತಿ.
* ಭಾಷಾ ಕೌಶಲಗಳು – ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರವಣಿಗೆ.
* ಭಾಷಾ ಬೋಧನಾ ಪದ್ಧತಿಗಳು:– ಗದ್ಯಬೋಧನೆ, ಪದ್ಯಬೋಧನೆ, ವ್ಯಾಕರಣಬೋಧನೆ, ಛಂದಸ್ಸು, ಪ್ರಬಂಧ, ಪತ್ರಲೇಖನ ಇತ್ಯಾದಿ.
* ಸಾಹಿತ್ಯದ ಪ್ರಕಾರಗಳು – ನಿರೂಪಣಾತ್ಮಕ ಸಾಹಿತ್ಯ ಮತ್ತು ವಿವರಣಾತ್ಮಕ ಸಾಹಿತ್ಯ
* ಕಲಿಕಾವಾದಗಳ ಕುರಿತು ಅಧ್ಯಯನ –ವೈಗಾಟ್‌ಸ್ಕಿ , ಬ್ರೂನರ್, ಕ್ರೇಸನ್, ಸ್ಕಿನ್ನರ್ ಮುಂತಾದವರ ಕಲಿಕಾ ಸಿದ್ಧಾಂತಗಳ ಪರಿಕಲ್ಪನೆಯನ್ನು ಭಾಷಾ ಕಲಿಕೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು.

* ರಚನಾವಾದ:– 5ಇ ಬೋಧನಾ ಕಲಿಕಾಪದ್ಧತಿ, ಪ್ರಾರಂಭಿಕ ಸಾಕ್ಷರತೆ/ ತ್ವರಿತ ಸಾಕ್ಷರತೆ, ನಲಿಕಲಿ ಪದ್ಧತಿ, ಚೈತನ್ಯ ಪದ್ಧತಿ, ಸಂರಚನಾವಾದ ಮುಂತಾದ ಕಲಿಕಾ ಪರಿಕಲ್ಪನೆಗಳ ಕುರಿತು ಅಧ್ಯಯನ ಮಾಡುವುದು ಸೂಕ್ತ.
* ಪಾಠಯೋಜನೆ:– ಸಿದ್ಧತೆ, ನಮ್ಮ ಪಾಠಯೋಜನೆ, ಮೌಲ್ಯಮಾಪನ ಪ್ರಕ್ರಿಯೆ, ತರಗತಿ ನಿರ್ವಹಣೆ, ಕಲಿಕಾಂಶಗಳನ್ನು ತರಗತಿಯಲ್ಲಿ ಪರಿಚಯಿಸುವ ರೀತಿ ಮುಂತಾದ ಸನ್ನಿವೇಶಗಳನ್ನು ಕುರಿತು ಅನ್ವಯಿಕ ಪ್ರಶ್ನೆಗಳು ಬರುವುದರಿಂದ ಈ ಕುರಿತು ಅಧ್ಯಯನ ನಡೆಸುವುದು ಸೂಕ್ತ.
* ಭಾಷಾ ಸಂವೃದ್ಧ ತರಗತಿಯ ಪರಿಕಲ್ಪನೆ, ಬಹುಭಾಷಿಕತೆ, ಕಲಿಕಾ ಸಾಮಗ್ರಿಗಳು, ಭಾಷಾ ತರಗತಿಯ ಅಗತ್ಯತೆಗಳು ಇತ್ಯಾದಿ ಕುರಿತು ತಿಳಿದುಕೊಳ್ಳಬೇಕಾದ ಅಗತ್ಯವಿದೆ.
* ಕ್ರಿಯಾಸಂಶೋಧನೆ:– ತರಗತಿಯಲ್ಲಿ ಕೈಗೊಳ್ಳುವಾಗ ಎದುರಾಗುವ ಸವಾಲುಗಳು, ಪರಿಹಾರಗಳು, ಭಾಷಾ ತರಗತಿಯಲ್ಲಿ ಬಳಸುವ ಸನ್ನಿವೇಶಗಳ ಕುರಿತು ಅನ್ವಯಿಕ ಪ್ರಶ್ನೆಗಳು ಬರಬಹುದು.
* ಭಾಷಾ ಬೋಧನೆಯಲ್ಲಿ ಮೌಲ್ಯಮಾಪನ, ಮೌಲ್ಯಮಾಪನ ತಂತ್ರ ಸಾಧನಗಳು
* ವಿದ್ಯಾರ್ಥಿಗಳನ್ನು ಅರ್ಥೈಸಿಕೊಳ್ಳುವಿಕೆ.
* ಒಳಗೊಳ್ಳುವ ಶಿಕ್ಷಣ
* ಅಣುಬೋಧನೆ
* ಬೋಧನಾ ಕೌಶಲಗಳು – ಇತ್ಯಾದಿ ಪರಿಕಲ್ಪನೆಗಳ ಕುರಿತು ನೇರ ಹಾಗೂ ಅನ್ವಯಿಕ ಪ್ರಶ್ನೆಗಳನ್ನು ಕೇಳಬಹುದು. ಹಾಗಾಗಿ ಈ ಪರಿಕಲ್ಪನೆಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡುವುದು ಸೂಕ್ತ.

ಈ ಹಿನ್ನೆಲೆಯಲ್ಲಿ ಭಾಷಾ ಬೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಬಹು ಆಯ್ಕೆ ಪ್ರಶ್ನೋತ್ತರಗಳನ್ನು ರಚಿಸಿ ಕೊಡಲಾಗಿದೆ. ಇದು **ಮಾದರಿ ಅಷ್ಟೆ.** ಸಾಮಾನ್ಯವಾಗಿ ಈ ವಿಷಯದಲ್ಲಿ ನೇರ ಪ್ರಶ್ನೆಗಳ ಜೊತೆಗೆ ಅನ್ವಯಿಕ ಪ್ರಶ್ನೆಗಳನ್ನು ಕೇಳುವುದರಿಂದ ಸಮಗ್ರ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು ಸೂಕ್ತ.

ಶುಭವಾಗಲಿ.

## ಭಾಷೆ

### ಮಾದರಿ ಬಹು ಆಯ್ಕೆ ಪ್ರಶ್ನೆಗಳು.

1. ಭಾಷಾ ಪ್ರೌಢಿಮೆಗೆ ಅತ್ಯಂತ ವಿಫುಲವಾಗಿ ದೊರೆಯುವ ಸಂಪತ್ತು ಎಂದರೆ.

   **ಎ. ಸಾಹಿತ್ಯ** ಬಿ. ಅನ್ಯಭಾಷೆಯ ಸಂಸರ್ಗ

   ಸಿ. ವ್ಯಾಕರಣ ಡಿ. ಸಮಾಜ

2. ವಿದ್ಯಾರ್ಥಿಗೆ ಭಾಷಾ ಕಲಿಕೆಗೆ ಹೆಚ್ಚು ಅವಕಾಶಗಳು ಸಿಗುವುದು.

   ಎ. ಶಾಲೆಯಲ್ಲಿ ಬಿ. ಮನೆಯಲ್ಲಿ

   **ಸಿ. ಸಮಾಜದಲ್ಲಿ** ಡಿ. ಆಪ್ತ ಗೆಳೆಯರ ಜೊತೆಯಲ್ಲಿ

3. ಬೆಳವಣಿಗೆಯ ಸಮೀಪ ವಲಯ ಸಿದ್ಧಾಂತದ ಪ್ರತಿಪಾದಕರು.

   **ಎ. ವೈಗಾಟ್ಸ್ಕಿ** ಬಿ. ಕ್ರೇಸನ್

   ಸಿ. ಬ್ರೂನರ್ ಡಿ. ಪಾವ್‌ಲೋವ್

4. ಬೆಳವಣಿಗೆ ಸಮೀಪ ವಲಯ ಸಿದ್ಧಾಂತದಲ್ಲಿ ವೈಗಾಟ್ಸ್ಕಿರವರು ಕಲಿಕೆ ನಡೆಯುವುದು ಈ ರೀತಿಯಲ್ಲಿ ಎಂದು ತಿಳಿಸುತ್ತಾರೆ.

   **ಎ. ಕಲಿಕಾದಾರನಿರುವ ಹಂತ ಮತ್ತು ಸಂಭಾವ್ಯ ಘಟ್ಟಗಳ ನಡುವೆ ಕಲಿಕೆ ನಡೆಯುತ್ತದೆ.**

   ಬಿ. ಕಲಿಕಾದಾರನಿರುವ ಹಂತ ಮತ್ತು ಸಂಭಾವ್ಯ ಘಟ್ಟಗಳನ್ನು ಮೀರಿ ಕಲಿಕೆ ನಡೆಯುತ್ತದೆ.

   ಸಿ. ಕಲಿಕಾದಾರನಿರುವ ಹಂತದ ಒಳಗೆ ಕಲಿಕೆ ನಡೆಯುತ್ತದೆ.

   ಡಿ. ಸಂಭಾವ್ಯ ಘಟ್ಟದ ಎರಡರಷ್ಟು ಮಾತ್ರ ಕಲಿಕೆ ನಡೆಯುತ್ತದೆ.

5. ಸಾರುವೆ ಸಿದ್ಧಾಂತದ ಪ್ರತಿಪಾದಕರು ____________

   ಎ. ಸ್ಕಿನ್ನರ್ ಬಿ.ವೈಗಾಟ್ಸ್ಕಿ

   ಸಿ. ಥಾರ್ನ್‌ಡೈಕ್ **ಡಿ. ಬ್ರೂನರ್**

6. ತರಗತಿಯಲ್ಲಿ ಮಕ್ಕಳಿಗೆ ಆಸಕ್ತಿಯಿರುವ ವಿಷಯಗಳ ಬಗ್ಗೆ ಶಾಲೆಯಲ್ಲಿ ನಡೆಯುವ ಸಂಭಾಷಣೆಗಳು ________________

ಎ. ಏಕರೀತಿಯಾಗಿರಬೇಕು **ಬಿ. ವೈವಿಧ್ಯಮಯವಾಗಿರಬೇಕು**
ಸಿ. ಸುಲಭವಾಗಿರಬೇಕು ಡಿ. ದ್ವಂದ್ವವಾಗಿರಬೇಕು

7. ಮಗು ತನ್ನ ಭಾಷೆಯಿಂದ ಶಾಲಾ ಭಾಷೆಗೆ ಸುಲಲಿತವಾಗಿ ಬದಲಾಯಿಸಿಕೊಳ್ಳಲು ಅನುಕೂಲ ಮಾಡಿಕೊಡುವ ಜವಾಬ್ದಾರಿ ಇವರದ್ದು.

ಎ. ಪೋಷಕರದ್ದಾಗಿದೆ. ಬಿ. ನೆರೆಹೊರೆಯವರದ್ದಾಗಿದೆ.
ಸಿ. ಸ್ನೇಹಿತರದ್ದಾಗಿದೆ **ಡಿ. ಶಿಕ್ಷಕರದ್ದಾಗಿದೆ**

8. ಮನೆ ಭಾಷೆಯಲ್ಲಿಯೇ ಮಗು ತನ್ನ

1. ಅನುಭವಗಳನ್ನು ಪಡೆಯುತ್ತದೆ
2. ತನ್ನ ಸುತ್ತಲಿನ ಭಾಷೆಗೆ ತೆರೆದುಕೊಳ್ಳುತ್ತದೆ
3. ತನ್ನ ಕಲಿಕೆಯನ್ನು ಕಟ್ಟಿಕೊಳ್ಳುತ್ತದೆ

ಎ. 1 ಮತ್ತು 2 ಸರಿ ಬಿ. 2 ಮತ್ತು 3 ಸರಿ
ಸಿ. 3 ಮಾತ್ರ ಸರಿ **ಡಿ. ಮೇಲಿನ ಎಲ್ಲವೂ ಸರಿ**

9. ತರಗತಿಯ ವಾತಾವರಣ ಮಕ್ಕಳಿಗೆ ಹೇಗಿರಬೇಕೆಂದರೆ,

ಎ. ಭಯ ರಹಿತವಾಗಿರಬೇಕು
ಬಿ. ಕಲಿಕೆಗೆ ಪ್ರೋತ್ಸಾಹಿಸುವಂತಿರಬೇಕು
ಸಿ. ಸಮಾಜದ ಪ್ರಭಾವವನ್ನು ನಿರ್ಬಂಧಿಸುವಂತಿರಬೇಕು
ಡಿ. ಏಕರೂಪದ ಕಲಿಕಾ ಅನುಭವಗಳನ್ನು ನೀಡುವಂತಿರಬೇಕು

**ಅ. ಎ ಮತ್ತು ಬಿ ಸರಿ** ಆ. ಸಿ ಮತ್ತು ಡಿ ಸರಿ
ಇ. ಅ ಮತ್ತು ಸಿ ಸರಿ ಈ. ಬಿ ಮತ್ತು ಡಿ ಸರಿ

10. ಭಾಷಾ ಶಿಕ್ಷಣವು ಯಾವಾಗಲೂ

ಎ. ಕೃತಕ ಸನ್ನಿವೇಶದಲ್ಲಿರಬೇಕು
**ಬಿ. ಸಾಂದರ್ಭಿಕವಾಗಿರಬೇಕು**
ಸಿ. ಭಾಷಾ ಶಿಕ್ಷಣ ಗುಂಪು ಚಟುವಟಿಕೆಯಾಗಿರಬೇಕು
ಡಿ. ಸಮಾಜಮುಕ್ತ ವಾತಾವರಣದಲ್ಲಿರಬೇಕು

11. ಕಲಿಕೆಯು ಪರಿಣಾಮಕಾರಿಯಾಗಬೇಕಾದರೆ ತರಗತಿಯಲ್ಲಿ

ಎ. ಆಕರ್ಷಕ ಭೌತಿಕ ವಾತಾವರಣವಿರಬೇಕು
**ಬಿ. ವೈವಿಧ್ಯಮಯ ಸಂಪನ್ಮೂಲಗಳು ಬಳಕೆಯಾಗಬೇಕು**
ಸಿ. ಗುಂಪು ಚಟುವಟಿಕೆಗೆ ಅವಕಾಶವಿರಬೇಕು
ಡಿ. ಸಮಯದ ಮಿತಿಯಿರಬೇಕು

12. ಪಾಠೋಪಕರಣವನ್ನು / ಕಲಿಕಾ ಸಾಮಾಗ್ರಿಯನ್ನು ತರಗತಿಯಲ್ಲಿ ಬಳಸುವಾಗ ಅವು

**ಎ. ವೈಯಕ್ತಿಕವಾಗಿ ಅಥವಾ ಸಣ್ಣ ಗುಂಪಿನಲ್ಲಿ ಬಳಸುವಂತಿರಬೇಕು**
ಬಿ. ಚಿಕ್ಕದಾದರೂ ಆಕರ್ಷಕ ಮತ್ತು ಅರ್ಥಪೂರ್ಣವಾಗಿರಬೇಕು
ಸಿ. ವೆಚ್ಚದಾಯಕವಾಗಿರಬೇಕು
ಡಿ. ದೀರ್ಘಕಾಲ ಬಳಸುವಂತಿರಬೇಕು

13. ಪುಣ್ಯಕೋಟಿ ಪದ್ಯವನ್ನು ಒಂದು ಪುಟದ ಗದ್ಯ ಕಥೆಯಾಗಿ ರೂಪಾಂತರಿಸಿ ಕೊಟ್ಟರೆ ಮಗು.

ಎ. ಕಥೆಯ ರೂಪವಾದ್ದರಿಂದ ಬೇಗನೆ ಆಸಕ್ತಿಯಿಂದ ಕಲಿಯುತ್ತದೆ
ಬಿ. ಮಗು ಕಲಿಯಲು ಕಷ್ಟವಾಗಬಹುದು
**ಸಿ. ಪದ್ಯದಲ್ಲಿರುವ ಪುನರುಕ್ತಿ, ಲಯ, ಸೌಂದರ್ಯದಿಂದ ವಂಚಿತರಾಗುತ್ತಾರೆ**
ಡಿ. ಕಲಿಕೆಯು ಪರಿಣಾಮಕಾರಿಯಾಗಿ ನಡೆಯುತ್ತದೆ

14. ಮಕ್ಕಳು ತಾವು ತರುವ ಭಾಷೆಯಿಂದ ನಿರ್ಭೀತರಾಗಿ ಬಳಸುವ ಪರಿಸರ ನಿರ್ಮಾಣ ಮಾಡುವುದು.

**ಎ. ಶಾಲೆಯ ಮೊದಲ ಜವಾಬ್ದಾರಿ**

ಬಿ. ತರಗತಿ ಶಿಕ್ಷಕರ ಮೊದಲ ಜವಾಬ್ದಾರಿ

ಸಿ. ಸ್ನೇಹಿತರ ಜವಾಬ್ದಾರಿ

ಡಿ. ಮುಖ್ಯ ಶಿಕ್ಷಕರ ಜವಾಬ್ದಾರಿ

15. ಬಹುಭಾಷಾ ತರಗತಿಗಳು ಮಕ್ಕಳ ಕಲಿಕೆಯನ್ನು

**ಎ. ಪ್ರೇರೇಪಿಸುತ್ತದೆ**

ಬಿ. ನಿಯಂತ್ರಿಸುತ್ತದೆ

ಸಿ. ಗೊಂದಲಗೊಳಿಸುತ್ತದೆ

ಡಿ. ತಟಸ್ಥವಾಗಿರುತ್ತದೆ

16. ಬಹುಭಾಷಿಕತೆಯು ಮಗುವಿನ ಜ್ಞಾನಾತ್ಮಕ ಬೆಳವಣಿಗೆಯಲ್ಲಿ

**ಎ. ಸಕಾರಾತ್ಮಕವಾಗಿ ಪ್ರಭಾವ ಬೀರುತ್ತದೆ**

ಬಿ. ನಕಾರಾತ್ಮಕವಾಗಿ ಪ್ರಭಾವ ಬೀರುತ್ತದೆ

ಸಿ. ಯಾವುದೇ ಪ್ರಭಾವ ಬೀರುವುದಿಲ್ಲ

ಡಿ. ಪ್ರಾಥಮಿಕ ತರಗತಿಗಳಲ್ಲಿ ಮಾತ್ರ ಪ್ರಭಾವ ಬೀರುತ್ತದೆ

17. ಬರವಣಿಗೆಯ ಔಪಚಾರಿಕತೆಯನ್ನು ಬಯಸದ ಭಾಷೆ.

ಎ. ಗ್ರಾಂಥಿಕ ಭಾಷೆ

**ಬಿ. ಆಡು ಭಾಷೆ**

ಸಿ. ಕಾವ್ಯ ಭಾಷೆ

ಡಿ. ಅಭಿಜಾತ ಭಾಷೆ

18. ಮಾತೃಭಾಷೆ ಕಲಿಕೆಯ ಮಾಧ್ಯಮವಾದರೆ,

ಎ. ಮಗುವಿನ ಕಲಿಕೆ ಪರಿಣಾಮಕಾರಿಯಾಗಿರುತ್ತದೆ

ಬಿ. ಮಗುವಿನ ಕಲಿಕೆಯ ಮೇಲೆ ಯಾವುದೇ ಪರಿಣಾಮ ಇರುವುದಿಲ್ಲ

ಸಿ. ಮಗು ಆಸಕ್ತಿದಾಯಕವಾಗಿ ಕಲಿಯುತ್ತದೆ

ಡಿ. ಭಾಷೆ ಒಂದು ಮಾಧ್ಯಮ ಅಷ್ಟೇ ಹಾಗಾಗಿ ಯಾವುದೇ ಪರಿಣಾಮ ಬೀರುವುದಿಲ್ಲ

**ಅ. ಎ ಮತ್ತು ಸಿ ಸರಿ** ಆ. ಎ ಮತ್ತು ಡಿ ಸರಿ

ಇ. ಬಿ ಮತ್ತು ಡಿ ಸರಿ ಈ. ಮೇಲಿನ ಎಲ್ಲವೂ ಸರಿ

19. ಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪ್ರಭಾವವನ್ನು ಶಾಲೆಯು

ಎ. ನಿರ್ದಿಷ್ಟ ಮಾಧ್ಯಮ / ಕಾರ್ಯಕ್ರಮ ಮಾತ್ರ ನೋಡುವಂತೆ ನಿಯಂತ್ರಿಸಬೇಕು

**ಬಿ. ಎಲ್ಲಾ ಮಾಧ್ಯಮ / ಕಾರ್ಯಕ್ರಮ ನೋಡಿ ತೀರ್ಮಾನಿಸುವ ಸಾಮರ್ಥ್ಯ ಬೆಳೆಸಬೇಕು**

ಸಿ. ಶಾಲೆಯು ತಟಸ್ಥವಾಗಿರಬೇಕು

ಡಿ. ಕಲಿಕೆಗೆ ಅಡ್ಡಿ ಉಂಟುಮಾಡುವ ಕಾರ್ಯಕ್ರಮಗಳನ್ನು ನಿಯಂತ್ರಿಸಬೇಕು

20. ಭಾಷಾ ತರಗತಿಗಳ ಕಲಿಕೆ ಉದ್ದೇಶ

ಎ. ಪರೀಕ್ಷೆಯನ್ನು ಉತ್ತಮ ಅಂಕ ಗಳಿಸುವಂತೆ ಮಾಡುವುದು

ಬಿ. ನಿಗಧಿಪಡಿಸಿದ ಉತ್ತಮ ಅಂಕ ಗಳಿಸುವಂತೆ ಮಾಡುವುದು

ಸಿ. ಕವಿ / ಲೇಖಕರ ಆಶಯಗಳನ್ನು ಅರ್ಥೈಸುವುದು

**ಡಿ. ಸಾಂದರ್ಭಿಕವಾಗಿ ಬಾಷೆಯನ್ನು ಬಳಸುವಂತೆ ರೂಪಿಸುವುದು**

21. ಶಾಲೆಯು ಮಗುವಿನ ಮನೆ ಭಾಷೆಯನ್ನು

ಎ. ನಿಯಂತ್ರಿಸಿ ಶಾಲಾ ಭಾಷೆಗೆ ಬದಲಾಯಿಸಬೇಕು

ಬಿ. ತಟಸ್ಥವಾಗಿದ್ದು ಶಾಲಾ ಬಾಷೆಗೆ ಬದಲಾಯಿಸಬೇಕು

**ಸಿ. ಗೌರವಿಸಿ ಶಾಲಾ ಭಾಷೆಗೆ ಬದಲಾಯಿಸಬೇಕು**

ಡಿ. ಮಗುವನ್ನು ಸ್ವತಂತ್ರವಾಗಿ ಬಿಟ್ಟು ಮುಕ್ತವಾಗಿರಬೇಕು

22. ಕಲಿಕೆಗೆ ಸಾಹಿತ್ಯವನ್ನು ಬಳಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶ

**ಎ. ಕಲಿಕಾದಾರರ ಭಾಷಾ ಪ್ರೌಢಿಮೆ**

ಬಿ. ಕಲಿಕಾದಾರರ ಸಾಮಾಜಿಕ ಸ್ಥಿತಿಗತಿ

ಸಿ. ಕಲಿಕಾದಾರರ ಆರ್ಥಿಕ ಸ್ಥಿತಿಗತಿ

ಡಿ. ಕಲಿಕಾದಾರರ ಆಸೆ ಆಕಾಂಕ್ಷೆ

23. ಮಕ್ಕಳಿಗೆ ಭಾಷೆಯನ್ನು ಕಲಿಸುವುದಕ್ಕಿಂತ ಹೆಚ್ಚಾಗಿ ಮಕ್ಕಳಲ್ಲಿ ಭಾಷೆಯನ್ನು ಬೆಳೆಸುವ ಗುರಿಯನ್ನು ಸಾಧಿಸಲು ಅಗತ್ಯವಾಗಿರುವುದು

**ಎ. ಮಕ್ಕಳಲ್ಲಿ ಅಭಿರುಚಿ ಬೆಳೆಸುವುದು**

ಬಿ. ಮಕ್ಕಳಿಗೆ ಮಾತನಾಡಲು ಬಿಟ್ಟು ಬಿಡುವುದು

ಸಿ. ಮಕ್ಕಳಿಗೆ ಮನೆಗೆಲಸ ನೀಡುವುದು

ಡಿ. ಮಕ್ಕಳಲ್ಲಿ ಶಿಸ್ತನ್ನು ಮೂಡಿಸುವುದು

24. ನಮ್ಮ ಮನಸ್ಸಿನಲ್ಲಿರುವ ಆಲೋಚನೆಗಳನ್ನು. ಚಿಂತನೆಗಳನ್ನು ಹೊರಹಾಕುವ ಸಾಧನ

ಎ. ಓದುವುದರ ಮೂಲಕ

ಬಿ. ಮಾತಿನ ಮೂಲಕ

ಸಿ. ಆಲಿಸುವುದರ ಮೂಲಕ

ಡಿ. ಬರಹದ ಮೂಲಕ

ಅ. ಎ ಮತ್ತು ಬಿ ಆ. ಸಿ ಮತ್ತು ಡಿ

ಇ. ಎ ಮತ್ತು ಸಿ **ಈ. ಬಿ ಮತ್ತು ಡಿ**

## ಕೌಶಲ : ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿ

25. ತರಗತಿಯಲ್ಲಿ ವಿದ್ಯಾರ್ಥಿಗಳು ತಾವು ಕೇಳಿದ್ದನ್ನು ಟಿಪ್ಪಣಿ ಮಾಡಿಕೊಳ್ಳಲು ಅವಕಾಶ ನೀಡುವುದು.

**ಎ) ಸಕ್ರಿಯ ಆಲಿಸುವಿಕೆ ತಂತ್ರ** ಬಿ) ಸಮರ್ಥ ಓದುಗಾರಿಕೆಯ ತಂತ್ರ

ಸಿ) ಸಕ್ರಿಯ ಬರೆವಣಿಗೆ ತಂತ್ರ ಡಿ) ಸಮರ್ಥ ಅಭಿವ್ಯಕ್ತಿಯ ತಂತ್ರ

26. ಕಥೆ ಹೇಳುವಾಗ ಮುಂದಾಗುವುದನ್ನು ಊಹಿಸಲು ಅವಕಾಶ ನೀಡುವುದು

**ಎ) ಮಾತುಗಾರಿಕೆ** ಬಿ) ಓದುಗಾರಿಕೆ

ಸಿ) ಆಲಿಸುವಿಕೆ ಡಿ) ಬರವಣಿಗೆ

27. ಆಲಿಸುವಿಕೆ ಕ್ರಿಯಾತ್ಮಕವಾದಷ್ಟು ಅರ್ಥೈಸಿಕೊಳ್ಳುವಿಕೆಯು:

I. ಸುಲಭವಾಗುತ್ತದೆ II. ಕಠಿಣವಾಗುತ್ತದೆ III. ವಿಸ್ತಾರವಾಗುತ್ತದೆ

ಎ. I ಮತ್ತು II ಸರಿ ಬಿ. II ಮತ್ತು III ಸರಿ

**ಸಿ.I ಮತ್ತು III ಸರಿ** ಡಿ. ಇವುಗಳೆಲ್ಲವೂ ಸರಿ

28. ವಿದ್ಯಾರ್ಥಿಗಳಲ್ಲಿ ಸಕ್ರಿಯ ಆಲಿಸುವಿಕೆಯನ್ನುಂಟು ಮಾಡಲು ತರಗತಿಯಲ್ಲಿ ಶಿಕ್ಷಕರು ಬಳಸಬಹುದಾದ ತಂತ್ರಗಳು

I) ಪ್ರಶ್ನೆಕೇಳುವುದು ಮತ್ತು ಪ್ರಶ್ನೆ ಕೇಳಲು ಅವಕಾಶ ನೀಡುವುದು

II) ವಿದ್ಯಾರ್ಥಿಗಳು ತಾವು ಕೇಳಿದ್ದನ್ನು ಟಿಪ್ಪಣಿ ಮಾಡಿಕೊಳ್ಳಲು ಅವಕಾಶ ನೀಡುವುದು

III) ಕಥೆ, ಘಟನೆ, ಸನ್ನಿವೇಶಗಳನ್ನು ಹೇಳುವಾಗ ಮುಂದಾಗುವುದನ್ನು ಊಹಿಸಲು ಅವಕಾಶ ನೀಡುವುದು

IV) ಆಲಿಸಿ ಗ್ರಹಿಸಿದುದರ ಮೌಲ್ಯಮಾಪನ ಹಾಗೂ ಹಿಮ್ಮಾಹಿತಿ ನೀಡುವುದು

ಎ) I ಮತ್ತು II ಸರಿ ಬಿ) II ಮತ್ತು III ಸರಿ

ಸಿ) III ಮತ್ತು IV ಸರಿ **ಡಿ) ಮೇಲಿನ ಎಲ್ಲವೂ ಸರಿ**

29. ತರಗತಿಯಲ್ಲಿ ವಿದ್ಯಾರ್ಥಿಗಳು ಉದ್ದೇಶ ಪೂರ್ವಕವಾಗಿ ಕೇಳುವುದು __________ ಆಗಿರುತ್ತದೆ.

ಎ) ಮಾತುಗಾರಿಕೆ **ಬಿ) ಆಲಿಸುವಿಕೆ**

ಸಿ) ಓದುಗಾರಿಕೆ ಡಿ) ಬರವಣಿಗೆ

30. ಪ್ರಾಥಮಿಕ ತರಗತಿಯ ಆರಂಭಿಕ ಹಂತಗಳಲ್ಲಿ ಅನೌಪಚಾರಿಕ ಮೌಲ್ಯಮಾಪನ ಒಳಗೊಂಡಿರುವ ಕೌಶಲ

ಎ) ಆಲಿಸುವಿಕೆ ಬಿ) ಮಾತುಗಾರಿಕೆ

**ಸಿ) ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿ** ಡಿ) ಓದುಗಾರಿಕೆ ಮತ್ತು ಬರೆವಣಿಗೆ

31. ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿಯ ಕೌಶಲಗಳೆಂದರೆ

I. ವಾಕ್ಯಗುಚ್ಛಗಳನ್ನು ಸೂಕ್ತ ಧ್ವನಿ ಏರಿಳಿತಗಳೊಂದಿಗೆ ಓದುವುದು / ಹಾಡುಗಳನ್ನು ಹಾಡುವುದು

II.ಪರಿಚಿತ ಮತ್ತು ಅಪರಿಚಿತ ಸನ್ನಿವೇಶಗಳನ್ನು ಕುರಿತಂತೆ ಸಂಭಾಷಣೆಯಲ್ಲಿ ತೊಡಗುವುದು

III.ಗೊತ್ತಾದ ವಿಷಯ ಕುರಿತು ಚರ್ಚೆ ಮತ್ತು ಸಂವಾದ ಮಾಡುವುದು

IV.ತರ್ಕಬದ್ಧ ಹಾಗೂ ಸೌಜನ್ಯಯುತ ಮಾತುಗಾರಿಕೆ

ಎ) I, II ಮತ್ತು IIIಸರಿ ಬಿ) II, III ಮತ್ತು IV ಸರಿ

ಸಿ)IIಮತ್ತು III ಸರಿ **ಡಿ) ಎಲ್ಲವೂ ಸರಿ**

32. ಮಾನಸಿಕ ಏಕಾಗ್ರತೆಯಿಂದ ಕುತೂಹಲದಿಂದ ವಿಷಯಗಳನ್ನು ಊಹಿಸುತ್ತಾ ಆಲಿಸುವ ಅಭ್ಯಾಸಗಳನ್ನು ನೀಡುವುದು ಈ ಕೌಶಲದ ಬೆಳವಣಿಗೆಯಾಗಿದೆ.

ಎ) ಮಾತುಗಾರಿಕೆ ಬಿ) ಓದುಗಾರಿಕೆ

ಸಿ) ಬರವಣಿಗೆ **ಡಿ) ಆಲಿಸುವಿಕೆ**

33. ಅಭಿವ್ಯಕ್ತಿಯಲ್ಲಿ ಮುಖ್ಯವಾಗಿ ಶಿಕ್ಷಕರು ಗಮನಿಸಬೇಕಾದ ಅಂಶಗಳು

ಎ) ಪದಗಳ ಸೂಕ್ತ ಬಳಕೆ ಬಿ) ಧ್ವನಿಯ ಏರಿಳಿತ

ಸಿ) ತಾರ್ಕಿಕತೆ, ಸಮಂಜಸತೆ **ಡಿ) ಈ ಎಲ್ಲವೂ**

34. ಪ್ರಾಥಮಿಕ ಹಂತದ ತರಗತಿಗಳಲ್ಲಿ ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಸಮಸ್ಯೆ ಎಂದರೆ

**ಎ) ಭಾಷೆಯ ಅಭಿವ್ಯಕ್ತಿಯಲ್ಲಿನ ಉಚ್ಚಾರ ವ್ಯತ್ಯಾಸಗಳು**

ಬಿ) ಮಕ್ಕಳ ಮನೆ ಭಾಷೆಯನ್ನು ಸಂಪನ್ಮೂಲವೆಂದು ಭಾವಿಸುವುದು

ಸಿ) ಪೋಷಕರೊಂದಿಗೆ ಅರ್ಥಪೂರ್ಣ ಸಂವಾದವಿರುವುದು

ಡಿ) ಸಂಪನ್ಮೂಲಭರಿತ ಪರಿಸರದಲ್ಲಿ ಭಾಷಾ ಕಲಿಕೆ ಒದಗಿಸುವುದು

35. ಮೌಖಿಕ ಅಭಿವ್ಯಕ್ತಿಯಲ್ಲಿ ಕಥೆ ಹೇಳುವುದು ಹಾಗೂ ಕಥೆ ಹೇಳಿಸುವುದು

ಎ) ಭಾಷೆಯನ್ನು ಅರ್ಥೈಸಲು ಸಾಧ್ಯವಾಗುತ್ತದೆ

**ಬಿ) ಶ್ರೀಮಂತ ಭಾಷೆಗೆ ತೆರೆದುಕೊಳ್ಳಲು ಅವಕಾಶವಾಗುತ್ತದೆ**

ಸಿ) ಭಾಷಾ ಬಳಕೆಯ ಪರಿಪೂರ್ಣ ಸಂದರ್ಭ ಗುರುತಿಸಲು ಸಾಧ್ಯವಾಗುತ್ತದೆ

ಡಿ) ಹೆಚ್ಚೆಚ್ಚು ಮಾತನಾಡಲು ಅವಕಾಶ ದೊರೆಯುತ್ತದೆ

36. ವಿದ್ಯಾರ್ಥಿಗಳಲ್ಲಿ ಕಲ್ಪನಾಶೀಲತೆ, ಸೃಜನಶೀಲತೆ, ತಾರ್ಕಿಕತೆ, ಚಿಂತನಾಶೀಲತೆ, ಸ್ವತಂತ್ರ ಕಲಿಕೆಗೆ ಅವಕಾಶ ನೀಡಲು ಶಿಕ್ಷಕರು ತರಗತಿಯಲ್ಲಿ ನೀಡಬಹುದಾದ ಮೌಖಿಕ ಅಭಿವ್ಯಕ್ತಿಯ ಚಟುವಟಿಕೆ

ಎ) ಗದ್ಯ ವಾಚಿಸುವುದು ಬಿ) ಪದ್ಯ ಹಾಡುವುದು

**ಸಿ) ಕಥೆ ಹೇಳುವುದು** ಡಿ) ಚಿತ್ರ ಬಿಡಿಸುವುದು

37. ತರಗತಿಯಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟ ಮಾತುಗಳಲ್ಲಿ ಅಭಿವ್ಯಕ್ತಿಸಬಲ್ಲವರು

**ಎ) ಸ್ವತಂತ್ರ ಕಲಿಕಾದಾರರು** ಬಿ) ಅರೆ ಅವಲಂಬಿತ ಕಲಿಕಾದಾರರು

ಸಿ) ಅವಲಂಬಿತ ಕಲಿಕಾದಾರರು ಡಿ) ಅಪೂರ್ಣ ಕಲಿಕಾದಾರರು

38. ಮೌಖಿಕ ಅಭಿವ್ಯಕ್ತಿ ಬೆಳೆಸಲು ಶಿಕ್ಷಕರು ತರಗತಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು

ಎ) ಕಥೆ ಕೇಳುವುದು
ಬಿ) ಕವನ ರಚಿಸುವುದು
ಸಿ) ಪ್ರಬಂಧ ಬರೆಯುವುದು
**ಡಿ) ಸಂಭಾಷಣ ಚರ್ಚೆ**

39. ತರಗತಿಗಳಲ್ಲಿ ಮಕ್ಕಳಿಗೆ ಹಲವು ಸಂಸ್ಕೃತಿಗೆ ತೆರೆದುಕೊಳ್ಳಲು ಅವಕಾಶ ಸಿಗುವುದು

ಎ) ಭಾಷಾ ತರಗತಿ
**ಬಿ) ಬಹುಭಾಷಾ ತರಗತಿ**
ಸಿ) ಐಚ್ಛಿಕ ತರಗತಿ
ಡಿ) ವಿಜ್ಞಾನ ತರಗತಿ

40. ಎರಡು ಅಥವಾ ಹೆಚ್ಚು ಭಾಷೆಗಳ ನಡುವಿನ ಕೊಡುಕೊಳ್ಳುವಿಕೆ ಕಂಡುಬರುವುದು

ಎ) ಏಕ ಭಾಷಾ ತರಗತಿಗಳಲ್ಲಿ
ಬಿ) ದ್ವಿ ಭಾಷಾ ತರಗತಿಗಳಲ್ಲಿ
**ಸಿ) ಬಹುಭಾಷಾ ತರಗತಿಗಳಲ್ಲಿ**
ಡಿ) ಐಚ್ಛಿಕ ಭಾಷಾ ತರಗತಿಗಳಲ್ಲಿ

41. ಬಹುಭಾಷಿಕತೆಯು ತರಗತಿಗೆ ತರುವ ಭಾಷಾ ವೈವಿಧ್ಯತೆ ಒಂದು ________ ಆಗಿದೆ

ಎ)ಅಧ್ಯಯನ ಸಂಪನ್ಮೂಲ
ಬಿ) ಕಲಿಕಾ ಸಾಮಗ್ರಿ
ಸಿ) ತಾಂತ್ರಿಕ ಸಂಪನ್ಮೂಲ
**ಡಿ) ವಿಶ್ವಾಸಾರ್ಹ ಸಂಪನ್ಮೂಲ**

42. ತರಗತಿಯಲ್ಲಿ ವಿದ್ಯಾರ್ಥಿಗಳಲ್ಲಿ ಜ್ಞಾನಾತ್ಮಕ ನಮ್ಯತೆ ಹಾಗೂ ಸಾಮಾಜಿಕ ಸಹಿಷ್ಣುತೆಯನ್ನು ಸಕಾರಾತ್ಮಕವಾಗಿ ಬೆಳೆಸಲು ಸಾಧ್ಯವಾಗುವ ಸಂದರ್ಭವೇ

**ಎ) ಬಹುಭಾಷಾ ತರಗತಿ**
ಬಿ) ದ್ವಿಭಾಷೆ ತರಗತಿ
ಸಿ) ಏಕ ಭಾಷಾ ತರಗತಿ
ಡಿ) ಐಚ್ಛಿಕ ಭಾಷಾ ತರಗತಿ

43. ಹಲವು ಸಂಸ್ಕೃತಿಗಳು ಒಂದಾಗಿ ನಡೆಸುವ ತರಗತಿ ಸಂವಾದವೇ

**ಎ) ಬಹುಭಾಷಾ ತರಗತಿ**
ಬಿ) ದ್ವಿ ಭಾಷಾ ತರಗತಿ
ಸಿ) ಕನ್ನಡ ಭಾಷಾ ತರಗತಿ
ಡಿ) ಐಚ್ಛಿಕ ಭಾಷಾ ತರಗತಿ

44. ಒಳಗೊಳ್ಳುವ ತರಗತಿಯಲ್ಲಿ ವಿದ್ಯಾರ್ಥಿಗಳು ಆಲಿಸುವ ವಿಷಯವನ್ನು ಪಠ್ಯ ನೋಡಿಕೊಂಡು ಆಲಿಸಲು ಅವಕಾಶ ಪಡೆದುಕೊಳ್ಳುವುದು

ಎ) ದೃಷ್ಟಿ ದೋಷವುಳ್ಳವರು
**ಬಿ) ಶ್ರವಣ ದೋಷವುಳ್ಳವರು**
ಸಿ) ಕಲಿಕೆಯಲ್ಲಿ ಸಮಸ್ಯೆಯುಳ್ಳವರು
ಡಿ) ಬುದ್ಧಿಮಾಂದ್ಯತೆ ಉಳ್ಳವರು

45. ವಿದ್ಯಾರ್ಥಿಗಳು ತರಗತಿಯಲ್ಲಿ ಮಾಡುವ ಭಾಷಾ ತಪ್ಪುಗಳು ಅವರ___________ ತಿಳಿಯಲು ಸಹಾಯಕವಾಗುವ ಕಿಟಕಿ ಎನ್ನಬಹುದು.

**ಎ) ಭಾಷಿಕ ಸಾಮರ್ಥ್ಯ ಮತ್ತು ಚಿಂತನೆಗಳು**
ಬಿ) ಭಾಷಿಕ ವಿಫಲತೆ
ಸಿ) ಭಾಷಾ ಉಚ್ಚಾರ
ಡಿ) ಭಾಷಾ ವ್ಯಾಕರಣಜ್ಞಾನ

46. ಮಗುವಿನ ಮನೆ ಭಾಷೆಯನ್ನು ಗೌರವಿಸಿ ಶಾಲಾ ಭಾಷೆಗೆ ಹೊಂದಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ನೈದಾನಿಸಿ ಅನುಕೂಲಿಸಬೇಕಾಗಿರುವುದು ಈ ಅಂಶಗಳನ್ನು

ಎ) ಭಾಷಾಜ್ಞಾನ
ಬಿ) ಭಾಷಾ ಸಾಹಿತ್ಯ
**ಸಿ) ಭಾಷಿಕ ತಪ್ಪುಗಳು**
ಡಿ) ವಿಷಯ ಜ್ಞಾನ

47. ತರಗತಿಯಲ್ಲಿ ಶಿಕ್ಷಕರು ನಾಲಿಗೆ ಸುರುಳಿಗೆ ಅನುಕೂಲವಾಗುವ ಪದಗಳನ್ನು ವಾಕ್ಯಗಳನ್ನು ರಚಿಸಿ ಅಭ್ಯಾಸ ಮಾಡಿಸುವುದು ಈ ಕೌಶಲದ ದೋಷವಿರುವವರಿಗೆ

**ಎ) ಮಾತುಗಾರಿಕೆಯಲ್ಲಿನ ಉಚ್ಚಾರ ದೋಷವುಳ್ಳವರು**
ಬಿ) ಅನ್ಯ ಭಾಷಾ ಮಾತುಗಾರಿಕೆಯುಳ್ಳವರು
ಸಿ) ಮಾತುಗಾರಿಕೆಯಲ್ಲಿ ಪದಸಂಪತ್ತಿನ ದೋಷವುಳ್ಳವರು
ಡಿ) ಸಾಂದರ್ಭಿಕವಾಗಿ ಪದ ವಾಕ್ಯಗಳನ್ನು ರಚಿಸಿ ಮಾತನಾಡಲು ಸಾಧ್ಯವಾಗದಿರುವವರು

48. ಪ್ರಾಥಮಿಕ ಹಂತದಲ್ಲಿ ಶಿಕ್ಷಕರು ಮಕ್ಕಳನ್ನು ಕಥೆಯ ನೀತಿಯನ್ನು ಹೇಳುವಂತೆ ಒತ್ತಾಯ ಮಾಡಬಾರದು ಏಕೆಂದರೆ

ಎ) ಮಕ್ಕಳಿಗೆ ಕಥೆಯ ನೀತಿಯ ಬಗ್ಗೆ ಆಸಕ್ತಿ ಇಲ್ಲದಿರಬಹುದು
ಬಿ) ಮಕ್ಕಳಿಗೆ ಕತೆಯ ನೀತಿಯ ಬಗ್ಗೆ ತಿಳಿದಿಲ್ಲದಿರಬಹುದು
**ಸಿ) ಮಕ್ಕಳು ಕಥೆಯ ಮೌಲ್ಯವನ್ನು ನೇರವಾಗಿ ತಮ್ಮದಾಗಿಸಿಕೊಳ್ಳಬಲ್ಲರೆ ಹೊರತು ಅದರ ಕುರಿತಂತೆ ಚಿಂತನೆಯಲ್ಲಿ ತೊಡಗಿಕೊಳ್ಳಲಾರರು**
ಡಿ) ಕಥೆಯಲ್ಲಿ ಭಾಷಾಶೈಲಿ ಮುಖ್ಯವೇ ಹೊರತು ಕಥೆಯ ನೀತಿಯಲ್ಲ

49. ಆಲಿಸುವಿಕೆ ಹೆಚ್ಚು ಅರ್ಥಪೂರ್ಣವಾಗಬೇಕಾದರೆ

ಎ) ಬರವಣಿಗೆಯನ್ನು ಹೆಚ್ಚಾಗಿ ನೀಡಬೇಕು

**ಬಿ) ವಿದ್ಯಾರ್ಥಿಗಳ ಆಸಕ್ತಿಗೆ ಹೊಂದುವಂತಹ ವಿಷಯಗಳನ್ನು ಕೊಡುತ್ತಾ ಅವರ ಗಮನ ಕೇಂದ್ರೀಕರಿಸಿ ಆಲಿಸುವ ತರಬೇತಿ ನೀಡುವುದು**

ಸಿ) ವಿದ್ಯಾರ್ಥಿಗಳಿಗೆ ಹೆಚ್ಚೆಚ್ಚು ಮಾತನಾಡಲು ಅವಕಾಶ ನೀಡಬೇಕು

ಡಿ) ವಿದ್ಯಾರ್ಥಿಗಳಿಗೆ ಹೇಳುತ್ತಿರುವುದನ್ನು ಕೇಳಿಸಿಕೋ ಎಂದು ಸೂಚನೆ ನೀಡಬೇಕು

## ಓದುಗಾರಿಕೆ ಮತ್ತು ಬರವಣಿಗೆ ಕೌಶಲ

50. ಒಳ್ಳೆಯ ಓದುಗರು ________________ ಆಗಿರುತ್ತಾರೆ.

**ಎ) ನಮ್ಯ** ಬಿ) ಅನಮ್ಯ

ಸಿ) ತಟಸ್ಥ ಡಿ) ಕಠಿಣ

51. ಓದುವ ಕೌಶಲವು :

ಎ) ಒಂದು ಹಂತದವರೆಗೆ ಅಭಿವೃದ್ಧಿಯಾಗುವ ಕೌಶಲ

ಬಿ) ಒಮ್ಮೆ ಗಳಿಸಿದರೆ ಮುಗಿಯುವಂತಹ ಕೌಶಲ

**ಸಿ) ನಿರಂತರವಾಗಿ ಅಭಿವೃದ್ಧಿಯಾಗುವ ಕೌಶಲ**

ಡಿ) ಅರ್ಥರಹಿತ ವಾಚನ ದೃಷ್ಟಿಕೋನದ ಕೌಶಲ

52. ತರಗತಿಯಲ್ಲಿ ವಿದ್ಯಾರ್ಥಿಗಳು ಓದುತ್ತಿರುವಾಗ ಅವರ ಚಿಂತನೆಗಳ ಬಗೆಗೆ ಪ್ರಜ್ಞಾಪೂರ್ವಕವಾಗಿ ಆಲೋಚಿಸಿದರೆ ಅವರು

ಎ) ಸಮರ್ಥ ಆಲಿಕೆದಾರರು **ಬಿ) ಸಮರ್ಥ ಓದುಗರು**

ಸಿ) ಸಮರ್ಥ ಬರಹಗಾರರು ಡಿ) ಸಮರ್ಥ ಮಾತುಗಾರರು

53. ಇದು ಓದುವ ಕೌಶಲದ ಉಪಸಾಮರ್ಥ್ಯವಾಗಿದೆ.

ಎ) ವಿದ್ಯಾರ್ಥಿಗಳು ತಾವು ಕೇಳಿದ್ದನ್ನು ಟಿಪ್ಪಣಿ ಮಾಡಿಕೊಳ್ಳುವುದು

ಬಿ) ಆಲಿಸಿದ ಘಟನೆಗಳನ್ನು ಸನ್ನಿವೇಶಗಳನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸಿ ಅರ್ಥೈಸುವುದು.

ಸಿ) ವಿದ್ಯಾರ್ಥಿಗಳು ತಮಗೆ ತಿಳಿದ ಅಂಶಗಳಿಗೆ ತಮ್ಮ ಕಲಿಕಾನುಭವಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವುದು.

**ಡಿ) ವಿದ್ಯಾರ್ಥಿಗಳು ಓದಿದ ಪಠ್ಯದ ವಸ್ತುವನ್ನು ತನ್ನ ಅನುಭವಗಳಿಗೆ ಸಂಬಂಧೀಕರಿಸಿಕೊಳ್ಳುವುದು.**

54. ಓದನ್ನು ಅನುಕೂಲಿಸುವ ತಂತ್ರಗಳಲ್ಲಿ ಇದು ಒಂದಾಗಿದೆ.

**ಎ) ಓದಿನ ಪೂರ್ವ ಸಿದ್ಧತೆಯಾಗಿ ಓದುವ ವಿಷಯ ವಸ್ತುವಿನ ಸಂಕ್ಷಿಪ್ತ ಪರಿಚಯ ನೀಡುವುದು.**

ಬಿ) ಪದ, ವಾಕ್ಯಗಳನ್ನು ನಕಲು ಮಾಡುವುದು.

ಸಿ) ಘಟನೆಗಳನ್ನು, ಸನ್ನಿವೇಶಗಳನ್ನು ಉದ್ದೇಶ ಪೂರ್ವಕವಾಗಿ ಆಲಿಸಿ ಗ್ರಹಿಸುವುದು.

ಡಿ) ಆಲಿಸಿದ ವಿಷಯ ವಸ್ತುವನ್ನು ತಮ್ಮದೇ ಮಾತುಗಳಲ್ಲಿ ಬರೆಯುವುದು.

55. ಎನ್.ಸಿ.ಟಿ.ಇ ಯ ನಂಬಿಕೆಗಳ ಪ್ರಕಾರ ಬರವಣಿಗೆಯ ಲಕ್ಷಣಗಳೆಂದರೆ,

I. ಬರವಣಿಗೆ ವ್ಯಕ್ತಿಯ ಅನನ್ಯತೆಯನ್ನು ಬಿಂಬಿಸುವ ಕ್ರಿಯೆ

II. ಬರವಣಿಗೆ ಒಂದು ಸಾಮಾಜಿಕ ಚಟುವಟಿಕೆಯೂ ಹೌದು

III. ಬರವಣಿಗೆ ಚಿಂತನೆಯ ಮಾರ್ಗ

IV. ಬರವಣಿಗೆ ಒಂದು ಪ್ರಕ್ರಿಯೆ; ಬರವಣಿಗೆ ಏಕರೂಪದ ಪ್ರಕ್ರಿಯೆ ಆಗಿರುವುದಿಲ್ಲ.

ಎ) I ಮತ್ತು III ಸರಿ ಬಿ) II ಮತ್ತು IV ಸರಿ

ಸಿ) I, II ಮತ್ತು IV ಸರಿ **ಡಿ) I, II, III ಮತ್ತು IV ಸರಿ**

56. ಬರವಣಿಗೆಯ ಮೂಲ ಕೌಶಲಗಳೆಂದರೆ,

ಎ) ಆಲಿಸುವುದು ಬಿ) ಓದುವುದು

ಸಿ)ಕೇಳಿಸಿಕೊಳ್ಳುವುದು **ಡಿ) ಆಲಿಸುವಿಕೆ ಮತ್ತು ಓದುಗಾರಿಕೆ**

57. ಮೊದಲು ಕೈಗಳಿಗೆ ವ್ಯಾಯಾಮ ನೀಡುವುದು ಬಹುಮುಖ್ಯವಾಗಿ ಈ ಕೌಶಲದ ಪೂರ್ವ ಸಿದ್ಧತೆಯಾಗಿದೆ:

ಎ) ಆಲಿಸುವಿಕೆ ಬಿ) ಓದುಗಾರಿಕೆ

**ಸಿ) ಬರವಣಿಗೆ** ಡಿ) ಮೌಲ್ಯಮಾಪನ

58. ವಿದ್ಯಾರ್ಥಿಗಳು ತಮ್ಮಲ್ಲಿರುವ ಮಾಹಿತಿಯನ್ನು ಕಲೆ ಹಾಕಿ, ಯಾವ ವಿವರ ಹೇಗೆ ಎಷ್ಟು ಬರೆಯಬೇಕು? ಎಂದು ಚಿಂತಿಸುವುದು:

ಎ) ಕರಡು **ಬಿ) ಯೋಜನೆ**

ಸಿ) ಪುನರಾವಲೋಕನ ಡಿ) ಮೌಲ್ಯಮಾಪನ

59. ಓದು ಮತ್ತು ಬರಹ ಒಟ್ಟಿಗೆ ಪ್ರಕಟಗೊಳ್ಳುವ ಅತ್ಯಂತ ಸೂಕ್ತ ಸಂದರ್ಭ :

**ಎ) ಬರೆಯುವಾಗಲೇ ಬರೆದುದನ್ನು ಓದಿಕೊಳ್ಳುವುದು**

ಬಿ) ಓದುವಾಗಲೇ ಜೊತೆಯಲ್ಲಿಯೇ ಬರೆದುಕೊಂಡು ಹೋಗುವುದು

ಸಿ) ಬರೆದ ನಂತರ ಓದಿಕೊಳ್ಳುವುದು

ಡಿ) ಓದಿದ ನಂತರ ಬರೆಯುವುದು

60. ಒಂದು ನಿರ್ದಿಷ್ಟ ವಿಷಯದ ಮೇಲೆ ಬರೆಯುವ ಸಂಶೋಧನಾತ್ಮಕ ಬರವಣಿಗೆ :

ಎ) ಪ್ರಬಂಧ **ಬಿ) ನಿಬಂಧ**

ಸಿ) ಲೇಖನ ಡಿ) ವರದಿ

61. ಬರವಣಿಗೆ ಒಂದು ______________ ಮಾರ್ಗ

**ಎ) ಚಿಂತನೆಯ** ಬಿ) ಏಕ ರೂಪತೆಯ

ಸಿ) ವ್ಯವಸ್ಥಿತವಲ್ಲದ ಡಿ) ಇವುಗಳಲ್ಲಿ ಯಾವುದೂ ಅಲ್ಲ

62. ಇದೊಂದು ರೇಖಾ – ವಿನ್ಯಾಸಗಳ ಕೌಶಲವಾಗಿದೆ :

ಎ) ಓದುಗಾರಿಕೆ **ಬಿ) ಬರವಣಿಗೆ**

ಸಿ) ಮಾತನಾಡುವುದು ಡಿ) ಆಲಿಸುವಿಕೆ

63. ಚಿತ್ರಗಳನ್ನು ಗುರುತಿಸುವುದು, ಅವುಗಳ ಹೆಸರು ಹೇಳುವುದು :

ಎ) ಬರವಣಿಗೆಯ ಉಪಸಾಮರ್ಥ್ಯ **ಬಿ) ಓದುವಿಕೆಯ ಉಪಸಾಮರ್ಥ್ಯ**

ಸಿ) ಆಲಿಸುವಿಕೆಯ ಉಪಸಾಮರ್ಥ್ಯ ಸಿ) ಮಾತನಾಡುವ ಉಪಸಾಮರ್ಥ್ಯ

64. ಮೌಖಿಕ ಕೌಶಲಗಳ ಮೌಲ್ಯಮಾಪನದಲ್ಲಿ ಗಮನಿಸಬೇಕಾದ ಅಂಶಗಳು:

ಎ) ಶಬ್ದಗಳ ಉಚ್ಚಾರ ಮತ್ತು ಧ್ವನಿ ಏರಿಳಿತ ಬಿ) ಪದಗಳ ಔಚಿತ್ಯಪೂರ್ಣ ಬಳಕೆ

ಸಿ) ವಿಚಾರಗಳ ಪ್ರಸ್ತುತತೆ ಮತ್ತು ಮಾತಿನಲ್ಲಿ ತಾರ್ಕಿಕತೆ **ಡಿ) ಇವುಗಳೆಲ್ಲವೂ**

65. ಮಗುವಿನಲ್ಲಿ ಬರವಣಿಗೆ ಕೌಶಲ ಉತ್ತಮಪಡಿಸಲು ಬಳಸಬಹುದಾದ ಚಟುವಟಿಕೆ :

ಎ) ಚಿಂತನೆ ಬಿ)ಮಾತು

ಸಿ) ಚಟುವಟಿಕೆ **ಡಿ) ಉಕ್ತಲೇಖನ**

66. ಲಿಖಿತ ರೂಪದಲ್ಲಿರುವ ಮೌಖಿಕ ಭಾಷೆ ಪ್ರತಿನಿಧಿಸುವ ಅರ್ಥವನ್ನು ತಿಳಿದುಕೊಳ್ಳುವುದೇ

ಎ) ಆಲಿಸುವುದು **ಬಿ) ಓದುವುದು**

ಸಿ) ಮಾತನಾಡುವುದು ಡಿ) ಬರೆಯುವುದು

67. ಒಂದು ಕ್ರಿಯೆ ಅಥವಾ ಸಂಶೋಧನೆಯಲ್ಲಿ ದೊರಕಿದ ಮಾಹಿತಿಯ ಆಧಾರದ ಮೇಲೆ ವಾದ ಮಂಡಿಸಿ, ವಿಶ್ಲೇಷಿಸುವುದೇ

ಎ) ವರದಿ ಬಿ) ಲೇಖನ

**ಸಿ) ನಿಬಂಧ** ಡಿ) ಪ್ರಬಂಧ

68. ಬರವಣಿಗೆ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಸಾಮರ್ಥ್ಯಗಳೆಂದರೆ,

ಎ) ಅಕ್ಷರಗಳ, ಪದಗಳ ವಾಕ್ಯ ರಚನೆಯ ಸಾಮರ್ಥ್ಯ

ಬಿ) ಉದ್ದೇಶವನ್ನು ಅರಿಯುವ ಸಾಮರ್ಥ್ಯ

ಸಿ) ಓದಿನ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವ ಸಾಮರ್ಥ್ಯ

**ಡಿ) ಇವುಗಳೆಲ್ಲವೂ**

69. ವಿದ್ಯಾರ್ಥಿಯ ಭಾಷೆ – ಚಿಂತನೆಯ ಮೇಲೆ ಪರಿಣಾಮ ಬೀರುವ ಕೌಶಲಗಳು:

ಎ) ಓದು ಬಿ) ಬರಹ

ಸಿ) ಉದ್ದೇಶವಿಲ್ಲದೆ ಕೇಳಿಸಿಕೊಳ್ಳುವಿಕೆ **ಡಿ) ಓದು – ಬರಹ**

70. ವ್ಯಕ್ತಿಯ ಚಿಂತನೆಯಲ್ಲಿ ಸ್ಪಷ್ಟತೆ ಮೂಡಿಸುವ ಪ್ರಕ್ರಿಯೆ:

**ಎ) ಬರವಣಿಗೆ ಪ್ರಕ್ರಿಯೆ** ಬಿ) ಆಲಿಸುವ ಪ್ರಕ್ರಿಯೆ

ಸಿ) ಓದುವ ಪ್ರಕ್ರಿಯೆ ಡಿ) ಮಾತುಗಾರಿಕೆಯ ಪ್ರಕ್ರಿಯೆ

71. ಬರವಣಿಗೆ ಏನನ್ನಾದರೂ 'ಹೇಳಲು' ಪ್ರಯತ್ನಿಸುತ್ತದೆ ಎನ್ನುವುದು ಈ ಎರಡೂ ಕೌಶಲಗಳ ಸಂಬಂಧ ಸೂಚಿಸುತ್ತದೆ:

ಎ) ಆಲಿಸುವಿಕೆಗೂ ಮಾತಿಗೂ ಬಿ) ಆಲಿಸುವಿಕೆಗೂ ಓದುಗಾರಿಕೆಗೂ

**ಸಿ) ಬರವಣಿಗೆಗೂ ಓದುಗೂ** ಡಿ) ಮಾತುಗಾರಿಕೆಗೂ ಓದುಗಾರಿಕೆಗೂ

72. ಈ ಕೌಶಲದ ಕ್ರಿಯೆ ವೈವಿಧ್ಯಮಯ ಪದ್ಧತಿಗಳಲ್ಲಿ ಮತ್ತು ತಂತ್ರಜ್ಞಾನದಲ್ಲಿ ನಡೆಯುತ್ತದೆ:

ಎ) ಓದುಗಾರಿಕೆ **ಬಿ) ಬರವಣಿಗೆ**

ಸಿ) ಮಾತುಗಾರಿಕೆ ಡಿ) ಆಲಿಸುವಿಕೆ

73. ಕಿರಿಯ ಪ್ರಾಥಮಿಕ ಹಂತದಲ್ಲಿ ಬರವಣಿಗೆಯ ಮೊದಲ ಹಂತವೆಂದರೆ,

ಎ) ಆಲಿಸಿದ ವಿಷಯ ವಸ್ತುವನ್ನು ತಮ್ಮದೇ ಮಾತುಗಳಲ್ಲಿ ಬರೆಯುವುದು

ಬಿ) ಮಾರ್ಗದರ್ಶಿತ ಪ್ರಬಂಧಗಳನ್ನು ಬರೆಯುವುದು

**ಸಿ) ಅಕ್ಷರ, ಒತ್ತಕ್ಷರ, ಪದಗಳನ್ನು ತಿದ್ದುವುದು, ನೋಡಿ ಬರೆಯುವುದು.**

ಡಿ) ಸ್ವತಂತ್ರವಾಗಿ ಪ್ರಬಂಧ, ಕಥೆ, ಕವನ ಇತ್ಯಾಧಿಗಳನ್ನು ಬರೆಯುವುದು.

74. ಚಿಂತನೆಯ ಲಿಖಿತ ರೂಪ :

ಎ) ಓದುಗಾರಿಕೆ ಬಿ) ಮಾತುಗಾರಿಕೆ

ಸಿ) ಆಲಿಸುವಿಕೆ **ಡಿ) ಬರವಣಿಗೆ**

75. ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳ ಬರಹವನ್ನು ಸುಧಾರಿಸಲು ತಜ್ಞರು ರೂಪಿಸಿದ ಮೂಲ ಕ್ರಮ ವಿಧಾನಗಳೆಂದರೆ,

ಎ) ಕಾಪಿ ಬರೆಯುವುದು ಬಿ) ಕೇಳಿ ಬರೆಯುವುದು – ಉಕ್ತ ಲೇಖನ

ಸಿ) ನೋಡಿ ಬರೆಯುವುದು **ಡಿ) ಇವುಗಳೆಲ್ಲವೂ**

## ಮಗು ಮತ್ತು ಭಾಷೆ

76. 'ಮನೆ ಭಾಷೆ' ಎಂದರೆ :

ಎ) ಮಗುವಿನ ಮಾತೃ ಭಾಷೆ

**ಬಿ) ಮಗುವಿನ ಮನೆಯಲ್ಲಿ ಎಲ್ಲರೂ ಆಡುವ ಭಾಷೆ**

ಸಿ) ಮಗುವಿನ ಮನೆಯ ಸುತ್ತಮುತ್ತಲಿನ ಪರಿಸರ ಭಾಷೆ

ಡಿ) ಮಗುವಿನ ಕಲಿಕೆಯ ಭಾಷೆ

77. ಕುಟುಂಬದಲ್ಲಿ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಲ್ಪಡುವ ಭಾಷೆ :

ಎ) ಮನೆ ಭಾಷೆ **ಬಿ) ಮಾತೃ ಭಾಷೆ**

ಸಿ) ಶಾಲಾ ಭಾಷೆ ಡಿ) ಪ್ರಾದೇಶಿಕ ಭಾಷೆ

78. 'ರಾಜ್ಯದ ಪ್ರಥಮ ಭಾಷೆ' ಎಂದರೆ :

**ಎ) ಒಂದು ರಾಜ್ಯದಲ್ಲಿ / ಪ್ರಾಂತ್ಯದಲ್ಲಿ ಅತಿ ಹೆಚ್ಚು ಜನರು ಮಾತನಾಡುವ ಆ ರಾಜ್ಯದ ಜನರ ಭಾಷೆ.**

ಬಿ) ಜನರ ಮಾತೃ ಭಾಷೆ

ಸಿ) ಮಗುವಿನ ಶಾಲಾ ಭಾಷೆ

ಡಿ) ಮಗುವಿನ ಮನೆ ಭಾಷೆ

79. ಮನೆ ಭಾಷೆಯಿಂದ ಶಾಲಾ ಭಾಷೆಗೆ ಮಕ್ಕಳ ಭಾಷೆಯನ್ನು ವರ್ಗಾಯಿಸುವಲ್ಲಿ ನೀಡಬಹುದಾದ ಚಟುವಟಿಕೆಗಳ ಅವಕಾಶಗಳೆಂದರೆ,

ಎ) ಮಗು ಶಿಕ್ಷಕರೊಡನೆ ಮತ್ತು ಇತರ ಹಿರಿಯರೊಡನೆ ಸಂವಹನ ನಡೆಸುವ ಅವಕಾಶ

ಬಿ) ಮಗು ತನ್ನ ವಯಸ್ಸಿನ ಇತರ ಮಕ್ಕಳೊಡನೆ ಸಂವಹನ ನಡೆಸುವ ಅವಕಾಶಗಳು

ಸಿ) ಶಾಲೆಯ ಕುರಿತಂತೆ ಮನೆಯಲ್ಲಿ, ಮನೆ ಕುರಿತಂತೆ ಶಾಲೆಯಲ್ಲಿ ಮಾತನಾಡುವ ಅವಕಾಶ

**ಡಿ) ಇವುಗಳೆಲ್ಲವೂ**

80. ತರಗತಿಯ ದೊಡ್ಡ ಬಲವೆಂದರೆ,

ಎ) ಶಿಕ್ಷಕರ ಲಭ್ಯತೆ | **ಬಿ) ಒಡನಾಡಿಗಳ ಲಭ್ಯತೆ**

ಸಿ) ಕೊಠಡಿ ಲಭ್ಯತೆ | ಡಿ) ಪಠ್ಯ ಸಂಪನ್ಮೂಲಗಳ ಲಭ್ಯತೆ

81. ಚಿಂತನಾಶೀಲ ಪ್ರಶ್ನೆಗಳನ್ನು ಕೇಳಿ ಉತ್ತರಗಳ ಹುಡುಕಾಟಕ್ಕೆ ಸಮಯ ನೀಡುವುದು :

**ಎ) ಚಿಂತನೆಯ ಮಾಧ್ಯಮವಾಗಿ ಭಾಷೆಯ ಕಲಿಕೆ**

ಬಿ) ಸಂವಹನ ಮಾಧ್ಯಮದ ಉದ್ದೇಶವಾಗಿ ಭಾಷಾ ಕಲಿಕೆ

ಸಿ) ಆಲಿಸುವಿಕೆ ಮಾಧ್ಯಮವಾಗಿ ಭಾಷೆಯ ಕಲಿಕೆ

ಡಿ) ಮೌಖಿಕ ಮಾಧ್ಯಮವಾಗಿ ಭಾಷೆಯ ಕಲಿಕೆ

82. ಪ್ರಾಥಮಿಕ ಹಂತದಲ್ಲಿ ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿಯಲ್ಲಿ ಎದುರಾಗುವ ಸಮಸ್ಯೆಗಳು :

ಎ) ಉಚ್ಚಾರ ವ್ಯತ್ಯಾಸಗಳು, ಸೂಕ್ತ ಪದಗಳ ಕೊರತೆ

ಬಿ) ಮನೆ ಭಾಷೆಯ ಪದಗಳನ್ನು ನಡು ನಡುವೆ ಬಳಸುವುದು ಹಾಗೂ ಶಾಲಾ ಭಾಷೆಗೆ ವರ್ಗಾಯಿಸಿಕೊಳ್ಳುವಲ್ಲಿ ಉಂಟಾಗುವ ಅಭದ್ರತೆಯ ವಾತಾವರಣ.

ಸಿ) ಪೋಷಕರ ನಿರೀಕ್ಷೆಯಿಂದ ಮಕ್ಕಳ ಹಾಗೂ ಶಿಕ್ಷಕರ ಮೇಲೆ ಬೀಳುವ ಒತ್ತಡ ಹಾಗೂ ಭಾಷಾ ಕಲಿಕೆ ಅನುಕೂಲಿಸುವಲ್ಲಿ ಶಿಕ್ಷಕರಿಗೆ ಹಾಗೂ ಪೋಷಕರಿಗೆ ಇರಬಹುದಾದ ಜ್ಞಾನ ಹಾಗೂ ಅನುಭವದ ಕೊರತೆ.

**ಡಿ) ಇವುಗಳೆಲ್ಲವೂ**

## ಮಗು ಮತ್ತು ಆಟ

83. ಹುಡುಗಾಟ ಹುಟುಕಾಟವಾಗುವುದು :

I. ಸೋಲು ಎದುರಾದಾಗ | II. ಪಂಥಾಹ್ವಾನಗಳು ಎದುರಾದಾಗ

III. ಬಾಲ್ಯದ ಆಟಗಳು ಮರೆಯಾದಾಗ | IV. ಶಿಸ್ತು ಅಳವಡಿಸಿಕೊಂಡಾಗ

ಎ) I ಮತ್ತು III ಸರಿ | ಬಿ) II ಮತ್ತು IV ಸರಿ

ಸಿ) III ಮತ್ತು IV ಸರಿ | **ಡಿ) I ಮತ್ತು II ಸರಿ**

84. ಆಟ ಮತ್ತು ಕಲಿಕೆಯ ಸಂಬಂಧ ಎದುರಾಗುವ ಸಾಧ್ಯತೆಗಳು.

I. ಆಟಕ್ಕಾಗಿ ಆಟ (ಹುಡುಗಾಟ) | II. ಆಟಕ್ಕಾಗಿ ಕಲಿಕೆ

III. ಆಟದಿಂದ ಕಲಿಕೆ (ಹುಡುಕಾಟದ ಆರಂಭ) | IV. ಕಲಿಕೆಗಾಗಿ ಕಲಿಕೆ (ಹುಡುಕಾಟ)

ಎ) I ಮತ್ತು III ಸರಿ | ಬಿ) I, III ಮತ್ತು IV ಸರಿ

ಸಿ) II ಮತ್ತು IV ಸರಿ | **ಡಿ) I, II, III ಮತ್ತು IV ಸರಿ**

85. ಆಟದ ಬಳಿಕ ಆಟ ಹೇಗಾಯಿತು ಎಂದು ಅವಲೋಕಿಸಿಕೊಳ್ಳುವುದು:

ಎ) ಆಟಕ್ಕಾಗಿ ಆಟ | ಬಿ) ಆಟಕ್ಕಾಗಿ ಕಲಿಕೆ

**ಸಿ) ಆಟದಿಂದ ಕಲಿಕೆ** | ಡಿ) ಕಲಿಕೆಗಾಗಿ ಕಲಿಕೆ

86. ಆಟದ ನಿಯಮಗಳನ್ನು ತಿಳಿಸುವುದು, ಆಟ ಮೆಚ್ಚಿಕೊಳ್ಳುವುದು, ಟೀಕೆ ಮಾಡುವುದು:

ಎ) ಲಿಖಿತ ಸಂವಹನ | **ಬಿ) ಮೌಖಿಕ ಸಂವಹನ**

ಸಿ) ಚಿಂತನೆಯ ಸಂವಹನ | ಡಿ) ದೃಶ್ಯಾತ್ಮಕ ಸಂವಹನ

87. ಕಲ್ಪನಾ ಶೀಲತೆ ಮತ್ತು ಶ್ರೀಮಂತ ಭಾಷೆಯ ಕಲಿಕೆಯನ್ನು ಅನುಕೂಲಿಸುವ ಚಟುವಟಿಕೆಗಳೆಂದರೆ,
   ಎ) ನಾಟಕ ವಾಚನ ಹಾಗೂ ಅಭಿನಯ
   ಬಿ) ಹಾಡು ಹೇಳಿಸುವುದು
   **ಸಿ) ಕಥೆ ಹೇಳುವುದು ಹಾಗೂ ಕಥೆ ಹೇಳಿಸುವುದು**
   ಡಿ) ಭಾಷಣ ಮಾಡುವುದು ಹಾಗೂ ಸಂದರ್ಶಿಸುವುದು

88. ವಿದ್ಯಾರ್ಥಿಗಳಲ್ಲಿ ಕ್ರಿಯೆ ಮತ್ತು ಮಾತುಕತೆಯ ಸಾಧ್ಯತೆಗಳನ್ನುಂಟು ಮಾಡುವ ಚಟುವಟಿಕೆ :
   **ಎ) ಕಥೆ** ಬಿ) ಹಾಡು
   ಸಿ) ಭಾಷಣ ಡಿ) ಸಂದರ್ಶನ

89. ತರಗತಿಯಲ್ಲಿ ಮಗು ಕಥೆ ಹೇಳಿದಾಗ ಅದನ್ನು ಬಹಿರಂಗವಾಗಿ ಮೆಚ್ಚಿಕೊಳ್ಳಬೇಕು ಏಕೆಂದರೆ,
   **ಎ) ಇದು ಮಗುವಿನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ**
   ಬಿ) ಮಗುವಿನ ಮೌಖಿಕ ಅಭಿವ್ಯಕ್ತಿಯಾಗಿರುವ ಕಾರಣ
   ಸಿ) ಶಿಕ್ಷಕರ ತರಗತಿಯ ಕರ್ತವ್ಯವಾಗಿರುವುದರಿಂದ
   ಡಿ) ಕಥೆ ಎಲ್ಲ ಮಕ್ಕಳಿಗೂ ಇಷ್ಟವಾಗುವುದರಿಂದ

90. ಆಲಿಸಿದ ವಿಷಯವನ್ನು ವಿದ್ಯಾರ್ಥಿಗಳು ತಮ್ಮದೇ ಮಾತುಗಳಲ್ಲಿ ಹೇಳುವುದು:
   ಎ) ಆಲಿಸುವ ಕೌಶಲ ಬಿ) ಓದುಗಾರಿಕೆಯ ಕೌಶಲ
   **ಸಿ) ಮೌಖಿಕ ಅಭಿವ್ಯಕ್ತಿ ಕೌಶಲ** ಡಿ) ಲಿಖಿತ ಅಭಿವ್ಯಕ್ತಿ ಕೌಶಲ

91. ಆರಂಭಿಕ ಹಂತಗಳಲ್ಲಿ ಶಿಕ್ಷಕರು ತರಗತಿಯಲ್ಲಿ ಈ ಎರಡೂ ಕೌಶಲಗಳನ್ನು ಅನೌಪಚಾರಿಕವಾಗಿ ಕೈಗೊಳ್ಳಬಹುದಾಗಿದೆ:
   **ಎ) ಆಲಿಸುವ ಹಾಗೂ ಮಾತನಾಡುವ** ಬಿ) ಓದುವ ಮತ್ತು ಬರೆಯುವ
   ಸಿ) ಮಾತನಾಡುವ ಹಾಗೂ ಬರೆಯುವ ಡಿ) ಆಲಿಸುವ ಹಾಗೂ ಬರೆಯುವ

## ಭಾಷಾ ಕಲಿಕೆ ಹಾಗೂ ಗಳಿಕೆ

92. ಭಾಷೆಯ ಗಳಿಕೆ ಅತ್ಯಂತ :
   ಎ) ಸಾಂದರ್ಭಿಕವಾದುದು ಬಿ) ಸಾಮಾಜಿಕವಾದುದು
   ಸಿ) ಐಚ್ಛಿಕವಾದುದು **ಡಿ) ಸಾಂದರ್ಭಿಕ ಹಾಗೂ ಸಾಮಾಜಿಕವಾದುದು**

93. ಭಾಷೆಯ ಗಳಿಕೆ–ಕಲಿಕೆಗಳ ನಡುವಿನ ಚಿಂತನೆಯ ಅರ್ಥವೇನೆಂದರೆ,
   ಎ) ಪದಗಳನ್ನು ಅರ್ಥೈಸಿಕೊಳ್ಳುವುದು ಕಲಿಕೆ, ಭಾವನೆಗಳನ್ನು ಅಭಿವ್ಯಕ್ತಿಸುವುದು ಗಳಿಕೆ
   ಬಿ) ಪರಿಸರದಲ್ಲಿ ಅಭಿವ್ಯಕ್ತಿಸುವುದು ಗಳಿಕೆ, ಶಾಲಾ ಭಾಷೆಯ ಅಭಿವ್ಯಕ್ತಿ ಕಲಿಕೆ
   ಸಿ) ತರಗತಿಯ ಸಂಘಟನೆ ಭಾಷಾನುಭವಗಳು ಕಲಿಕಾ ಅನುಭವಗಳಾದರೆ, ನೈಜ ಅನುಭವಗಳ ಅಭಿವ್ಯಕ್ತಿಯೇ ಗಳಿಕೆ
   **ಡಿ) ಭಾಷೆಯ ಗಳಿಕೆ ಅದಾಗಿಯೇ ಆಗುತ್ತದೆ; ಕಲಿಕೆ ಶಿಕ್ಷಕರು ಅನುಕೂಲಿಸಬೇಕು**

94. ನಾನು ಏನು ಹೇಳಿದ್ದೀನೋ ಅದನ್ನು ಮಾಡು. ಈ ಹೇಳಿಕೆಯು ಈ ಕೌಶಲಕ್ಕೆ ಸಂಬಂಧಿಸಿದೆ:
   ಎ) ಮಾತುಗಾರಿಕೆ ಬಿ) ಓದುಗಾರಿಕೆ
   **ಸಿ) ಆಲಿಸುವಿಕೆ** ಡಿ) ಬರವಣಿಗೆ

95. ಆಲಿಸಿದ ಬಳಿಕ ನಡೆಸಬೇಕಾಗಿರುವ ಅಭ್ಯಾಸ ಚಟುವಟಿಕೆಗಳನ್ನು ರೂಪಿಸುವುದು :
   ಎ) ಆಲಿಸುವಿಕೆ
   **ಬಿ) ಆಲಿಸುವ ಚಟುವಟಿಕೆಯ ಪೂರ್ವ ತಯಾರಿ**
   ಸಿ) ಆಲಿಸಿದ ವಿಷಯ ವಸ್ತುವಿನ ಕುರಿತು ಚರ್ಚಾ ಚಟುವಟಿಕೆಗಳು
   ಡಿ) ಆಲಿಸುವ ಸಂದರ್ಭದಲ್ಲಿ ಕೈಗೊಳ್ಳುವ ಚಟುವಟಿಕೆಗಳು

96. ಮೌಖಿಕ ಅಭಿವ್ಯಕ್ತಿಯ ಚಟುವಟಿಕೆಗಳ ಪೂರ್ವ ಷರತ್ತು ಇದಾಗಿದೆ:
   ಎ) ಮಕ್ಕಳು ಮಾತನಾಡುತ್ತಿರುವಾಗಲೇ ಹಿಮ್ಮಾಹಿತಿ ನೀಡಬಾರದು
   ಬಿ) ಮಕ್ಕಳ ಅಭಿವ್ಯಕ್ತಿಯ ತಪ್ಪುಗಳನ್ನೆ ಎತ್ತಿ ತೋರಿಸುತ್ತಿರುವುದು
   ಸಿ) ಎಲ್ಲ ತಪ್ಪುಗಳನ್ನೂ ಒಮ್ಮೆಲೇ ಮಕ್ಕಳ ಗಮನಕ್ಕೆ ತರಬೇಕಾಗಿಲ್ಲ,
   **ಡಿ) ಮೇಲಿನ ಎಲ್ಲವೂ**

97. ಚಿತ್ರ ನೋಡಿ ಪ್ರತಿಕ್ರಿಯೆ ನೀಡುವುದು ಈ ಕೌಶಲಗಳ ಚಟುವಟಿಕೆಯಾಗಿದೆ.
ಎ) ಆಲಿಸುವಿಕೆ ಮತ್ತು ಓದುಗಾರಿಕೆ **ಬಿ) ಆಲಿಸುವಿಕೆ ಮತ್ತು ಮೌಖಿಕ ಅಭಿವ್ಯಕ್ತಿ**
ಸಿ) ಮಾತುಗಾರಿಕೆ ಮತ್ತು ಬರವಣಿಗೆ ಡಿ) ಓದುಗಾರಿಕೆ ಮತ್ತು ಮಾತುಗಾರಿಕೆ

98. ತಮ್ಮ ಮಾತುಗಳು ಪರಿಣಾಮಕಾರಿಯಾಗಿವೆಯೇ ಎಂಬುದನ್ನು ಅವಲೋಕಿಸಿಕೊಂಡು ಅಭಿವ್ಯಕ್ತಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬಲ್ಲವರು :
ಎ) ಅವಲಂಬಿತರು ಬಿ) ಅರೆ ಅವಲಂಬಿತರು
ಸಿ) ಕಲಿಕಾದಾರರು **ಡಿ) ಸ್ವತಂತ್ರ ಕಲಿಕಾದಾರರು**

99. ಆಲಿಸುವ ವಿಷಯ ವಸ್ತುವನ್ನು ಮತ್ತೆ ಮತ್ತೆ ಕೇಳಿಸುವುದು :
ಎ) ದೃಷ್ಟಿದೋಷವಿರುವ ಮಕ್ಕಳಿಗೆ ಬಿ) ಬುದ್ಧಿ ಮಾಂಧ್ಯತೆಯುಳ್ಳವರಿಗೆ
**ಸಿ) ಶ್ರವಣ ದೋಷವುಳ್ಳವರಿಗೆ** ಡಿ) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ

100.ತರಗತಿಯಲ್ಲಿ ಓದಿನ ಪೂರ್ವ ಚಟುವಟಿಕೆಯಾಗಿ ಬೋಧನೆ ಪ್ರಾರಂಭಿಸುವ ಮೊದಲು ನೀಡಬಹುದಾದ ಚರ್ಚಾ ಚಟುವಟಿಕೆಯೇ:
**ಎ) KWL ನಕಾಶೆ/ ಚಾರ್ಟು** ಬಿ) ಓದುವ ವಿಷಯದ ನಕಾಶೆ
ಸಿ) ಓದುಗಾರಿಕೆ ಚಟುವಟಿಕೆಗಳ ನಕಾಶೆ ಡಿ) ಓದುವ ಮೌಲ್ಯಮಾಪನದ ನಕಾಶೆ / ಚಾರ್ಟ್

101. ವಿದ್ಯಾರ್ಥಿಗಳ ಓದನ್ನು ಪ್ರೋತ್ಸಾಹಿಸಲು ಶಾಲೆಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆ ಎಂದರೆ :
ಎ) ಸಾಹಿತ್ಯ ಸ್ಪರ್ಧೆಗಳನ್ನು ನಡೆಸುವುದು.
ಬಿ) ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುವುದು
**ಸಿ) ಪ್ರತಿದಿನ ಅಸೆಂಬ್ಲಿಯಲ್ಲಿ ವಾರ್ತೆ ಓದಿಸುವುದು**
ಡಿ) ಪ್ರತಿದಿನ ಯಾವುದಾದರೊಂದು ವಿಷಯ ಕುರಿತು ಚರ್ಚಿಸುವುದು.

102.ಶಾಲೆಯಲ್ಲಿ ಓದನ್ನು ಪ್ರೋತ್ಸಾಹಿಸುವ ಕಾರ್ಯಚಟುವಟಿಕೆಗಳೆಂದರೆ,
ಎ) ಶಾಲಾ ಗ್ರಂಥಾಲಯ ಹಾಗೂ ಸಾಂಸ್ಕೃತಿಕ ವೇದಿಕೆ
**ಬಿ) ತರಗತಿ ಲೈಬ್ರರಿ ಹಾಗೂ ಓದುಗರ ಕ್ಲಬ್**
ಸಿ) ರೇಡಿಯೋ ಕಾರ್ಯಕ್ರಮಗಳ ಆಲಿಸುವಿಕೆ ಹಾಗೂ ಚರ್ಚೆ
ಡಿ) ಸಿನಿಮಾ ಪ್ರದರ್ಶನ ಹಾಗೂ ಸಾಹಿತ್ಯಿಕ ಸ್ಪರ್ಧೆಗಳ ಆಯೋಜನೆ.

103.ಬರವಣಿಗೆ ಕುರಿತು ಎನ್.ಸಿ.ಟಿ.ಇ. ಯ ನಂಬಿಕೆಗಳಲ್ಲಿ ಇದು ಸಹ ಒಂದಾಗಿದೆ :
**ಎ) ಬರವಣಿಗೆಗೂ ಮಾತಿಗೂ ಸಂಕೀರ್ಣವಾದ ಸಂಬಂಧವಿದೆ.**
ಬಿ) ಬರವಣಿಗೆ ಏಕರೂಪವಾಗಿದೆ
ಸಿ) ಎಲ್ಲರಿಗೂ ಬರೆಯುವ ಸಾಮರ್ಥ್ಯವಿರುವುದಿಲ್ಲ
ಡಿ) ಬರವಣಿಗೆಯೊಂದೇ ಚಿಂತನೆಯ ಮಾರ್ಗವಲ್ಲ

104.ಬರವಣಿಗೆಯ ಪ್ರಕ್ರಿಯೆಯಲ್ಲಿ ಅಡಕವಾಗಿರುವ ಸಾಮರ್ಥ್ಯಗಳೆಂದರೆ,
ಎ) ಅಕ್ಷರಗಳ, ಪದಗಳ, ವಾಕ್ಯ ರಚನೆಯ ಸಾಮರ್ಥ್ಯ
ಬಿ) ಉದ್ದೇಶವನ್ನು ಅರಿಯುವ ಸಾಮರ್ಥ್ಯ
ಸಿ) ಓದಿನ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವ ಸಾಮರ್ಥ್ಯ
**ಡಿ) ಮೇಲಿನ ಎಲ್ಲವೂ**

105.ಯೋಜಿಸಿದ ಮಾಹಿತಿಯನ್ನು ಕ್ರೋಡೀಕರಿಸಿ ಒಂದು ಲೇಖನ ತಯಾರಿಸುವುದು
ಎ) ಯೋಜನೆ **ಬಿ) ಕರಡು**
ಸಿ) ಹಂಚಿಕೊಳ್ಳುವುದು ಡಿ) ಪ್ರಕಟಣೆ

106.ತರಗತಿಯಲ್ಲಿ ಶಿಕ್ಷಕರ ಬೋಧನೆಯನ್ನು ಪರಿಣಾಮಕಾರಿಯಾಗಿಸಿ, ಮಕ್ಕಳ ವೈಜ್ಞಾನಿಕ ಮನೋಭಾವ ಹೆಚ್ಚಿಸಿ; ಅವರ ಅನುಭವ ಕ್ಷೇತ್ರ ವಿಸ್ತರಿಸಿ, ಕುತೂಹಲ ಮೂಡಿಸುವ ತಂತ್ರಗಳೇ:

ಎ) ದೃಕ್ ಉಪಕರಣಗಳು ಬಿ) ಶ್ರವಣೋಪಕರಣಗಳು

**ಸಿ) ಬೋಧನಾ ಸಂಪನ್ಮೂಲಗಳು** ಡಿ) ಮುದ್ರಿತ ಸಂಪನ್ಮೂಲಗಳು

107.ಸಮಯದ ಮಿತವ್ಯಯ ಹಾಗೂ ಹೆಚ್ಚು ವಿಷಯವನ್ನು ಕಡಿಮೆ ಕಾಲದಲ್ಲಿ ವೈವಿಧ್ಯಮಯವಾಗಿ ತಿಳಿಸಲು ನೆರವಾಗುವ ಸಂಪನ್ಮೂಲಗಳು:

**ಎ) ಬೋಧನಾ ಸಂಪನ್ಮೂಲಗಳು** ಬಿ) ಮುದ್ರಿತ ಸಂಪನ್ಮೂಲಗಳು

ಸಿ) ದೃಕ್ ಸಂಪನ್ಮೂಲಗಳು ಡಿ) ಶ್ರವ್ಯ ಸಂಪನ್ಮೂಲಗಳು

108.ಈ ಸಂಪನ್ಮೂಲಗಳಿಂದ ವಿದ್ಯಾರ್ಥಿಗಳ ಕಲಿಕೆಯು ನೈಜ ಹಾಗೂ ಸಹಜ ಸನ್ನಿವೇಶದಲ್ಲಿ ಜರುಗುತ್ತದೆ:

ಎ) ಮುದ್ರಿತ ಸಂಪನ್ಮೂಲಗಳು ಬಿ) ದೃಕ್ ಸಂಪನ್ಮೂಲಗಳು

**ಸಿ) ಬೋಧನಾ ಕಲಿಕಾ ಸಂಪನ್ಮೂಲಗಳು** ಡಿ)ಶ್ರವ್ಯ ಸಂಪನ್ಮೂಲಗಳು

109.ದೂರದರ್ಶನ ಈ ಸಂಪನ್ಮೂಲವಾಗಿದೆ.

ಎ) ಮುದ್ರಿತ ಸಂಪನ್ಮೂಲ **ಬಿ) ಸಮೂಹ ಮಾಧ್ಯಮ**

ಸಿ) ದೃಶ್ಯ ಸಂಪನ್ಮೂಲ ಡಿ) ಶ್ರವ್ಯ ಸಂಪನ್ಮೂಲ

110. ಮಕ್ಕಳಲ್ಲಿ ಭಾಷಾ ಕೌಶಲಗಳನ್ನು ಬೆಳೆಸಲು, ವಿದ್ಯುನ್ಮಾನ ಉಪಕರಣಗಳಿಂದ ಕೂಡಿದ ಬೋಧನಾ ಕೊಠಡಿಯನ್ನು ಕರೆಯುವ ರೂಪ:

ಎ) ಕನ್ನಡ ಭಾಷಾ ತರಗತಿ ಬಿ) ಭಾಷಾ ಓದುಗರ ಕ್ಲಬ್

ಸಿ) ಭಾಷಾ ಸಾಹಿತ್ಯಿಕ ವೇದಿಕೆ **ಡಿ) ಭಾಷಾ ಪ್ರಯೋಗಾಲಯ**

111. ಭಾಷಾ ಪ್ರಯೋಗಾಲಯವು ಈ ವಿಧಾನಗಳನ್ನು ಅಳವಡಿಸಿ ಕಾರ್ಯನಿರ್ವಹಿಸುತ್ತದೆ.

I. ಬ್ರಾಡ್‌ಕಾಸ್ಟಿಂಗ್ ಟೈಪ್ (ಬಿತ್ತರಣೆ ವಿಧಾನ) II. ಲೈಬ್ರರಿ ಟೈಪ್ (ಗ್ರಂಥಾಲಯ ವಿಧಾನ)

III. ಚಕ್ರ ಸೂಚಿ ವಿಧಾನ IV.ಜೋಡಣಾ ವಿಧಾನ

ಎ) I ಮತ್ತು III ಸರಿ ಬಿ) II ಮತ್ತು IV ಸರಿ

ಸಿ) III, I ಮತ್ತು IV ಸರಿ **ಡಿ) ಮೇಲಿನ ಎಲ್ಲವೂ ಸರಿ**

112. ಭಾಷಾ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಯು ತನ್ನ ಬಯಕೆಗೆ ತಕ್ಕಂತೆ ತನಗೆ ಬೇಕಾದ ಕಾರ್ಯಕ್ರಮವನ್ನು ಕೋರಿ, ಸಂಪರ್ಕಿಸಿ ವಿವರಣೆ ಪಡೆಯುವ ವಿಧಾನವೇ:

ಎ) ಬ್ರಾಡ್‌ಕಾಸ್ಟಿಂಗ್ ಟೈಪ್ ಬಿ) ಲೈಬ್ರರಿ ಟೈಪ್

**ಸಿ) ಚಕ್ರ ಸೂಚಿ ವಿಧಾನ** ಡಿ) ಜೋಡನಾ ವಿಧಾನ

113. ಭಾಷಾ ಕಲಿಕೆಯನ್ನು ವೈಜ್ಞಾನಿಕವಾಗಿ ಕಲಿಯಲು ಇರುವ ಅತ್ಯುತ್ತಮ ಸಾಧನವೆಂದರೆ :

**ಎ) ಭಾಷಾ ಪ್ರಯೋಗಾಲಯ** ಬಿ) ತರಗತಿ ಕೊಠಡಿ

ಸಿ) ತರಗತಿ ಲೈಬ್ರರಿ ಡಿ) ಶಾಲಾ ಓದುಗರ ಕ್ಲಬ್

114. ಭಾಷಾ ಪ್ರಯೋಗಾಲಯದಲ್ಲಿ ಕೈಗೊಳ್ಳುವ ಜೋಡಣಾ ವಿಧಾನವು ಈ ಎರಡು ವಿಧಾನಗಳ ಸಂಯೋಜನೆಯಾಗಿದೆ,

ಎ) ಬ್ರಾಡ್‌ಕಾಸ್ಟಿಂಗ್ ಟೈಪ್ ಮತ್ತು ಚಕ್ರಸೂಚಿ ವಿಧಾನ

ಬಿ) ಲೈಬ್ರರಿ ಟೈಪ್ ಮತ್ತು ಜೋಡನಾ ವಿಧಾನ

ಸಿ) ಲೈಬ್ರರಿ ಟೈಪ್ ಮತ್ತು ಚಕ್ರಸೂಚಿ ವಿಧಾನ

**ಡಿ) ಬ್ರಾಡ್‌ಕಾಸ್ಟಿಂಗ್ ಟೈಪ್ ಮತ್ತು ಲೈಬ್ರರಿ ಟೈಪ್ ವಿಧಾನ**

115. ತರಗತಿಯಲ್ಲಿ ಭಾಷಾ ಶಿಕ್ಷಕ ವಿದ್ಯಾರ್ಥಿಗಳೊಂದಿಗೆ ಸಂಭಾಷಣೆಯಲ್ಲಿ ತೊಡಗಿಕೊಂಡು ಆನನ, ರುಧಿರ, ವಿಪಿನ, ತೃಷೆ ಪದಗಳ ಅರ್ಥವನ್ನು ಸಹಜ ಬಳಕೆಯ ಪದಗಳಾಗಿ ಅನುಕೂಲಿಸುತ್ತಾನೆ. ಆಗ ವಿದ್ಯಾರ್ಥಿಗಳು ________

ಎ. ವಿಷಯವನ್ನು ಸರಾಗವಾಗಿ ಅರ್ಥೈಸಿಕೊಳ್ಳುತ್ತಾರೆ

ಬಿ. ಪದಗಳ ಅರ್ಥವನ್ನು ಪಟ್ಟಿ ಮಾಡುತ್ತಾರೆ

**ಸಿ. ಸಂದರ್ಭಾನುಸಾರ ಪದಗಳ ಅರ್ಥ ತಿಳಿದು ವಾಕ್ಯಗಳಲ್ಲಿ ಬಳಸುತ್ತಾರೆ**

ಡಿ. ಸಂಭಾಷಣೆಯ ಕೌಶಲದ ಮಹತ್ವ ತಿಳಿಯುತ್ತಾರೆ

**116.** ತರಗತಿವೊಂದರಲ್ಲಿ ಭಾಷಾ ಶಿಕ್ಷಕ ತಾನು ಮಾರ್ಗದರ್ಶಿಸಿದ ವಿದ್ಯಾರ್ಥಿಗಳ ಪ್ರಬಂಧ ರಚನೆಯ ಕರಡನ್ನು ತಿದ್ದಿ, ಪ್ರತಿ ಮಾಡುವಲ್ಲಿ ಪುನಃ ಮಾರ್ಗದರ್ಶಿಸಿ ಸುಮ್ಮನಾಗುತ್ತಾನೆ. ನಂತರ ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು.

**ಎ. ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಕಲಿಕಾ ಶೈಲಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ಪ್ರಬಂಧ ರಚಿಸುವರು**

ಬಿ. ವಿದ್ಯಾರ್ಥಿಗಳು ತರಗತಿಯಲ್ಲಿ ಚರ್ಚಿಸಿ ಸುಮ್ಮನಾಗುವರು

ಸಿ. ವಿದ್ಯಾರ್ಥಿಗಳು ಮುಂದಿನ ಕಲಿಕೆಯಲ್ಲಿ ತೊಡಗಿಕೊಳ್ಳುವರು

ಡಿ. ವಿದ್ಯಾರ್ಥಿಗಳು ಶಿಕ್ಷಕರು ಮೌನವಾದ ಬಗ್ಗೆ ಚರ್ಚಿಸುವರು

117. ತರಗತಿಯಲ್ಲಿ ಭಾಷಾ ಶಿಕ್ಷಕ ಗದ್ಯ ಬೋಧನೆ ಮಾಡುತ್ತಾ ವಿದ್ಯಾರ್ಥಿಗಳನ್ನು ಪ್ರಶ್ನಿಸುತ್ತಾನೆ. ಆಗ ವಿದ್ಯಾರ್ಥಿಯೊಬ್ಬ ಕೊಟ್ಟ ಉತ್ತರವನ್ನು ಚರ್ಚಿಸುತ್ತಾ ಇನ್ನೂ ಯಾವ ರೀತಿ ಹೇಳಬಹುದು? ಎಂದು ಮರು ಪ್ರಶ್ನಿಸುತ್ತಾನೆ. ಆಗ ವಿದ್ಯಾರ್ಥಿಯು

**ಎ. ಸ್ವಂತಿಕೆಯೊಂದಿಗೆ ಚಿಂತನೆಯ ವಿಶ್ಲೇಷಣೆ ಬೆಳೆಸಿಕೊಳ್ಳುತ್ತಾನೆ**

ಬಿ. ಆಲೋಚಿಸಲು ಪ್ರಾರಂಭಿಸಿ ಮೌನವಾಗುತ್ತಾನೆ

ಸಿ. ಮತ್ತೆ ಉತ್ತರವನ್ನು ಹೇಳಲು ಹಿಂಜರಿಯುತ್ತಾನೆ

ಡಿ. ಪ್ರಶ್ನೆಗೆ ಉತ್ತರಿಸುವ ಕೌಶಲ ಬೆಳೆಸಿಕೊಳ್ಳುತ್ತಾನೆ

118. ತರಗತಿಯ ಮಕ್ಕಳಿಗೆ ಭಾಷಾ ಶಿಕ್ಷಕರೊಬ್ಬರು ವ್ಯಾಕರಣಾಂಶ ಪರಿಚಯಿಸುವಾಗ "ಅವರು ದೇವಾಲಯಕ್ಕೆ ಹೋದರು" ಎಂಬ ಮಾತಿನಲ್ಲಿ 'ದೇವಾಲಯ' ಪದದ ಬಳಕೆಯ ಕುರಿತಾದ ಕ್ರಿಯಾತ್ಮಕ ಅರಿವು ಮೂಡಿಸುತ್ತಾರೆ. ನಂತರ ಅವರು ಕೈಗೊಳ್ಳಬಹುದಾದ ಚಟುವಟಿಕೆ ಎಂದರೆ,

ಎ. ಮತ್ತಷ್ಟು ಉದಾಹರಣೆಗಾಗಿ ಪದಗಳನ್ನು ನೀಡುತ್ತಾರೆ

ಬಿ. ಭಾಷೆಯ ಬಳಕೆ ಮಾಡುತ್ತಾರೆ

**ಸಿ. ಪದ ಕುರಿತಾದ ಬಳಕೆಯ ನಿಯಮಗಳ ಸಾಮಾನ್ಯೀಕರಣ ಮಾಡುತ್ತಾರೆ**

ಡಿ. ಮುಂದುವರೆದು ಅಂತಹ ಪದಗಳನ್ನು ಪಟ್ಟಿ ಮಾಡಿಸುತ್ತಾರೆ

119. ತರಗತಿಯಲ್ಲಿ ಭಾಷಾ ಶಿಕ್ಷಕ 5ಇ ಮಾದರಿಯಲ್ಲಿ ಪಾಠ ಬೋಧನೆ ಮಾಡುತ್ತಾ ಪದ ಸರಪಳಿ ಮಾಡುವ ಚಟುವಟಿಕೆಯಲ್ಲಿ ಮಕ್ಕಳನ್ನು ತೊಡಗಿಸುತ್ತಾನೆ

ಉದಾ: ಕೈನೀಡು, ಕೈಮುಗಿ, ಕೈಯೆತ್ತು, ಕೈಬಿಡು ಇತ್ಯಾದಿ.

ಇದು ರಚನಾವಾದದ ಈ ಹಂತದಲ್ಲಿ ವಿದ್ಯಾರ್ಥಿ ತೊಡಗಿಕೊಳ್ಳುವ ಚಟುವಟಿಕೆಯಾಗಿದೆ:

ಎ. ವಿವರಣಾ ಹಂತದಲ್ಲಿ ಪದಗಳ ಅರ್ಥ ತಿಳಿಯುವಾಗ ಬಳಸುವ ಭಾಷಾ ಕ್ರೀಡಾವಿಧಾನ

ಬಿ. ವಿಸ್ತರಿಸುವ ಹಂತದಲ್ಲಿ ಅನ್ವಯ ಮಾಡಿಕೊಳ್ಳುವ ಭಾಷಾ ಕ್ರೀಡಾವಿಧಾನ

**ಸಿ. ಮೌಲ್ಯಮಾಪನದ ಹಂತದಲ್ಲಿ ತೊಡಗಿಸಿಕೊಳ್ಳುವ ಭಾಷಾ ಕ್ರೀಡಾವಿಧಾನ**

ಡಿ. ಅನ್ವೇಷಣೆ ಹಂತದಲ್ಲಿ ತೊಡಗಿಸುವ ಭಾಷಾ ಕ್ರೀಡಾವಿಧಾನ

120. ತರಗತಿಯಲ್ಲಿ ಗದ್ಯ ಬೋಧನೆ ಮಾಡುವಾಗ ಭಾಷಾ ಶಿಕ್ಷಕರೊಬ್ಬರು ವಿದ್ಯಾರ್ಥಿಗಳನ್ನು ಸರಳವಾಗಿ ಪ್ರಶ್ನಿಸುತ್ತಾ ಸಹಜ ಸಂವಹನದಲ್ಲಿ ಭಾಗಿಯಾಗುವಂತೆ ಮಾಡುತ್ತಾರೆ. ಏಕೆಂದರೆ,

**ಎ. ಭಾಷೆಯ ಬಳಕೆ ಹಾಗೂ ಪಾರಸ್ಪರಿಕ ಸಂವಹನದ ಮೇಲೆ ಒತ್ತು ನೀಡುವ ಉದ್ದೇಶ**

ಬಿ. ವಿಷಯ ಕೌಶಲ ವಿವರಿಸುವ ಉದ್ದೇಶ

ಸಿ. ಪ್ರಶ್ನಿಸುವ ಕೌಶಲ ಬೆಳೆಸುವ ಉದ್ದೇಶ

ಡಿ. ಅರ್ಥಪೂರ್ಣ ಸಂವಹನ ಚಟುವಟಿಕೆ ಕೈಗೊಂಡು ಮೌಲ್ಯಮಾಪನ ಮಾಡುವ ಉದ್ದೇಶ

121. ವಿದ್ಯಾರ್ಥಿಗಳು ತರಗತಿಯಲ್ಲಿ ಶಿಕ್ಷಕರ ಸೂಚನೆಯಂತೆ ತಾವು ಆಲಿಸಿದ ವಿಷಯಾಂಶಗಳನ್ನು ತಮ್ಮದೇ ಮಾತುಗಳಲ್ಲಿ ಟಿಪ್ಪಣಿ ಮಾಡಿಕೊಳ್ಳುವರು. ಇದು ಈ ಕೌಶಲದ ಬೆಳವಣಿಗೆಯ ತಂತ್ರವಾಗಿದೆ:

**ಎ. ಸಕ್ರಿಯ ಆಲಿಸುವಿಕೆ**

ಬಿ. ಸಮರ್ಥ ಓದುಗಾರಿಕೆ

ಸಿ. ಸಕ್ರಿಯ ಮಾತುಗಾರಿಕೆ

ಡಿ. ಸಮರ್ಥ ಅರ್ಥೈಸುವಿಕೆ

122.ತರಗತಿಯಲ್ಲಿ ಭಾಷಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಪದಗುಚ್ಛಗಳನ್ನು ಮೌನವಾಗಿ ಓದಿ ಅರ್ಥೈಸಿಕೊಳ್ಳಲು ಸೂಚಿಸುತ್ತಾರೆ. ಇದು

ಎ. ಆಲಿಸುವ ಉಪಸಾಮರ್ಥ್ಯವಾಗಿದೆ

ಬಿ. ಮಾತುಗಾರಿಕೆಯ ಉಪಸಾಮರ್ಥ್ಯವಾಗಿದೆ

**ಸಿ. ಓದುವ ಉಪಸಾಮರ್ಥ್ಯವಾಗಿದೆ**

ಡಿ. ಬರೆಯುವ ಉಪಸಾಮರ್ಥ್ಯವಾಗಿದೆ

123.ಭಾಷಾ ಶಿಕ್ಷಕರ ಸೂಚನೆಯಂತೆ ವಿದ್ಯಾರ್ಥಿಯೊಬ್ಬ ತನ್ನಲ್ಲಿ ಉಂಟಾದ ಪ್ರಶ್ನೆಗೆ ತಾನೇ ಉತ್ತರ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತಾನೆ. ಅದಕ್ಕಾಗಿ ಅವನು ತರಗತಿಯಲ್ಲಿಯೇ ಇರುವ ಪುಸ್ತಕ ಸಂಪನ್ಮೂಲವನ್ನು ಬಳಸಿಕೊಂಡರೆ ಅದುವೇ:–

ಎ. ಓದುಗರ ವಾಚನಾಲಯ

**ಬಿ. ತರಗತಿ ಲೈಬ್ರರಿ**

ಸಿ. ಶಾಲಾ ಗ್ರಂಥಾಲಯ

ಡಿ. ಭಾಷಾ ಪ್ರಯೋಗಾಲಯ

124.ತರಗತಿಯಲ್ಲಿ ಭಾಷಾ ಶಿಕ್ಷಕರೊಬ್ಬರು ಬರವಣಿಗೆ ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುತ್ತಾರೆ. ಒಬ್ಬ ವಿದ್ಯಾರ್ಥಿ ಯೋಜನೆಯ ನಂತರ ಕರಡು ಲೇಖನ ತಯಾರಿಸುತ್ತಾನೆ. ಅವನ ಮುಂದಿನ ಚಟುವಟಿಕೆಯ ಹಂತ ಇದಾಗಿದೆ:

ಎ. ಪರಿಷ್ಕರಣೆ / ತಿದ್ದುವುದು

ಬಿ. ಮೌಲ್ಯಮಾಪನ / ಹಿಮ್ಮಾಹಿತಿ

ಸಿ. ಪ್ರಕಟಣೆ / ಹಿಮ್ಮಾಹಿತಿ

**ಡಿ. ಪುನರಾವಲೋಕನ / ಹಂಚಿಕೊಳ್ಳುವುದು**

125.ಕನ್ನಡ ಭಾಷಾ ತರಗತಿಯಲ್ಲಿ ವಿದ್ಯಾರ್ಥಿಯೊಬ್ಬ ಶಿಕ್ಷಕರ ಸೂಚನೆಯ ಮೇರೆಗೆ ಕಪ್ಪು ಹಲಗೆಯಲ್ಲಿ ಒಂದು ಮರದಲ್ಲಿ ಹಕ್ಕಿ ಇದೆ. ಆ ಮರದಲ್ಲಿ ಹಕ್ಕಿ ಗೂಡು ಕಟ್ಟುತ್ತಿದೆ ಈ ವಾಕ್ಯಗಳನ್ನು ರಚಿಸುತ್ತಾನೆ. ಈ ವಾಕ್ಯ ರಚನಾ ಕೌಶಲವೇ:–

**ಎ. ಬೆಳೆಯುವ ವಾಕ್ಯ ರಚನಾ ಕೌಶಲ**

ಬಿ. ಪದ ರಚನಾ ಕೌಶಲ

ಸಿ. ಅರ್ಥ ರಚನಾ ಕೌಶಲ

ಡಿ. ಅಂದ ಬರಹ ರಚನಾ ಕೌಶಲ

126.ಭಾಷಾ ಶಿಕ್ಷಕರು ತರಗತಿಯಲ್ಲಿ 'ಪುಣ್ಯಕೋಟಿ' ಪದ್ಯವನ್ನು ಬೋಧಿಸುವಾಗ ಪೂರ್ಣವಾಗಿ ಪದ್ಯವನ್ನು ವರ್ಣಿಸಿ ವಿದ್ಯಾರ್ಥಿಗಳಿಗೆ ಕಲಿಸುತ್ತಾರೆ. ಏಕೆಂದರೆ,

ಎ. ಪದ್ಯದ ಆಶಯಕ್ಕೆ ಧಕ್ಕೆಯಾಗಬಾರದು ಹಾಗೂ ಕವಿಯ ವರ್ಣನೆಯನ್ನು ಹಾಗೆಯೇ ಗ್ರಹಿಸಬೇಕು

**ಬಿ. ಪದ್ಯದ ಸಾರಾಂಶಕ್ಕೆ / ರಸಾನುಭವಗಳಿಗೆ ಧಕ್ಕೆಯಾಗಬಾರದು**

ಸಿ. ಪದ್ಯದ ಭಾವಾರ್ಥ ಸಂಕ್ಷಿಪ್ತತೆಗೆ ಒಳಪಟ್ಟಿರುವುದರಿಂದ

ಡಿ. ಪದ್ಯದ ಭಾಗಗಳು ಚಿಕ್ಕ ಚಿಕ್ಕ ಘಟಕಗಳಾಗಿರುವುದರಿಂದ

127.ಭಾಷಾ ತರಗತಿಯಲ್ಲಿ ವಿದ್ಯಾರ್ಥಿಗಳು ತಾವು ಆಡಿದ ಆಟ, ಬಳಸಿದ ಸಾಮಾನುಗಳು, ತೊಡಗಿಸಿಕೊಂಡ ಚಟುವಟಿಕೆಯ ಬಗ್ಗೆ ಮಾತನಾಡುತ್ತಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ:

ಎ. ಆಟದ ಬಗೆಗಿನ ಜ್ಞಾನ ಹೆಚ್ಚುತ್ತದೆ

**ಬಿ. ಮಾತು, ಆಟ, ಚಟುವಟಿಕೆ, ಕಲಿಕೆ ಜೊತೆಯಾದಾಗ ಅವರ ಭಾಷಾ ಸಂಪತ್ತು ಸಮೃದ್ಧವಾಗುತ್ತದೆ**

ಸಿ. ತರಗತಿಯ ಆಚೆಗಿನ ಜ್ಞಾನವನ್ನು ತರಗತಿಯಲ್ಲಿ ಬಳಸಿಕೊಳ್ಳುತ್ತಾರೆ

ಡಿ. ಕಲಿಕೆಯ ಅನುಭವಗಳು ಕುಂಠಿತವಾಗುತ್ತವೆ

128.ಒಳಗೊಳ್ಳುವ ತರಗತಿಗಳಲ್ಲಿ ಭಾಷಾ ಶಿಕ್ಷಕ ಕಲಿಕೆಯನ್ನು ಹೀಗೆ ರೂಪಿಸುತ್ತಾನೆ:

**ಎ. ಪ್ರತಿ ಕಲಿಕಾಪರಿಸರ ಹಾಗೂ ಪ್ರತಿ ಮಗುವೂ ತನ್ನ ವೈಯಕ್ತಿಕ ಸಾಮರ್ಥ್ಯಕ್ಕನುಗುಣವಾಗಿ ಕಲಿಯುವಂತೆ ರೂಪಿಸಿರುತ್ತಾನೆ.**

ಬಿ. ಮಗುವಿನ ಪ್ರತಿಭೆಗೆ ತಕ್ಕಂತೆ ಕಲಿಕೆ ರೂಪಿಸಿರುತ್ತಾನೆ

ಸಿ. ಆಯಾಯ ಕಲಿಕಾ ದೋಷಗಳನ್ನು ಮಗುವೇ ಗುರುತಿಸಿಕೊಳ್ಳುವ ಕಲಿಕೆ ರೂಪಿಸಿರುತ್ತಾನೆ

ಡಿ. ಕಲಿಕಾ ದೋಷವಿರುವ ಮಗು ಪೋಷಕರಿಂದ ಬಗೆಹರಿಸಿಕೊಳ್ಳುವ ಕಲಿಕಾ ಪರಿಸರವನ್ನು ರೂಪಿಸಿರುತ್ತಾನೆ

129.ಭಾಷಾ ಶಿಕ್ಷಕ ತರಗತಿಯಲ್ಲಿ ನಾಟಕ ಬೋಧನೆ ಮಾಡುವಾಗ ವಿದ್ಯಾರ್ಥಿಗಳಿಂದ ಪಾತ್ರಾಭಿನಯ ಮಾಡಿಸುತ್ತಾನೆ. ಏಕೆಂದರೆ,

ಎ. ವಿದ್ಯಾರ್ಥಿಗಳಲ್ಲಿ ಧೈರ್ಯ, ಸ್ಥೈರ್ಯಗಳುಂಟಾಗುತ್ತದೆ
ಬಿ. ಉಚ್ಚಾರ, ಧ್ವನಿಶೈಲಿ ಸಿದ್ಧಿಸುತ್ತದೆ
ಸಿ. ಸಂಭಾಷಣಾ ಕೌಶಲ ಬೆಳೆಯುತ್ತದೆ
**ಡಿ. ಮೇಲಿನ ಎಲ್ಲವೂ**

130.ತರಗತಿಯಲ್ಲಿ ಭಾಷಾ ಶಿಕ್ಷಕ ಭಾಷೆ ಕಲಿಸುವುದೆಂದರೆ:

**ಎ. ವಿದ್ಯಾಥಿಗಳಿಗೆ ಒಂದು ನಿರ್ದಿಷ್ಟ ಚಿಂತನಾಶೈಲಿ ರೂಢಿಸಿಕೊಳ್ಳಲು ಸಹಾಯ ಮಾಡುವುದೇ ಆಗಿದೆ**

ಬಿ. ಭಾಷೆಯ ನಿರ್ದಿಷ್ಟ ಅಕ್ಷರಭ್ಯಾಸ ಹಾಗೂ ಪದಗಳನ್ನು ಕಲಿಯಲು ಸಹಾಯ ಮಾಡುವುದೇ ಆಗಿದೆ

ಸಿ. ವಿದ್ಯಾರ್ಥಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಮಾತನಾಡುವ ಕೌಶಲ ಗಳಿಸಲು ಸಹಾಯ ಮಾಡುವುದೇ ಆಗಿದೆ

ಡಿ. ವಿದ್ಯಾರ್ಥಿಗಳು ತಮ್ಮದೇ ನಿರ್ದಿಷ್ಟ ಶೈಲಿಯಲ್ಲಿ ಬರೆಯುವ ಕೌಶಲ ಗಳಿಸಲು ಸಹಾಯ ಮಾಡುವುದೇ ಆಗಿದೆ.

131. ಗದ್ಯ ಬುದ್ಧಿಗಮ್ಯವಾದರೆ ಪದ್ಯವು ಹೃದಯಗಮ್ಯವಾದುದು. ಈ ವಾಕ್ಯದಲ್ಲಿ ಪದ್ಯದ ಬಗ್ಗೆ ಅರ್ಥೈಸುವುದಾದರೆ:

ಎ. ಪದ್ಯವು ಹೃದಯದಲ್ಲಿ ಹುಟ್ಟುತ್ತದೆ

**ಬಿ. ಪದ್ಯದಲ್ಲಿ ಅದರ ಲಯ, ರಾಗ, ಧ್ವನಿ ಹಾಗೂ ರಸಾನುಭವ ಮನಸ್ಸಿಗೆ ನಾಟುತ್ತದೆ**

ಸಿ. ಪದ್ಯವು ಹೃದಯವನ್ನು ವಿಕಸಿತಗೊಳಿಸುತ್ತದೆ

ಡಿ. ಪದ್ಯದಲ್ಲಿ ಭಾವಾನುವಾದ ಕವಿಯ ಹಿನ್ನಲೆಯಲ್ಲಿ ಹುಟ್ಟುವುದರಿಂದ ಮನಸ್ಸಿಗೆ ನಾಟುತ್ತದೆ

132.ಭಾಷಾ ಬೋಧನೆಯ ಪ್ರಧಾನ ಉದ್ದೇಶವೇನೆಂದರೆ,

ಎ. ವಿದ್ಯಾರ್ಥಿಗಳಲ್ಲಿ ಆಲಿಸುವ ಕೌಶಲವನ್ನು ಬೆಳೆಸುವುದು

ಬಿ. ವಿದ್ಯಾರ್ಥಿಗಳಲ್ಲಿ ಮಾತನಾಡುವ ಕೌಶಲವನ್ನು ಬೆಳೆಸುವುದು

**ಸಿ. ವಿದ್ಯಾರ್ಥಿಗಳಲ್ಲಿ ಮೌಖಿಕ ಹಾಗೂ ಲಿಖಿತ ಅಭಿವ್ಯಕ್ತಿ ಕೌಶಲ ಬೆಳೆಸುವುದು**

ಡಿ. ವಿದ್ಯಾರ್ಥಿಗಳಲ್ಲಿ ಬರವಣಿಗೆ ಕೌಶಲವನ್ನು ಬೆಳೆಸುವುದು

133.ತರಗತಿಯಲ್ಲಿ ಭಾಷಾ ಶಿಕ್ಷಕ ಗದ್ಯದ ವಿಷಯಾಂಶಗಳ ಜೊತೆ ಜೊತೆಯಲ್ಲಿ ಭಾಷಾಂಶಗಳನ್ನು ಸಹ ಅನುಕೂಲಿಸುತ್ತಾನೆ. ಏಕೆಂದರೆ,

**ಎ. ಭಾಷಾ ಬಳಕೆಯನ್ನು ಸಮೃದ್ಧಗೊಳಿಸುವ ಅನುಭವ ಒದಗಿಸುವ ಉದ್ದೇಶವಿರುವುದರಿಂದ**

ಬಿ. ವಿದ್ಯಾರ್ಥಿಗಳ ಪ್ರತ್ಯೇಕ ವ್ಯಾಕರಣ ಕಲಿಕೆ ಬೇಸರ ಮೂಡಿಸುತ್ತದೆ

ಸಿ. ಭಾಷಾಂಶಗಳು ವಿಷಯಾಂಶಗಳು ಹಿನ್ನಲೆಯಲ್ಲಿ ಅಮುಖ್ಯವಾಗುವುದರಿಂದ

ಡಿ. ವಿಷಯಾಂಶಗಳು ಹಾಗೂ ಭಾಷಾಂಶಗಳು ಸಮಸಮವಾಗಿ ಕಂಡು ಬರುವುದರಿಂದ

134.ತರಗತಿಯಲ್ಲಿ ಭಾಷಾ ಶಿಕ್ಷಕ ವಿವಿಧ ಸಾಹಿತ್ಯ ಪ್ರಕಾರಗಳನ್ನು ಉದಾಹರಣೆಗಳೊಂದಿಗೆ ಚರ್ಚಿಸುತ್ತಾನೆ. ಇದರಿಂದ ವಿದ್ಯಾರ್ಥಿಗಳಲ್ಲಿ ಉಂಟಾಗುತ್ತದೆ.

**ಎ. ವಿವಿಧ ಸಾಹಿತ್ಯ ಪ್ರಕಾರಗಳ ಬಗೆಗೆ ಆಸಕ್ತಿ ಮತ್ತು ಅಭಿರುಚಿ ಉಂಟಾಗುತ್ತದೆ**

ಬಿ. ವಿವಿಧ ಸಾಹಿತ್ಯ ಪ್ರಕಾರಗಳನ್ನು ಅರ್ಥೈಸುವ ಕೌಶಲ ಉಂಟಾಗುತ್ತದೆ

ಸಿ. ವಿವಿಧ ಸಾಹಿತ್ಯ ಪ್ರಕಾರಗಳಿಗಿರುವ ಹೋಲಿಕೆ ವ್ಯತ್ಯಾಸ ಅರಿವು ಉಂಟಾಗುತ್ತದೆ.

ಡಿ. ಈ ಮೇಲಿನ ಯಾವುದೂ ಅಲ್ಲ

135.ಉತ್ತಮ ಮಾತುಗಾರಿಕೆ ಕೌಶಲ ಬೆಳೆಸುವ ಚಟುವಟಿಕೆ ___________

ಎ. ನಕಲು ಬರವಣಿಗೆ ಪುಸ್ತಕ ಅಭ್ಯಾಸ
**ಬಿ. ಪಾತ್ರಾಭಿನಯ ಚಟುವಟಿಕೆ**
ಸಿ. ದಿನಪತ್ರಿಕೆಗಳ ಸಂಗ್ರಹ
ಡಿ. ಉತ್ತಮ ಪುಸ್ತಕಗಳ ಸಂಗ್ರಹ

136.ಶಿಕ್ಷಕರು ಮಕ್ಕಳಲ್ಲಿ ಬೆಳೆಸಬೇಕಾದ ಮೊದಲ ಗುಣ
ಎ. ಸೋಲಿನಿಂದ ಚೇತರಿಸಿಕೊಳ್ಳುವುದು
ಬಿ. ಗೆಲ್ಲುವ ಭರವಸೆ
ಸಿ. ಪ್ರೀತಿಸುವ ಗುಣ
**ಡಿ. ಆತ್ಮವಿಶ್ವಾಸ**

137.ಬ್ರೂನರ್ ಸಾರುವೆಯ ಕಲಿಕಾ ನಿಯಮದಂತೆ ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಕಲಿಕೆಗೆ ಸಾರುವೆಯಲ್ಲ.
ಎ. ಶಿಕ್ಷಕರ ಸಹಕಾರ
ಬಿ. ಸಹಪಾಠಿಗಳ ಸಹಕಾರ
**ಸಿ. ಸ್ವ ಅಧ್ಯಯನ**
ಡಿ. ತಂತ್ರಜ್ಞಾನದ ಸಹಾಯ

138.ಭಾಷಾ ತರಗತಿಯಲ್ಲಿ ಮಗುವಿಗೆ ಧ್ವನಿಸುರುಳಿಯನ್ನು ಕೇಳಿಸಿಕೊಂಡು ಟಿಪ್ಪಣಿ ಮಾಡುವ ಚಟುವಟಿಕೆ ನೀಡಲಾಗಿದೆ. ಇದು ಮಗುವಿನ ಯಾವ ಕೌಶಲ ಬೆಳೆಸುತ್ತದೆ.
ಎ. ಓದುಗಾರಿಕೆ
ಬಿ. ಮಾತುಗಾರಿಕೆ
ಸಿ. ಬರವಣಿಗೆ
**ಡಿ. ಆಲಿಸುವಿಕೆ**

139.ಭಾಷಾ ತರಗತಿಯಲ್ಲಿ ಮಾತನಾಡಲು ಹಿಂಜರಿಯುತ್ತಿದ್ದು ಅದಕ್ಕೆ ಪ್ರೋತ್ಸಾಹಿಸಲು ಶಿಕ್ಷಕರು ಈ ಚಟುವಟಿಕೆ ನೀಡಬಹುದು
**ಎ. ತನ್ನ ಅನುಭವ ಹಂಚಿಕೊಳ್ಳಲು ಅವಕಾಶ**
ಬಿ. ಬರೆದು ತನ್ನ ಅಭಿಪ್ರಾಯ ತಿಳಿಸಲು ಅವಕಾಶ
ಸಿ. ಮನೆಯಲ್ಲಿ ಅಭ್ಯಾಸ ಮಾಡಲು ಅವಕಾಶ
ಡಿ. ಗುಂಪಿನಲ್ಲಿ ಚರ್ಚಿಸಲು ಅವಕಾಶ

140.ಪ್ರಾಥಮಿಕ ಹಂತದ ತರಗತಿಗಳನ್ನು ಮೌಲ್ಯಮಾಪನ ಮಾಡುವಾಗ
ಎ. ಲಿಖಿತ ಮೌಲ್ಯಮಾಪನ ತಂತ್ರ ಬಳಕೆ
ಬಿ. ಮೌಖಿಕ ಮೌಲ್ಯಮಾಪನ ತಂತ್ರ ಬಳಕೆ
ಸಿ. ಪ್ರತ್ಯಕ್ಷ ಮತ್ತು ಪರೋಕ್ಷ ಮೌಲ್ಯಮಾಪನ ತಂತ್ರ ಬಳಕೆ
**ಡಿ. ಮೇಲಿನ ಎಲ್ಲವೂ**

141. ಇವುಗಳಲ್ಲಿ ಯಾವುದು ಉತ್ತಮ ಕಲಿಕಾ ಸಂಪನ್ಮೂಲದ ಲಕ್ಷಣವಲ್ಲ
ಎ. ಸ್ಥಳೀಯವಾಗಿ ಲಭ್ಯವಿರುವುದು
ಬಿ. ಕಡಿಮೆ ವೆಚ್ಚದಾಯಕವಾದದ್ದು
**ಸಿ. ತರಗತಿಯಲ್ಲಿ ದೊಡ್ಡ ಗುಂಪಿಗೆ ಮಾತ್ರ ಬಳಸುವಂತಹದ್ದು**
ಡಿ. ತಂತ್ರಜ್ಞಾನದ ಸ್ಪರ್ಶ ಹೊಂದಿರುವಂತಹದ್ದು

142.ಇವುಗಳಲ್ಲಿ ಯಾವುದು ನಿರೂಪಣಾತ್ಮಕ ಸಾಹಿತ್ಯದ ಪ್ರಕಾರವಲ್ಲ
ಎ. ಸಣ್ಣಕತೆ ಬಿ. ಕಾದಂಬರಿ
**ಸಿ. ಪ್ರಬಂಧ** ಡಿ. ಆತ್ಮಕಥೆ

143.ಬಹುಭಾಷಾ ಪರಂಪರೆ ಹೊಂದಿರುವ ಭಾರತದ ಸಮಾಜವು ಮಗುವಿನ ಕಲಿಕೆಯ ಸಂದರ್ಭದಲ್ಲಿ
ಎ. ಬಹುಭಾಷಾ ಪರಿಸರ ಮಗುವಿನ ಕಲಿಕೆಗೆ ಗೊಂದಲವಾಗುತ್ತದೆ
ಬಿ. ಬಹುಭಾಷಾ ಪರಿಸರ ಮಕ್ಕಳ ಸಂವಹನಕ್ಕೆ ತೊಂದರೆಯಾಗುತ್ತದೆ
**ಸಿ. ಮಕ್ಕಳ ಬಹುಮುಖಿ ಕಲಿಕೆಗೆ ಪ್ರೋತ್ಸಾಹದಾಯಕವಾಗಿರುತ್ತದೆ**
ಡಿ. ಮಕ್ಕಳ ಸಾಮಾಜಿಕ ಹೊಂದಾಣಿಕೆಗೆ ತೊಂದರೆಯಾಗುತ್ತದೆ

144.ಭಾಷಾ ಬೋಧನೆಯ ಸಂದರ್ಭದಲ್ಲಿ ವ್ಯಾಕರಣ ಬೋಧನೆಯು
ಎ. ಪ್ರತ್ಯೇಕವಾಗಿ ತಿಳಿಸುವುದು ಉತ್ತಮ
**ಬಿ. ಅಂತರ್ಗತವಾಗಿ ವಿವರಣೆ ಉತ್ತಮ**
ಸಿ. ಮೊದಲಿಗೆ ವ್ಯಾಕರಣ ಕಲಿತು ನಂತರ ಭಾಷಾ ಕಲಿಕೆ ಸರಳ
ಡಿ. ಮೊದಲಿಗೆ ಭಾಷಾ ಕಲಿತು ನಂತರ ವ್ಯಾಕರಣ ಕಲಿಯುವುದು ಉತ್ತಮ

145.ತರಗತಿಯಲ್ಲಿ ವಿದ್ಯಾರ್ಥಿಗಳು ಮುದ್ರಿತ ಪಠ್ಯ, ಚಿತ್ರ ಇತ್ಯಾದಿಗಳನ್ನು ಡಿಕೋಡ್ ಮಾಡಿ ಅವುಗಳು ನೀಡುವ ಸಂದೇಶಗಳನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆಯು ಈ ಕೌಶಲವಾಗಿದೆ.

ಎ) ಆಲಿಸುವಿಕೆ | ಬಿ) ಮಾತುಗಾರಿಕೆ

**ಸಿ) ಓದುಗಾರಿಕೆ** | ಡಿ) ಬರವಣಿಗೆ

146.ತರಗತಿಯಲ್ಲಿ ಭಾಷಾ ಶಿಕ್ಷಕರು ವಿದ್ಯಾರ್ಥಿಗಳಿಗೆ ಓದಿದ ಪಟ್ಟಿಯು ನೀಡುವ ಅರ್ಥವನ್ನು ವಿಮರ್ಶೆಗೆ ಒಳಪಡಿಸುತ್ತಾ ಓದಿ ಅರ್ಥೈಸಿಕೊಳ್ಳುವಂತೆ ಮಾಡುವುದೇ,

**ಎ) ಸಮರ್ಥ ಓದುಗಾರಿಕೆ** | ಬಿ) ಸಕ್ರಿಯ ಆಲಿಸುವಿಕೆ

ಸಿ) ಸಮರ್ಥ ಮಾತುಗಾರಿಕೆ | ಡಿ) ಸಕ್ರಿಯ ಬರವಣಿಗೆ

147.ಓದುತ್ತಿರುವ ಪಠ್ಯವನ್ನು ಅರ್ಥೈಸಿಕೊಳ್ಳುತ್ತಿದ್ದಾರೆಯೇ ಎಂಬುದನ್ನು ತಿಳಿಯಬೇಕಾದರೆ

a. ಓದಿದ ಪಠ್ಯದ ಸಾರಾಂಶ ಹೇಳುವುದು

b. ಕೈಬರಹ ಅಂದವಾಗಿರುವಂತೆ ಸೂಚಿಸುವುದು

c. ಸಾಂದರ್ಭಿಕ ಅರ್ಥಗಳ ಕುರಿತಂತೆ ಪ್ರಶ್ನೆ ಕೇಳುವುದು

d. ಶ್ರವ್ಯ ಸಾಧನ ಬಳಕೆ ಮಾಡುವಂತೆ ಹೇಳುವುದು

ಎ) a ಮತ್ತು b ಸರಿ | **ಬಿ) a ಮತ್ತು c ಸರಿ**

ಸಿ) b ಮತ್ತು c ಸರಿ | ಡಿ) c ಮತ್ತು d ಸರಿ

148.ಕಡಿಮೆ ಸಮಯದಲ್ಲಿ ಹೆಚ್ಚು ಪಠ್ಯ ಭಾಗವನ್ನು ಓದಿ ಅರ್ಥೈಸಿಕೊಳ್ಳುವ ಓದು

ಎ) ವಿರಾಮದ ಓದು | ಬಿ) ಗಟ್ಟಿಯಾದ ಓದು

**ಸಿ) ಮೌನ ಓದು** | ಡಿ) ವೇಗದ ಓದು

149.ಗಟ್ಟಿ ಓದು ಮತ್ತು ಮೌನ ಓದು ಇವುಗಳಲ್ಲಿರುವ ಸಾಮ್ಯತೆ ಇದಾಗಿದೆ

ಎ) ಓದುಗ ಪಠ್ಯದೊಡನೆ ನಡೆಸುವ ಸಂವಾದ ಇತರರಿಗೆ ಕೇಳಿಸುವುದಿಲ್ಲ

ಬಿ) ಭಾಷೆಯ ಉಚ್ಚಾರ, ಸ್ವರಗಳ ಏರಿಳಿತ ಸಾಧ್ಯ

**ಸಿ) ಪದಗಳ ಅರ್ಥಗ್ರಹಿಸುವುದು**

ಡಿ) ಅತಿ ಕಡಿಮೆ ಸಮಯದಲ್ಲಿ ಹೆಚ್ಚು ಓದಬಹುದು

150.ಮಕ್ಕಳು ಓದನ್ನು ಹೆಚ್ಚು ಅರ್ಥಪೂರ್ಣವಾಗಿಸಿಕೊಳ್ಳಲು ಶಿಕ್ಷಕರು ಈ ಚಟುವಟಿಕೆ ಮಾಡಲು ಮಕ್ಕಳಿಗೆ ತಿಳಿಸಬಹುದಾಗಿದೆ.

ಎ) ಪದಗಳನ್ನು ಜೋಡಿಸಿಕೊಂಡು ವಾಕ್ಯಗಳನ್ನು ಗಟ್ಟಿಯಾಗಿ ಓದುವುದು

ಬಿ) ನಿಗದಿತ ಪಠ್ಯವನ್ನು ಮೌನವಾಗಿ ಓದಿ ಗ್ರಹಿಸುವುದು

ಸಿ) ಲೇಖನ ಚಿಹ್ನೆಗಳ ಬಳಕೆಯನ್ನು ಅರ್ಥ ಮಾಡಿಕೊಳ್ಳುವುದು

**ಡಿ) ತಾವು ಓದಿದ ವಿಷಯಾಂಶಗಳ ಸಾರಾಂಶವನ್ನು ಬರೆದು ಬುಲೆಟಿನ್ ಬೋರ್ಡ್‌ಗಳಲ್ಲಿ ಪ್ರದರ್ಶಿಸಲು ಅವಕಾಶ ನೀಡುವುದು**

151. ಸಮರ್ಥ ಓದುಗರ ಲಕ್ಷಣಗಳೆಂದರೆ

I. ಓದುವಾಗ ಪ್ರಜ್ಞಾಪೂರ್ವಕವಾದ ಚಿಂತನೆಗಳ ಆಲೋಚನೆ

II.ಅರ್ಥದ ಬಗ್ಗೆ ಗಮನ ಮತ್ತು ಅರ್ಥೈಸಿಕೊಳ್ಳುವಿಕೆಯ ಗುಣಮಟ್ಟ ಪರಿಶೀಲನೆ

III.ಅರ್ಥವಾಗದಿರುವುದನ್ನು ತಕ್ಷಣವೇ ಗುರುತಿಸುವುದು

IV.ಅರ್ಥವಾಗಲು ಇರುವ ಅಡಚಣೆಗಳನ್ನು ಗುರುತಿಸುವುದು

ಎ) I, III ಮತ್ತು IV ಸರಿ | ಬಿ) I, II ಮತ್ತು IV ಸರಿ

ಸಿ) I. II ಮತ್ತು III ಸರಿ | **ಡಿ) ಎಲ್ಲವೂ ಸರಿ**

152.ಓದನ್ನು ಅನುಕೂಲಿಸುವ ತಂತ್ರಗಳಲ್ಲಿ ಇದು ಒಂದಾಗಿದೆ

ಎ. ಪಠ್ಯದಲ್ಲಿ ಬಳಸಲಾದ ನುಡಿಗಟ್ಟುಗಳ ವಿವಿಧ ಅರ್ಥಗಳನ್ನು ತಿಳಿಸುವುದು

**ಬಿ. ಪಠ್ಯದ ಬೆಳವಣಿಗೆಯನ್ನು ಊಹಿಸುತ್ತಾ ಅಂತರ್ಗತ ವಿಚಾರಗಳನ್ನು ತಿಳಿಯುವಂತೆ ಅನುಕೂಲಿಸುವುದು**

ಸಿ. ಪಠ್ಯವನ್ನು ಮೌನವಾಗಿಯೇ ಓದಬೇಕೆಂದು ಸೂಚಿಸುವುದು

ಡಿ. ಪದಗಳನ್ನು ಜೋಡಿಸಿಕೊಂಡು ವಾಕ್ಯಗಳನ್ನು ಗಟ್ಟಿಯಾಗಿ ಓದಲು ಸೂಚಿಸುವುದು

153.ಅತ್ಯಂತ ಶ್ರೇಷ್ಠವಾದ ಮೌನ ಓದು ಎಂದರೆ

ಎ) ಮುದ್ರಿತ ಪಠ್ಯವನ್ನು ಮೌಖಿಕ ಭಾಷೆಗೆ ವರ್ಗಾಯಿಸಿಕೊಳ್ಳುತ್ತಾ ಅರ್ಥೈಸಿಕೊಳ್ಳುವುದು

ಬಿ) ಮುದ್ರಿತ ಪಠ್ಯವನ್ನು ಅರ್ಥೈಸಿಕೊಳ್ಳದೇ ಹಾಗೆಯೇ ಮೌಕಿಕ ಭಾಷೆಯಲ್ಲಿ ಪುನರುಚ್ಚರಿಸುವುದು

**ಸಿ) ಮುದ್ರಿತ ಪಠ್ಯವನ್ನು ಮೌಖಿಕ ಭಾಷೆಗೆ ವರ್ಗಾಯಿಸಿಕೊಳ್ಳದೆ ನೇರವಾಗಿ ಅರ್ಥೈಸಿಕೊಳ್ಳುವುದು**

ಡಿ) ಮುದ್ರಿತ ಪಠ್ಯವನ್ನು ಗಟ್ಟಿಯಾಗಿ ಮುದ್ರಿತ ಶೈಲಿಯಲ್ಲಿಯೇ ಓದುವುದು

154.ಭಾಷಾ ಶಿಕ್ಷಕರು ತರಗತಿಯಲ್ಲಿ ಓದುಗಾರಿಕೆಯನ್ನು ಕಲಿಸುವಾಗ ಮೊದಲು ನಿತ್ಯ ಜೀವನಕ್ಕೆ ಸಂಬಂಧಿಸಿದ ಸರಳ ಪದಗಳನ್ನು ಪರಿಚಯಿಸಿ ನಂತರ ಅಮೂರ್ತ ಪದಗಳು, ಒತ್ತಕ್ಷರಗಳು, ಸಂಯುಕ್ತಾಕ್ಷರಗಳು, ದೀರ್ಘಾಕ್ಷರಗಳಿರುವ ಪದಗಳನ್ನು ಕಲಿಕಾ ಸಾಮಗ್ರಿಗಳನ್ನು ಬಳಸಿ ಪರಿಚಯಿಸುತ್ತಾರೆ. ಇದು,

ಎ) ಅಕ್ಷರಮಾಲಾ ಪದ್ಧತಿ　　ಬಿ) ಪದಮಾಲಾ ಪದ್ಧತಿ

ಸಿ) ವಾಕ್ಯಮಾಲಾ ಪದ್ಧತಿ　　**ಡಿ) ನೋಡಿ ಹೇಳುವ ಪದ್ಧತಿ**

155.ವ್ಯಾಕರಣಾಂಶಗಳು ಹಾಗೂ ಲೇಖನ ಚಿಹ್ನೆಗಳನ್ನು ಅಳವಡಿಸಿ ಓದಿಸುವುದು

ಎ) ಮೌನ ಓದು　　ಬಿ) ಸೃಜನಶೀಲ ಓದು

ಸಿ) ಶೀಘ್ರ ಓದು　　**ಡಿ) ಗಟ್ಟಿ ಓದು**

156.ಮೌಖಿಕ ಕೌಶಲಗಳ ಪ್ರೌಢಿಮೆಯು

ಎ) ಆಲಿಸುವಿಕೆಗೆ ಬೇಕಾದ ಮೊದಲ ಸಿದ್ಧತೆ　　ಬಿ) ಬರವಣಿಗೆಗೆ ಬೇಕಾದ ಮೊದಲ ಸಿದ್ದತೆ

**ಸಿ) ಓದುಗಾರಿಕೆಗೆ ಬೇಕಾದ ಮೊದಲ ಸಿದ್ದತೆ**　　ಡಿ) ಮಾತುಗಾರಿಕೆಗೆ ಬೇಕಾದ ಮೊದಲ ಸಿದ್ಧತೆ

157.ಶಾಲೆಗಳಲ್ಲಿ ಮಕ್ಕಳ ಸಾಹಿತ್ಯ ಸಾಕಷ್ಟು ಲಭ್ಯವಿದ್ದರೆ ಆಗುವ ಉಪಯೋಗ

ಎ) ಶಾಲೆಯ ಘನತೆ ಹೆಚ್ಚುತ್ತದೆ

ಬಿ) ಶಾಲೆಯ ಹೊರ ಸೌಂದರ್ಯ ಹೆಚ್ಚುತ್ತದೆ

**ಸಿ) ಮಕ್ಕಳು ಹೆಚ್ಚಿನ ಓದಿನಲ್ಲಿ ತೊಡಗಿಕೊಳ್ಳಲು ಸಾಧ್ಯ**

ಡಿ) ಮೇಲಾಧಿಕಾರಿಗಳಿಗೆ ಶಾಲಾ ಪ್ರಗತಿ ಮಾಹಿತಿ ಕೊಡುವುದು ಸುಲಭ

158.ಗಟ್ಟಿ ಓದು ಮತ್ತು ಮೌನ ಓದಿಗಳಲ್ಲಿರುವ ಸಾಮ್ಯತೆ ಇದಾಗಿದೆ

ಎ) ಓದುತ್ತಾ ಅರ್ಥ ಗ್ರಹಿಸುವುದು

ಬಿ) ಅರ್ಥಕ್ಕೆ ತಕ್ಕಂತೆ ಧ್ವನಿ ಏರಿಳಿತಗಳೊಂದಿಗೆ ಓದುವ ಅಭ್ಯಾಸ

ಸಿ) ಮನಸ್ಸಿನ ಏಕಾಗ್ರತೆಯಿಂದ ಓದುವುದು

**ಡಿ) ವಿಷಯ ಗ್ರಹಿಕೆ ಕೌಶಲ ಬೆಳೆಸಿಕೊಳ್ಳುತ್ತಾ ಹೋಗುವುದು**

159.ಓದನ್ನು ಪ್ರೋತ್ಸಾಹಿಸಲು ಸಹಾಯಕವಾಗುವ ತರಗತಿ ಕಾರ್ಯಕ್ರಮ ಇದಾಗಿದೆ

ಎ) ಶಾಲಾ ಗ್ರಂಥಾಲಯ　　**ಬಿ) ತರಗತಿ ಗ್ರಂಥಾಲಯ**

ಸಿ) ಸಾಹಿತ್ಯ ವೇದಿಕೆ　　ಡಿ) ಸಾಂಸ್ಕೃತಿಕ ವೇದಿಕೆ

160.ತರಗತಿ ಲೈಬ್ರರಿ ಸ್ಥಾಪನೆಯ ಉದ್ದೇಶ

**ಎ) ಮಕ್ಕಳಿಗೆ ಪುಸ್ತಕದ ಒಡನಾಟ ಹೆಚ್ಚಿಸಿ ಸಮರ್ಥ ಓದುಗರನ್ನಾಗಿಸುವುದು**

ಬಿ) ವಾರ್ಷಿಕ ಪರೀಕ್ಷೆಯಲ್ಲಿ ವಿಷಯವಾರು ಹೆಚ್ಚು ಅಂಕಗಳನ್ನು ಗಳಿಸಲು ಸಹಕರಿಸುವ ಉದ್ದೇಶ

ಸಿ) ಹೆಚ್ಚುವರಿ ಅಧ್ಯಯನಕ್ಕಾಗಿ ಪುಸ್ತಕಗಳನ್ನು ಬಳಸುವ ಉದ್ದೇಶ

ಡಿ) ಅವಶ್ಯಕ ಮಾಹಿತಿಗಳನ್ನು ಒದಗಿಸುವ ಉದ್ದೇಶ

161. ಶಾಲೆಯಲ್ಲಿ ಓದುವುದನ್ನು ಉತ್ತೇಜಿಸಲು ಹಾಗೂ ಆನಂದಿಸಲು ಸ್ಥಾಪಿಸಲಾಗುವ ಕೂಟವೇ/ ಕ್ಲಬ್

ಎ) ತರಗತಿ ಲೈಬ್ರರಿ　　**ಬಿ) ಓದುಗರ ಕ್ಲಬ್**

ಸಿ) ಗ್ರಂಥಾಲಯ　　ಡಿ) ಸಾಹಿತ್ಯ ವೇದಿಕೆ

162.ಚಿಂತನೆಗಳನ್ನು ರೂಪುಗೊಳಿಸುವ ಪಾತ್ರವನ್ನು ನಿರ್ವಹಿಸುವುದು

ಎ) ಸಾಹಿತ್ಯ | **ಬಿ) ಭಾಷೆ**
ಸಿ) ಅಧ್ಯಯನ | ಡಿ) ಇವುಗಳಲ್ಲಿ ಯಾವುದು ಅಲ್ಲ

163.ಇವು ನಮ್ಮ ಭಾಷೆಯನ್ನಷ್ಟೇ ಅಲ್ಲ, ಚಿಂತನೆ ಬದುಕಿನ ಕ್ರಮ ಸಾಂಸ್ಕೃತಿಕ ಪರಂಪರೆಗಳನ್ನು ಪ್ರಭಾವಿಸುತ್ತವೆ.

ಎ) ಶಾಲೆಗಳು | ಬಿ) ಸಮುದಾಯ
**ಸಿ) ಮಾಧ್ಯಮಗಳು** | ಡಿ) ಸಂಪ್ರದಾಯ

164.ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಓಅಈ 2005 ಶಿಫಾರಸ್ಸಿನಂತೆ ಕಲಿಕೆಯ ವೈಜ್ಞಾನಿಕ ಪದ್ಧತಿ.

ಎ) ಶಿಕ್ಷಕ ಕೇಂದ್ರಿತ ಪದ್ಧತಿ | **ಬಿ) 5ಇ ರಚನಾವಾದಿ ಪದ್ಧತಿ**
ಸಿ) ಚೈತನ್ಯ ಪದ್ಧತಿ | ಡಿ) ಉಪನ್ಯಾಸ ಪದ್ಧತಿ

165.ಬಹುಭಾಷಿಕ ತರಗತಿಗಳಲ್ಲಿ ಹೆಚ್ಚು ಕ್ರಿಯಾಶೀಲರಾಗಬೇಕಿರುವುದು,

ಎ) ಪಾಲಕರು | ಬಿ) ವಿದ್ಯಾರ್ಥಿಗಳು
**ಸಿ) ಶಿಕ್ಷಕರು** | ಡಿ) ಉಪನ್ಯಾಸ ಹಿನ್ನೆಲೆ

166.5ಇ ಮಾದರಿಯ ಬೋಧನಾ ಕಲಿಕಾ ಪ್ರಕ್ರಿಯೆ ಈ ಸಿದ್ಧಾಂತವನ್ನು ಆಧರಿಸಿದೆ.

ಎ) ಬ್ಲೂಮ್ ವಾದ | **ಬಿ) ರಚನಾವಾದ**
ಸಿ) ಸಮೀಕ್ಷಾ ವಾದ | ಡಿ) ಪ್ರಯತ್ನ ದೋಷ ಕಲಿಕಾವಾದ

167.ಭಾಷೆಯ ಕಲಿಕೆ ಅನುಕೂಲಿಸುವುದೆಂದರೆ ,

ಎ) ಭಾಷಾ ಬಳಕೆದಾರರಾಗಿ ಬೋಧನೆ ಮಾಡುವುದು
ಬಿ) ಭಾಷಾ ವ್ಯಾಕರಣವನ್ನು ಹೇಳಿಕೊಡುವುದು
ಸಿ) ಶಿಶು ಕೇಂದ್ರಿತ ಬೋಧನಾ ವಿಧಾನ ಬಳಸುವುದು
**ಡಿ) ಭಾಷಾ ಗಳಿಕೆಯಲ್ಲಿರುವ ಮಿತಿಗಳನ್ನು ಮೀರಿ ಭಾಷಾ ಬಳಕೆದಾರರಾಗಿ ಬೆಳೆಯಲು ಸಹಾಯ ಮಾಡುವುದು.**

168.ಸುಗಮಕಾರರು ಭಯರಹಿತ ವಾತಾವರಣ ಕಲ್ಪಿಸಿ ಮುಕ್ತ ಅಭಿವ್ಯಕ್ತಿಗೆ ಅವಕಾಶ ಕೊಟ್ಟಾಗ

ಎ) ಪ್ರಶ್ನೆಗಳನ್ನು ಕೇಳಲು ಕಷ್ಟದ ವಾತಾವರಣ ನಿರ್ಮಾಣವಾಗುತ್ತದೆ.
**ಬಿ) ಕಲಿಕಾದಾರರು ತಮ್ಮ ಅನಿಸಿಕೆ ಕೇಳಲು ತರಗತಿ ಕ್ಷೇಮಕರ ವಾತಾವರಣವಾಗಿ ನಿರ್ಮಾಣವಾಗುತ್ತದೆ.**
ಸಿ) ನಿಧಾನಗತಿಯ ಕಲಿಕಾದಾರರು ಮಾತ್ರ ಉತ್ತರಿಸುವ ವಾತಾವರಣ ನಿರ್ಮಾಣವಾಗುತ್ತದೆ.
ಡಿ) ಶಿಕ್ಷಕರು ಪ್ರಶ್ನೆ ಕೇಳಿದಾಗ ಮಾತ್ರ ಉತ್ತರಿಸಬೇಕಾದ ವಾತಾವರಣ ನಿರ್ಮಾಣವಾಗುತ್ತದೆ.

169.ಭಾಷಾ ಗಳಿಕೆ ಮತ್ತು ಕಲಿಕೆಯ ನಡುವಿನ ವ್ಯತ್ಯಾಸ

**ಎ) ಭಾಷಾ ಗಳಿಕೆ ಅದಾಗಿಯೇ ಆಗುತ್ತದೆ. ಕಲಿಕೆಯನ್ನು ಸುಗಮಕಾರರು ಅನುಕೂಲಿಸುತ್ತಾರೆ.**
ಬಿ) ಭಾಷಾ ಗಳಿಕೆ ಶಿಕ್ಷಕರಿಂದಾಗುತ್ತದೆ.ಕಲಿಕೆಯನ್ನು ಪೋಷಕರು ಅನುಕೂಲಿಸುತ್ತಾರೆ.
ಸಿ) ಭಾಷಾ ಗಳಿಕೆ ಪೋಷಕರಿಂದಾಗುತ್ತದೆ.ಕಲಿಕೆಯನ್ನು ನೆರೆಹೊರೆಯವರು ಅನುಕೂಲಿಸುತ್ತಾರೆ.
ಡಿ) ಭಾಷಾ ಗಳಿಕೆ ತಂದೆಯಿಂದಾಗುತ್ತದೆ. ಕಲಿಕೆ ತಾಯಿಯಿಂದಾಗುತ್ತದೆ.

170. L+1 ಸಿದ್ಧಾಂತದ ಪ್ರಕಾರ

**ಎ) ವಿದ್ಯಾರ್ಥಿಗೆ ತಾನಿರುವ ಮಟ್ಟಕ್ಕಿಂತ ಒಂದು ಮಟ್ಟ ಹೆಚ್ಚಿನ ಭಾಷಾ ಸಾಮಗ್ರಿಯನ್ನು ಕೊಟ್ಟರೆ ಅವರು ಅದನ್ನು ಕಲಿಯಲು ಸಾಧ್ಯ.**
ಬಿ) ವಿದ್ಯಾರ್ಥಿಗೆ ತಾನಿರುವ ಮಟ್ಟಕ್ಕಿಂತ ಒಂದು ಮಟ್ಟ ಹೆಚ್ಚಿನ ಭಾಷಾ ಸಾಮಗ್ರಿಯನ್ನು ಕೊಟ್ಟರೆ ಅವರು ಅದನ್ನು ಕಲಿಯಲು ಅಸಾಧ್ಯ.
ಸಿ) ವಿದ್ಯಾರ್ಥಿಗೆ ಸ್ನೇಹಿತರಿಗಿಂತ ಒಂದು ಮಟ್ಟ ಹೆಚ್ಚಿನ ಭಾಷಾ ಸಾಮಗ್ರಿಯನ್ನು ಕೊಟ್ಟರೆ ಅವರು ಅದನ್ನು ಕಲಿಯಲು ಸಾಧ್ಯ.
ಡಿ) ವಿದ್ಯಾರ್ಥಿಗೆ ತನ್ನ ಶಿಕ್ಷಕರ ಮಟ್ಟಕ್ಕಿಂತ ಒಂದು ಮಟ್ಟ ಕಡಿಮೆ ಭಾಷಾ ಸಾಮಗ್ರಿಯನ್ನು ಕೊಟ್ಟರೆ ಕಲಿಯಲು ಸಾಧ್ಯ.

171. ಭಾಷಾ ಶಿಕ್ಷಣ ಯಾವಾಗಲೂ

ಎ) ಶಿಸ್ತಿನಿಂದಿರಬೇಕು | ಬಿ) ಕಟ್ಟುಪಾಡಿನಿಂದಿರಬೇಕು
ಸಿ) ಸಾಂಪ್ರದಾಯಿಕವಾಗಿರಬೇಕು | **ಡಿ) ಸಾಂದರ್ಭಿಕವಾಗಿರಬೇಕು**

172.ಕಲಿಕಾದಾರರೇ ತಮ್ಮನ್ನು ಅರ್ಥೈಸಿಕೊಳ್ಳುವಂತೆ ಮಾಡುವ ಮೌಲ್ಯಮಾಪನ

ಎ) ವ್ಯಕ್ತಿನಿಷ್ಠ ಮೌಲ್ಯಮಾಪನ

ಬಿ) ವಸ್ತುನಿಷ್ಠ ಮೌಲ್ಯಮಾಪನ

**ಸಿ) ಸ್ವ – ಮೌಲ್ಯಮಾಪನ**

ಡಿ) ರಚನಾತ್ಮಕ ಮೌಲ್ಯಮಾಪನ

173.ಪ್ರತಿಯೊಬ್ಬರಿಗೂ ಅವರವರ ಅವಶ್ಯಕತೆಗೆ ತಕ್ಕ ಕಲಿಕಾ ಅನುಭವಗಳನ್ನು ನೀಡುವುದು.

ಎ) ಸಾಮಾನ್ಯ ತರಗತಿ ಬಿ) ವಿಶೇಷ ತರಗತಿ

**ಸಿ) ಒಳಗೊಳ್ಳುವ ತರಗತಿ** ಡಿ) ಸಂಪನ್ಮೂಲ ತರಗತಿ

174.ಒಳಗೊಳ್ಳುವ ತರಗತಿಯಲ್ಲಿ ಯಾವ ರೀತಿಯ ವಿದ್ಯಾರ್ಥಿಗಳಿರುವರು?

ಎ) ಪ್ರತಿಭಾವಂತರು

ಬಿ) ಮಂದಗತಿಯಲ್ಲಿ ಕಲಿಯುವವರು

ಸಿ) ದೃಷ್ಟಿದೋಷ ಹಾಗೂ ಶ್ರವಣ ದೋಷವುಳ್ಳವರು

**ಡಿ) ಮೇಲಿನ ಎಲ್ಲರೂ**

175.ಶ್ರವಣದೋಷವಿರುವ ಮಕ್ಕಳಿಗೆ ಈ ಚಟುವಟಿಕೆಯ ಮೂಲಕ ಕಲಿಕೆಯನ್ನು ಅನುಕೂಲಿಸಿದರೆ ಸೂಕ್ತ.

ಎ) ಮಕ್ಕಳು ಕೈಯಲ್ಲಿ ಮುಟ್ಟಿ ತಿಳಿದುಕೊಳ್ಳುವಂತಹ ಸಂಪನ್ಮೂಲ ಒದಗಿಸುವುದು

ಬಿ) ಕಪ್ಪು ಹಲಗೆ ಬರವಣಿಗೆ ದೊಡ್ಡದಾಗಿರಬೇಕು

**ಸಿ) ಮಕ್ಕಳನ್ನು ಕಲಿಕೆಗೆ ಅಗತ್ಯವಾಗಿರುವ ಶಬ್ದದ ಮೂಲದ ಬಳಿಯೇ ಕುಳ್ಳಿರಿಸುವುದು.**

ಡಿ) ತರಗತಿಯಲ್ಲಿ ಭೂತಗನ್ನಡಿ ವ್ಯವಸ್ಥೆ ಮಾಡುವುದು.

176.ಒಳಗೊಳ್ಳುವ ಭಾಷಾ ತರಗತಿಗಳನ್ನು ಮೌಲ್ಯಮಾಪನ ಮಾಡುವಾಗ ಗಮನಿಸಬೇಕಾದ ಮುಖ್ಯ ಅಂಶ

**ಎ) ಎಲ್ಲಾ ರೀತಿಯ ಕಲಿಕಾದಾರರಿಗೂ ಪ್ರಸ್ತುತವಾಗುವ ಕಲಿಕಾ ಸೂಚಕಗಳನ್ನು ಗುರುತಿಸುವುದು.**

ಬಿ) ಎಲ್ಲರನ್ನು ಒಂದೇ ಮಾನದಂಡದಿಂದ ನೋಡುವುದು.

ಸಿ) ಭಿನ್ನ ಸಾಮರ್ಥ್ಯವಿರುವ ಮಕ್ಕಳಿಗೆ ಮೌಲ್ಯಮಾಪನ ಮಾಡದೆ ಇರುವುದು

ಡಿ) ಮೌಖಿಕ ಹಾಗೂ ಬರವಣಿಗೆ ರೂಪದಲ್ಲಿ ಮೌಲ್ಯಮಾಪನ ಮಾಡುವುದು.

177.ಶಿಕ್ಷಣ ಹಕ್ಕು ಕಾಯ್ದೆಯಡಿ ಯಾವ ವಯಸ್ಸಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ.

ಎ) 0 – 14 **ಬಿ) 6 – 14**

ಸಿ) 3 – 14 ಡಿ) 6 – 16

178.6 ರಿಂದ 14 ವಯಸ್ಸಿನ ಮಕ್ಕಳಿಗೆ ಶಿಕ್ಷಣವು ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿದ ಸಂವಿಧಾನದ ವಿಧಿ.

ಎ) 20 (ಎ) **ಬಿ) 21 (ಎ)**

ಸಿ) 22 (ಎ) ಡಿ) 23 (ಎ)

179.ಮಕ್ಕಳಿಗೆ ಶಿಕ್ಷಣ ನೀಡುವುದು ಪೋಷಕರ ಕರ್ತವ್ಯ ಎಂದು ಪ್ರತಿಪಾದಿಸಿದ ಸಂವಿಧಾನದ ವಿಧಿ.

ಎ) 50 (ಎ) **ಬಿ) 51 (ಎ)**

ಸಿ) 22 (ಎ) ಡಿ) 53 (ಎ)

180. 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪ್ರತಿಪಾದಿಸಿದ ಸಂವಿಧಾನದ ವಿಧಿ.

ಎ) 42 ಬಿ) 43

ಸಿ) 44 **ಡಿ) 45**

181. ಭಾರತದ ಸಂವಿಧಾನದ ಯಾವ ಭಾಗದಲ್ಲಿ ಅಧಿಕೃತ ಭಾಷೆಗಳ ಪ್ರಸ್ತಾಪ ಮಾಡಲಾಗಿದೆ.

**ಎ) 8ನೇ ಶೆಡ್ಯೂಲ್ – 22 ಭಾಷೆ** ಬಿ) 9ನೇ ಶೆಡ್ಯೂಲ್ – 15 ಭಾಷೆ

ಸಿ) 10ನೇ ಶೆಡ್ಯೂಲ್ – 24 ಭಾಷೆ ಡಿ) 11ನೇ ಶೆಡ್ಯೂಲ್ – 18 ಭಾಷೆ

182. ಪ್ರಾಥಮಿಕ ಶಿಕ್ಷಣದಲ್ಲಿ ಭಾಷಾ ಅಲ್ಪಸಂಖ್ಯಾತ ಮಕ್ಕಳು ತಮ್ಮ ಮಾತೃ ಭಾಷೆಯಲ್ಲಿ ಕಲಿಯಲು ಅವಕಾಶ ಪ್ರತಿಪಾದಿಸುವ ಸಂವಿಧಾನದ ವಿಧಿ.

ಎ) 351 (ಎ) **ಬಿ) 350 (ಎ)**

ಸಿ) 251 (ಎ) ಡಿ) 250 (ಎ)

183. ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಪಾಲಿಸಬೇಕಾದ ನಿಯಮ.

ಎ)ಕಂಠಪಾಠ ಮತ್ತು ಪುನರಾವರ್ತನಾ ವಿಧಾನ

**ಬಿ) ಅನುಕರಣ ಮತ್ತು ಅಭ್ಯಾಸ ನಿಯಮ**

ಸಿ) ಉಪನ್ಯಾಸ ಮತ್ತು ಪ್ರಶ್ನೋತ್ತರ ನಿಯಮ

ಡಿ) ಸಿದ್ಧತೆ ಹಾಗೂ ಪ್ರೋತ್ಸಾಹ ನಿಯಮ

184. ಉದಾಹರಣೆಗಳ ಮೂಲಕ ಸೂತ್ರದ ಕಡೆಗೆ ಪರಿಚಯಿಸಿ ವಿವರಿಸುವ ವ್ಯಾಕರಣ ಬೋಧನಾ ಪದ್ಧತಿ.

ಎ) ನಿಗಮನ ಪದ್ಧತಿ

ಬಿ) ಉದಾಹರಣ ಪದ್ಧತಿ

**ಸಿ) ಅನುಗಮನ ಪದ್ಧತಿ**

ಡಿ) ಉಪನ್ಯಾಸ ಪದ್ಧತಿ

185. ಪಾಠ ಯೋಜನೆಯಿಂದ ಶಿಕ್ಷಕರಿಗಾಗುವ ಅನುಕೂಲ

ಎ) ಮಕ್ಕಳಿಗೆ ಬೇಗ ಅರ್ಥವಾಗಲು ಸಹಾಯಕ

**ಬಿ) ಬೋಧನೆಯಲ್ಲಿ ಆತ್ಮವಿಶ್ವಾಸ ಬೆಳೆಸುವಿಕೆ**

ಸಿ) ದಾಖಲೀಕರಣ ಮತ್ತು ಮೌಲ್ಯಮಾಪನಕ್ಕೆ ಸಹಾಯಕ

ಡಿ) ಬೋಧನೆಯ ಸಮಸ್ಯೆಗಳನ್ನು ಬಗೆಹರಿಸುತ್ತವೆ

# ಮಾದರಿ ಪ್ರಶ್ನೆ ಪತ್ರಿಕೆ – 1

## ಭಾಷೆ – 1

## ಕನ್ನಡ

**ಸೂಚನೆ: (ಪ್ರಶ್ನೆ ಸಂಖ್ಯೆ 1 ರಿಂದ 8): ಈ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ:**

ಯಾವುದೇ ಒಂದು ಪ್ರದೇಶದ ಅಭಿವೃದ್ಧಿಗೆ ರೂಪಿಸುವ ಕಾರ್ಯಕ್ರಮ ಹೇಗಿರಬೇಕು ಎಂಬ ವಿಷಯವನ್ನು 'ಚಿಪ್ಕೋ ಚಳವಳಿ' ಜನರಿಗೆ, ಸರ್ಕಾರಕ್ಕೆ ಬಹು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತಿದೆ. ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು; ಪರಿಸರಕ್ಕೆ ಪೂರಕವಾಗಿರಬೇಕು. ವಿನಾಶವಿಲ್ಲದ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು – ಇದು ಚಿಪ್ಕೋ ಚಳವಳಿಯ ಮೂಲಮಂತ್ರ. ಅರಣ್ಯಗಳು ಮರಮಟ್ಟುಗಳನ್ನೂ, ರಾಳವನ್ನೂ ಒದಗಿಸುವ ಬೃಹತ್ ಆಗರ – ಇದು ಸರ್ಕಾರದ ವಾಣಿಜ್ಯ ದೃಷ್ಟಿ. ಅರಣ್ಯಗಳು ನೆಲದ ಸಾರವನ್ನು ರಕ್ಷಿಸುವ, ನೀರನ್ನು ಹಿಡಿದಿಡುವ, ಪರಿಸರವನ್ನು ಶುಚಿಯಾಗಿಡುವ ಬೃಹತ್ ನೈಸರ್ಗಿಕ ವ್ಯವಸ್ಥೆ ಕೂಡ.ಇದು ಜನಸಾಮಾನ್ಯರ ದೃಷ್ಟಿ. ಈ ಎರಡೂ ದೃಷ್ಟಿಗಳ ಅರ್ಥಪೂರ್ಣ ಸಮ್ಮಿಳನಕ್ಕೆ ಚಿಪ್ಕೋ ಚಳವಳಿ ಶ್ರಮಿಸುತ್ತಿದೆ. ಸಮಸ್ತ ರೀತಿಯ ಆಧುನಿಕ ಉಪಕರಣಗಳಿಂದ ಸಜ್ಜಾದ ವೃತ್ತಪತ್ರಿಕೆಗಳು, ಸಿನಿಮಾ, ರೇಡಿಯೋ, ದೂರದರ್ಶನ ಮಂತಾದ ಮಾಧ್ಯಮಗಳು ಸಾಧಿಸಲಾಗದ ಕೆಲಸವನ್ನು ಚಿಪ್ಕೋ ಸದಸ್ಯರು ಬೆಟ್ಟಗಾಡು ಪ್ರದೇಶಗಳಲ್ಲಿ ಕಾಲ್ನಡಿಗೆಯಲ್ಲಿ ನಡೆದು ಸಾಧಿಸಿದ್ದಾರೆ.

ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಎರಡು ಕಾರ್ಯಕ್ರಮಗಳನ್ನು ರೂಪಿಸಿದೆ. ಮೊದಲನೆಯದು: ಬೆಟ್ಟಗಾಡು ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು. ಎರಡನೆಯದು: ಆಹಾರ, ಮೇವು, ಸೌದೆ, ಗೊಬ್ಬರ ಮತ್ತು ನಾರು ಈ ಐದು ಅವಶ್ಯಕತೆಗಳನ್ನು ಪೂರೈಸುವಂತಹ ಮರಗಳನ್ನು ನೆಡುವುದು. ಈ ಎರಡೂ ಕಾರ್ಯಗಳು ಇಂದು ಹಿಮಾಲಯ ಪರ್ವತ ಪ್ರದೇಶದ ನೂರಾರು ಹಳ್ಳಿಗಳಲ್ಲಿ ಅತ್ಯಂತ ಜನಪ್ರಿಯವಾಗಿದೆ. ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟೆಂದರೆ ಅದು ಜನರಿಂದ, ಜನರ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ. ವೈಯಕ್ತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆ ಬೆಳೆದಾಗ ಮಾತ್ರ ನಮ್ಮನ್ನು ಕಾಡುತ್ತಿರುವ ಹಲವಾರು ಸಮಸ್ಯೆಗಳಿಂದ ನಮಗೆ ಮುಕ್ತಿ ಸಾಧ್ಯ.

1. **ಚಿಪ್ಕೋ ಚಳುವಳಿಯ ಮೂಲಮಂತ್ರವಿದು;**
   (ಎ) ನಾಶವಿರುವ ಅಭಿವೃದ್ಧಿ
   (ಬಿ) ಮಾನವರ ಅಭಿವೃದ್ಧಿ
   (ಸಿ) ವಿನಾಶವಿಲ್ಲದ ಅಭಿವೃದ್ಧಿ
   (ಡಿ) ಕಾಡು ಪ್ರಾಣಿಗಳ ಅಭಿವೃದ್ಧಿ

2. **ಇದು ಸರ್ಕಾರದ ವಾಣಿಜ್ಯ ದೃಷ್ಟಿಯಾಗಿದೆ;**
   (ಎ) ಅರಣ್ಯಗಳು ಮನುಷ್ಯರನ್ನು ರಕ್ಷಿಸುವ ಆಗರಗಳು
   (ಬಿ) ಅರಣ್ಯಗಳು ಕೇವಲ ಪ್ರಾಣಿಗಳನ್ನು ರಕ್ಷಿಸುವ ಆಗರಗಳು
   (ಸಿ) ಅರಣ್ಯಗಳು ಮರಮುಟ್ಟುಗಳನ್ನು ಒದಗಿಸುವ ಆಗರಗಳು
   (ಡಿ) ಮೇಲಿನವು ಯಾವುದೂ ಅಲ್ಲ

3. **ಚಿಪ್ಕೋ ತಂಡ ಹಳ್ಳಿಯ ಜನರಿಗೆ ಮೂಲಭೂತವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮವಿದು.**
   (ಎ) ವಾಣಿಜ್ಯ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು.
   (ಬಿ) ಕೃಷಿ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು.
   (ಸಿ) ಕೈಗಾರಿಕಾ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು.
   (ಡಿ) ತಾಂತ್ರಿಕ ಉದ್ದೇಶಗಳಿಗಾಗಿ ಮರ ಕಡಿಯುವುದನ್ನು ತಡೆಯುವುದು.

4. **ಈ ಗದ್ಯಭಾಗದ ಪ್ರಧಾನ ಆಶಯ**
   (ಎ) ಕಾಡು ಬೆಳಸಿ ನಾಡು ಉಳಿಸಿ (ಬಿ) ಕಾಡು ಕಡಿದು ನಾಡು ಉಳಿಸಿ
   (ಸಿ) ಕಾಡು ಬೆಳಸಿ ನಾಡು ಬೆಳಿಸಿ (ಡಿ) ಕಾಡು ಬೆಳಸಿ ಕೈಗಾರಿಕೆ ಬೆಳೆಸಿ

5. **ಚಿಪ್ಕೋ ಚಳುವಳಿಯು ಈ ಪ್ರದೇಶದಲ್ಲಿ ಅತ್ಯಂತ ಪ್ರಸಿದ್ಧವಾಗಿದೆ.**

(ಎ) ಹಿಮಾಲಯ ಪರ್ವತ ಪ್ರದೇಶದ ಹಳ್ಳಿಗಳಲ್ಲಿ (ಬಿ) ಸಹ್ಯಾದ್ರಿ ಪರ್ವತ ಪ್ರದೇಶದ ಹಳ್ಳಿಗಳಲ್ಲಿ
(ಸಿ) ಪೂರ್ವಘಟ್ಟ ಪ್ರದೇಶದ ಹಳ್ಳಿಗಳಲ್ಲಿ (ಡಿ) ನೀಲಗಿರಿ ಪರ್ವತ ಪ್ರದೇಶದ ಹಳ್ಳಿಗಳಲ್ಲಿ

6. **ಚಿಪ್ಕೋ ಚಳವಳಿಯ ಅಸಾಧಾರಣ ಯಶಸ್ಸಿನ ಗುಟ್ಟು ಇದು;**

(ಎ) ಮರ ಕಡಿದು ನಾಡು ಉಳಿಸುವ ಆಂದೋಲನ (ಬಿ) ಮರ ಕಡಿದು ಜನರ ಹಿತ ಕಾಪಾಡುವ ಆಂದೋಲನ
(ಸಿ) ಜನರ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ. (ಡಿ) ಕೈಗಾರಿಕೆಯ ಒಳಿತಿಗಾಗಿ ಹುಟ್ಟಿ ಬೆಳೆದ ಆಂದೋಲನ

7. **'ಅಭಿವೃದ್ಧಿಯ ಕಾರ್ಯಕ್ರಮಗಳಿಂದ ಪರಿಸರ ಹಾಳಾಗಬಾರದು'. ಈ ವಾಕ್ಯದಲ್ಲಿ ಬಂದಿರುವ ಕ್ರಿಯಾಪದ;**

(ಎ) ಅಭಿವೃದ್ಧಿಯ (ಬಿ) ಕಾರ್ಯಕ್ರಮಗಳಿಂದ (ಸಿ) ಪರಿಸರ (ಡಿ) ಹಾಳಾಗಬಾರದು

8. **"ಎರಡನೆಯ" ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ;**

(ಎ) ಸಂಖ್ಯಾವಾಚಕ (ಬಿ) ಸಂಖ್ಯೇಯವಾಚಕ (ಸಿ) ಗುಣವಾಚಕ (ಡಿ) ಭಾವಸೂಚಕ

**ಸೂಚನೆ: (ಪ್ರಶ್ನೆ ಸಂಖ್ಯೆ 9ರಿಂದ 15) : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಾವೆಲ್ಲ ಮನುಜರೊಂದೆ ಎಂಬ ಭಾವ ಮೂಡಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ. //2//

ಒಂದು ತೋಟದಲ್ಲಿ ಹಲವು ಬಣ್ಣ ಬಣ್ಣದ ಹೂವುಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳು ಮಕರಂದ ಬೀರಲಿ
ಆ ಹೂಗಳಂತೆ ಮತಗಳು ಸದ್ಭಾವ ಬೀರಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೆ
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೆ //2//
ಈ ಸೃಷ್ಟಿಯಲ್ಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ.

ಮಣ್ಣಿನಿಂದಾದ ಆದ ಮಡಕೆ ಮಣ್ಣಿಗನ್ಯವೇ
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ //2//
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.

ದಯವೇ ಧರ್ಮವೆಂದು ಸಾರಿದಂತ ನಾಡಿದು
ಜಗಕ್ಕೆ ಶಾಂತಿ ಪಾಠ ಹೇಳಿದಂತ ನಾಡಿದು //2//
ಈ ನಾಡಿನಲ್ಲಿ ಶಾಂತಿಯು ಸ್ಥಿರವಾಗಿ ನೆಲಸಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.

ಆ ಸೂರ್ಯನಂತೆ ಸಂತರು ಜಗ ಬೆಳಗಿ ಹೋದರು
ಆ ವರುಣನಂತೆ ಜ್ಞಾನವನ್ನು ಸುರಿದು ಹೋದರು
ಗುರುಬಸವ ನಿಮ್ಮ ಬೋಧೆ ಮನದಲ್ಲಿ ನಿಲ್ಲಲಿ
ಗುರುಬಸವ ನಿಮ್ಮ ಬೋಧೆ ಜನರಲ್ಲಿ ನಿಲ್ಲಲಿ
ನಮ್ಮಲ್ಲಿ ಬೇಧಭಾವ ಪ್ರಭು ದೂರವಾಗಲಿ.
ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಾವೆಲ್ಲ ಒಂದೇ ಎಂಬ ಭಾವ ಮೂಡಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ. //2//

**(ರಚನೆ :– ಪದ್ಮಶ್ರೀ ಇಬ್ರಾಹಿಂ ಸುತಾರ್ )**

**9. ಸೃಷ್ಟಿಯಲ್ಲಿ ಹೀಗೆ ಬಾಳಬೇಕು?**

ಎ. ಸರ್ವರೂ ಸ್ವತಂತ್ರವಾಗಿ ಬಿ. ಸರ್ವರೂ ಒಡೆದಾಡಿ

ಸಿ. ಸರ್ವರೂ ಸಮನಾಗಿ ಡಿ. ಸರ್ವರೂ ಸಂತೋಷವಾಗಿ

**10. ನಮ್ಮ ನಾಡು ಇಂತಹ ನಾಡು**

ಎ. ಚಿನ್ನದ ನಾಡು ಬಿ. ಹೂಗಳ ನಾಡು

ಸಿ. ದಯವೇ ಧರ್ಮ ಎಂಬ ನಾಡು ಡಿ. ಜಗವ ಬೆಳಗಿದ ನಾಡು

**11. ಕವನದ ಪ್ರಮುಖ ಆಶಯ.**

ಎ. ನಾವೆಲ್ಲರೂ ಮನಸ್ತಾಪದಿಂದ ಇರುವುದು

ಬಿ. ನಾವೆಲ್ಲರೂ ಐಕ್ಯತಾ ಭಾವದಿಂದ ದೂರ ಇರುವುದು

ಸಿ. ನಾವೆಲ್ಲರೂ ಮನುಜ ಭಾವದಿಂದ ಒಂದಾಗಿರುವುದು

ಡಿ. ನಾವೆಲ್ಲರೂ ಮನುಜ ಭಾವದಿಂದ ದೂರ ಇರುವುದು

**12. ನಮ್ಮಲ್ಲಿ ಈ ಬಾವ ಮೂಡಬೇಕೆಂದು ಕವಿಯ ಆಶಯ ಭಾವ**

ಎ. ಭಾರತೀಯರೆಲ್ಲಾ ಒಂದೇ ಎಂಬ ಭಾವ

ಬಿ. ಭಾರತೀಯರೆಲ್ಲಾ ಬೇರೆ ಎಂಬ ಭಾವ

ಸಿ. ಭಾರತೀಯರೆಲ್ಲರ ಮತಗಳು ಬೇರೆ ಎಂಬ ಭಾವ

ಡಿ. ಮೇಲಿನ ಯಾವುದೂ ಅಲ್ಲ

**13. ಭಾರತೀಯರಲ್ಲಿ ಈ ಭಾವ ದೂರವಾಗಬೇಕು**

ಎ. ಶಾಂತಿ – ಭಾವ ಬಿ. ಭೇದ – ಭಾವ

ಸಿ. ಸಮ – ಭಾವ ಡಿ. ಜ್ಞಾನ – ಭಾವ

**14. "ಒಂದು ತೋಟದಲ್ಲಿ ಹಲವು ಬಣ್ಣ ಬಣ್ಣದ ಹೂವುಗಳು" ಈ ವಾಕ್ಯದಲ್ಲಿ ತೋಟದಲ್ಲಿ ಪದಲ್ಲಿರುವ ವಿಭಕ್ತಿ ಪ್ರತ್ಯಯ**

ಎ. ಪ್ರಥಮ ಬಿ. ದ್ವಿತೀಯಾ

ಸಿ. ಷಷ್ಠೀ ಡಿ. ಸಪ್ತಮೀ

**15. 'ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ' ಈ ವಾಕ್ಯದಲ್ಲಿರುವ 'ಮೂಡಲಿ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.**

ಎ. ನಿಷೇಧಾರ್ಥಕ ಬಿ. ಸಂಭವನಾರ್ಥಕ

ಸಿ. ವಿಧ್ಯರ್ಥಕ ಡಿ. ಆತ್ಮಾರ್ಥಕ

**16. ಬರವಣಿಗೆ ಪ್ರಕ್ರಿಯೆ ಹಂತಗಳು:**

I. ಯೋಜನೆ, ಕರಡು, ಹಂಚಿಕೊಳ್ಳುವುದು, ಮೌಲ್ಯಮಾಪನ, ಪ್ರಕಟಣೆ

II. ವಿವರಣೆ, ನಿರೂಪಣೆ, ಮಾಹಿತಿ, ವಿಶ್ಲೇಷಣೆ, ಮನವೊಲಿಸುವಿಕೆ

III. ಯೋಜನೆ, ವಿವರಣೆ, ವಿಶ್ಲೇಷಣೆ, ಮೌಲ್ಯಮಾಪನ, ಮಾಹಿತಿ

IV. ಮಾಹಿತಿ, ವಿವರಣೆ, ಹಂಚಿಕೊಳ್ಳುವಿಕೆ, ಮೌಲ್ಯಮಾಪನ, ಪ್ರಕಟಣೆ

17. **ಮಕ್ಕಳಲ್ಲಿ ವಾಕ್ಯ ರಚನಾ ಕೌಶಲ್ಯ ವೃದ್ಧಿಸಲು ಕೈಗೊಳ್ಳಬಹುದಾದ ತಂತ್ರ** :

ಎ) ತಿಳಿಸುವ ವಾಕ್ಯ ಬಿ) ಸವಿಯುವ ವಾಕ್ಯ

ಸಿ)ಓದುವ ವಾಕ್ಯ ಡಿ) ಬೆಳೆಯುವ ವಾಕ್ಯ

**18. ಕಥೆ ಹೇಳಿಸುವುದರಿಂದ ಮಕ್ಕಳಿಗಾಗುವ ಪ್ರಯೋಜನವೆಂದರೆ,**

ಎ) ಗಟ್ಟಿಯಾಗಿ ವಾಚಿಸುವ ಕೌಶಲ ಸಿದ್ಧಿಸುತ್ತದೆ.

ಬಿ) ಮಕ್ಕಳ ಭಾವನೆ, ವಿಚಾರಗಳಿಗೆ ಮುಕ್ತ ಅಭಿವ್ಯಕ್ತಿ ಸಿಗುತ್ತದೆ.

ಸಿ) ಮಕ್ಕಳ ಲಿಖಿತ ಅಭಿವ್ಯಕ್ತಿ ಸಿದ್ಧಿಸುತ್ತದೆ.

ಡಿ) ಮಕ್ಕಳ ಆಲಿಸುವಿಕೆ ಕ್ರಿಯಾಶೀಲವಾಗುತ್ತದೆ.

**19. ತರಗತಿಯಲ್ಲಿ ಭಾಷಾ ಶಿಕ್ಷಕ ಅಬ್ದುಲ್ ಕಲಾಂ ಅವರನ್ನು ಕುರಿತಾದ ಜೀವನ ಚರಿತ್ರೆಯನ್ನು ಬೋಧಿಸುತ್ತಾರೆ. ಆಗ ವಿದ್ಯಾರ್ಥಿಗಳು ಈ ಸಾಹಿತ್ಯ ಪ್ರಕಾರದ ಪರಿಚಯವನ್ನು ಹೊಂದುತ್ತಾರೆ.**

ಎ. ವಿವರಣಾ ಸಾಹಿತ್ಯ
ಬಿ. ನಿರೂಪಣಾ ಸಾಹಿತ್ಯ
ಸಿ. ನಾಟಕ ಸಾಹಿತ್ಯ
ಡಿ. ಕಥಾ ಸಾಹಿತ್ಯ

**20. ಕಿರಿಯ ಪ್ರಾಥಮಿಕ ತರಗತಿಗಳಲ್ಲಿ ಭಾಷಾ ಶಿಕ್ಷಕ ಮಗುವಿನ ಮನೆಮಾತನ್ನು ಗೌರವಿಸಿ ಅಮ್ಮನ ಬಗ್ಗೆ ಮಾತನಾಡಲು ಸೂಚಿಸುತ್ತಾನೆ. ಮಗು 'ಅವ್ವ' ಎಂದು ಪ್ರಾರಂಭಿಸುತ್ತದೆ. ಆಗ ಶಿಕ್ಷಕ ಮಾಡಬೇಕಾದ ಕಾರ್ಯವೆಂದರೆ,**

ಎ. ಮಗುವಿನ ಅಭಿವ್ಯಕ್ತಿಗೆ ಅವಕಾಶ ನೀಡಬಾರದು
ಬಿ. ಮಗುವಿನ ಅಭಿವ್ಯಕ್ತಿಗೆ ಅವಕಾಶ ನೀಡಬೇಕು
ಸಿ. ಮಗುವನ್ನು ಗದರಿಸುವುದು
ಡಿ. ಮಗುವನ್ನು ಕುಳಿತುಕೊಳ್ಳಲು ಹೇಳುವುದು

**21. ಪ್ರತಿ ಮಗುವೂ ತನ್ನತನ ಕಾಪಾಡಿಕೊಂಡು ಎಲ್ಲರೊಡನೆ ಬೆರೆತು ಕಲಿಯುವ ಪರಿಸರವಿರುವ ತರಗತಿ.**

ಎ. ಏಕ ಭಾಷಾ ತರಗತಿ
ಬಿ. ವಿಶೇಷ ತರಗತಿ
ಸಿ. ಒಳಗೊಳ್ಳುವ ತರಗತಿ
ಡಿ. ಒಳಗೊಳ್ಳದ ತರಗತಿ

**22. ಓದಿಗೆ ಪೂರ್ವಸಿದ್ಧತೆಯಾಗಿ ಈ ಕೌಶಲ ಗಳಿಸಿರಬೇಕು**

ಎ) ಮೌಖಿಕ ಕೌಶಲಗಳಲ್ಲಿ ಪ್ರೌಢಿಮೆ
ಬಿ) ಓದುಗಾರಿಕೆಯ ಕೌಶಲದ ಪ್ರಭುತ್ವ
ಸಿ) ಆಲಿಸುವಿಕೆ ಕೌಶಲದ ಪ್ರಭುತ್ವ
ಡಿ) ಬರವಣಿಗೆ ಕೌಶಲದ ಪ್ರಭುತ್ವ

**23. ಭಾಷಾ ಕೌಶಲಗಳನ್ನು ಪ್ರತ್ಯೇಕವಾಗಿ ಕಲಿಯದೆ ಒಂದಕ್ಕೊಂದು ಪೂರಕವಾಗಿ ಒಟ್ಟಿಗೆ ಕಲಿಯುವ ಪ್ರಯತ್ನ ಮಾಡುವುದು ಅಗತ್ಯ ಎಂದು ಪ್ರತಿಪಾದಿಸುವ ಭಾಷಾ ಕಲಿಕಾ ವಿಧಾನ**

ಎ) ಪ್ರತ್ಯಕ್ಷ ವಿಧಾನ
ಬಿ) ಸಂಪೂರ್ಣ ಭಾಷಾ ವಿಧಾನ
ಸಿ) ಸಂವಹನಾ ವಿಧಾನ
ಡಿ) ವಿಷಯಾಧಾರಿತ ಕ್ರಿಯಾಧಾರಿತ ವಿಧಾನ

**24. ಬಾಹ್ಯಸ್ವಗತ / External monologue ಪರಿಕಲ್ಪನೆಯ ಪ್ರತಿಪಾದಕರು .**

ಎ) ವೈಗಾಟ್ಸ್ಕಿ
ಬಿ)ಜೀನ್ ಪಿಯಾಜೆ
ಸಿ) ಕೊಯ್ಲರ್
ಡಿ) ಗುಟನ್‌ಬರ್ಗ್

**25. ಪರಿಹಾರ ಬೋಧನೆಯಲ್ಲಿ ಶಿಕ್ಷಕರು ಮಾಡಬೇಕಾದ ಕಾರ್ಯ.**

ಎ) ಪುನಃ ಪಾಠವನ್ನು ಮರು ಬೋಧನೆ ಮಾಡುವುದು
ಬಿ) ಕಲಿಕಾ ಸಾಮರ್ಥ್ಯದಲ್ಲಿ ಕಂಡುಬಂದ ದೋಷಗಳನ್ನು ನಿವಾರಿಸುವುದು
ಸಿ) ವಿದ್ಯಾರ್ಥಿಗಳಿಗೆ ಹೆಚ್ಚಿನ ಗೃಹಕಾರ್ಯ ನೀಡುವುದು
ಡಿ) ಹೆಚ್ಚು ಹೆಚ್ಚು ಪರೀಕ್ಷೆ ನಡೆಸುವುದು

26. **'ಸಪ್ತಸ್ವರಗಳು' ಪದದಲ್ಲಿರುವ ಸಮಾಸ**

ಎ. ಕರ್ಮಧಾರಯ ಸಮಾಸ
ಬಿ. ತತ್ಪುರುಷ ಸಮಾಸ
ಸಿ. ದ್ವಂದ್ವ ಸಮಾಸ
ಡಿ. ದ್ವಿಗು ಸಮಾಸ

**27. 'ತಾವು ಕಡಿಮೆ ಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡಿದ್ದೀರಿ' ಈ ವಾಕ್ಯದಲ್ಲಿ 'ತಾವು' ಎಂಬುದು ಸರ್ವನಾಮದ ಈ ವಿಭಾಗಕ್ಕೆ ಸೇರಿದೆ**

ಎ. ಪ್ರಶ್ನಾರ್ಥಕ ಬಿ. ನಿರ್ದೇಶನಾತ್ಮಕ ಸಿ. ಪುರುಷಾರ್ಥಕ ಡಿ. ಆತ್ಮಾರ್ಥಕ

**28. 'ಅರ್ಕ' ಪದದ ತದ್ಭವ ರೂಪ**

ಎ. ಸೂರ್ಯ ಬಿ. ಅಕ್ಷರ ಸಿ. ಎಕ್ಕ ಡಿ. ಚಂದ್ರ

**29. 'ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದಾಗ ಗುರುಗಳು ಬೆನ್ನು ತಟ್ಟಿದರು'**

ಈ ವಾಕ್ಯದಲ್ಲಿ 'ಬೆನ್ನುತಟ್ಟು' ಎಂಬ ನುಡಿಗಟ್ಟಿನ ಅರ್ಥ

ಎ. ದ್ವೇಷ ಸಾಧಿಸು
ಬಿ. ಪ್ರೋತ್ಸಾಹಿಸು
ಸಿ. ಸಮಯ ಸಾಧಿಸು
ಡಿ. ಮೋಸಮಾಡು

30. **ಕೆಳಗಿನವುಗಳಲ್ಲಿ ಇದು ಅರ್ಥಾಲಂಕಾರಕ್ಕೆ ಸೇರಿದೆ.**

ಎ. ಚಿತ್ರಕವಿತ್ವ
ಬಿ. ಉಪಮಾ
ಸಿ. ಯಮಕ
ಡಿ. ಅನುಪ್ರಾಸ

## ಮಾದರಿ ಪ್ರಶ್ನೆ ಪತ್ರಿಕೆ – 2

## ಭಾಷೆ – 1

## ಕನ್ನಡ

**ಸೂಚನೆ: (ಪ್ರಶ್ನೆ ಸಂಖ್ಯೆ 1 ರಿಂದ 8) : ಈ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ:**

ಸ್ಪೇನ್ ದೇಶದ ಬಾಲಕ ಜೂಲಿಯೋ ಇಗ್ಲೇಶಿಯಸ್ ತನ್ನ 10ನೇ ವಯಸ್ಸಿನಲ್ಲಿಯೇ ಪುಟ್ಬಾಲ್ ಆಟಗಾರನಾಗುವ ಕನಸು ಕಂಡನು.ದಿನದ ಹೆಚ್ಚಿನ ಭಾಗವನ್ನು ಪುಟ್ಬಾಲ್ ಆಡುವುದರಲ್ಲಿಯೇ ಕಳೆದನು. ತಾನು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಬೇಕೆಂಬ ಆಸೆ. ದೇಶಕ್ಕೆ ಕೀರ್ತಿ ತರಬೇಕೆಂಬ ಹಂಬಲ. ಅದಕ್ಕಾಗಿ 'ರಿಯಲ್ ಮ್ಯಾಡ್ರಿಡ್ ಕ್ಲಬ್' ಸೇರಿದ.ನಿರಂತರ ಅಭ್ಯಾಸ ಮಾಡಿದ.ತನ್ನ ಇಪ್ಪತ್ತನೆಯ ವಯಸ್ಸಿಗೆ ಉತ್ತಮ ಗೋಲ್‌ಕೀಪರ್ ಎಂಬ ಖ್ಯಾತಿ ಪಡೆದನು. ರಾಷ್ಟ್ರಮಟ್ಟಕ್ಕೆ ಬೆಳೆದನು.ಆದರೆ 1963 ರಲ್ಲಿ ಸ್ನೇಹಿತರ ಜೊತೆ ಕಾರಿನಲ್ಲಿ ಹೋಗುವಾಗ ಭೀಕರ ಅಪಘಾತಕ್ಕೆ ಒಳಗಾದ.ಆಸ್ಪತ್ರೆ ಸೇರಿದ, ಅಲ್ಲಿ ಚಿಕಿತ್ಸೆಯೇನೋ ನಡೆಯಿತು. ಆದರೆ ಸೊಂಟದ ಕೆಳಭಾಗ ಸಂಪೂರ್ಣ ಶಕ್ತಿಯನ್ನು ಕಳೆದುಕೊಂಡಿತು.ಇದರಿಂದ ವಿಶ್ವದ ಗೋಲ್‌ಕೀಪರ್‌ನಾಗುವ ಅವನ ಕನಸು ನುಚ್ಚುನೂರಾಯಿತು.

ಜೂಲಿಯೋ ಗುಣಮುಖನಾಗಲು ತುಂಬಾ ದಿನಗಳು ಬೇಕಾದವು. ಇದರಿಂದ ಅವನಲ್ಲಿ ದುಃಖ, ಕೋಪ ಮನೆಮಾಡಿತು.ಮನನೊಂದನು. ನೋವು ಮರೆಯಲು ಹಾಡುಗಳನ್ನು ಬರೆದು ತಾನೇ ಹಾಡತೊಡಗಿದ.ಅವನ ಇಂಪಾದ ಧ್ವನಿ ಗಮನಿಸಿದ ದಾದಿಯೊಬ್ಬಳು ಗಿಟಾರೊಂದನ್ನು ತಂದುಕೊಟ್ಟಳು. ಅವನೆಂದೂ ಅದುವರೆಗೆ ಗಿಟಾರನ್ನು ಮುಟ್ಟಿರಲಿಲ್ಲ. ಆದರೂ ಗಿಟಾರನ್ನು ನುಡಿಸುತ್ತಾ, ಹಾಡತೊಡಗಿದ.ಹೀಗೆ 18 ತಿಂಗಳು ಆಸ್ಪತ್ರೆಯಲ್ಲಿ ಕಳೆದನು. ಈಗ ಜೂಲಿಯೋ ಹಾಡುವುದರಲ್ಲಿ ಹಾಗೂ ಗಿಟಾರ್ ನುಡಿಸುವುದರಲ್ಲಿ ಪರಿಣತಿ ಪಡೆದನು.ಅದು ಅವನ ಆತ್ಮ ವಿಶ್ವಾಸವನ್ನು ಹೆಚ್ಚಿಸಿತು. ತಾನೇ ಹಾಡುಗಳನ್ನು ಬರೆದ. ಹಾಡಿನಲ್ಲಿ ತಲ್ಲೀನನಾದ. "ಜೀವನ ಹೀಗೆ ಸಾಗುತ್ತಿದೆ" ಎಂಬ ಹೆಸರಿನ ಹಾಡುಗಳ ಆಲ್ಬಂಗಳನ್ನು ಹೊರತಂದನು. ಅದು ವಿಶ್ವದಾದ್ಯಂತ ಜನಪ್ರಿಯವಾಗಿ 300 ಮಿಲಯನ್ ಆಲ್ಬಂಗಳು ಮಾರಾಟವಾದವು. ವಿಶ್ವದ ಹತ್ತು ಪ್ರಮುಖ ಗಾಯಕರಲ್ಲಿ ಜೂಲಿಯೊ ಸಹ ಒಬ್ಬನಾದನು. ಅವನು ಈಗ ಶ್ರೇಷ್ಠ ಕಲಾವಿದನಾಗಿ ಕೋಟ್ಯಂತರ ಸಂಗೀತ ಪ್ರೇಮಿಗಳ ಕಣ್ಮಣಿಯಾದನು. ಜೀವನದಲ್ಲಿ ವಿಫಲತೆಯಿಂದ ಎದೆಗುಂದಬಾರದು.ಅದೃಷ್ಟದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ದಾರಿ ತೆರೆದುಕೊಳ್ಳುತ್ತದೆ ಎಂದು ಹೇಳಿದನು.ಅದಕ್ಕೆ ಅವನ ಜೀವನವೇ ಸಾಕ್ಷಿ.

ಆಯ್ಕೆ:– ಎಂ.ಎನ್. ಸುಂದರರಾಜರವರ 'ಹಿರಿಯರ ಹಾದಿ'ಕೃತಿಯಿಂದ

**1. ಜೂಲಿಯೋ ಇಗ್ಲೇಶಿಯಸ್ ಈ ಕನಸು ಹೊಂದಿದ್ದನು.**

ಎ. ಕ್ರಿಕೆಟ್ ಆಟಗಾರ    ಬಿ. ವಾಲಿಬಾಲ್ ಆಟಗಾರ
ಸಿ. ಪುಟ್ಬಾಲ್ ಆಟಗಾರ    ಡಿ. ಥ್ರೋ ಬಾಲ್ ಆಟಗಾರ.

**2. ಜೂಲಿಯೋ ಇಗ್ಲೇಶಿಯಸ್ ತನ್ನ ದುಃಖವನ್ನು ಹೀಗೆ ಮರೆತನು.**

ಎ. ನಿದ್ರೆ ಮಾಡುವುದರ ಮೂಲಕ
ಬಿ. ಟಿ.ವಿ. ನೋಡುವುದರ ಮೂಲಕ
ಸಿ. ಸ್ನೇಹಿತರೊಂದಿಗೆ ಸೇರುವ ಮೂಲಕ
ಡಿ. ಹಾಡುಗಳನ್ನು ಬರೆದು ತಾನೇ ಹಾಡುವುದರ ಮೂಲಕ

**3. ಜೂಲಿಯೋ ಇಗ್ಲೇಶಿಯಸ್ ಹೊರತಾದ ಹಾಡುಗಳ ಆಲ್ಬಂ.**

ಎ. ಜೀವನ ಹೀಗೆ ಬರುತ್ತಿದೆ    ಬಿ. ಜೀವನ ಹೀಗೆ ಸಾಗುತ್ತಿದೆ
ಸಿ. ಜೀವನ ಹೀಗೆ ಓಡುತ್ತಿದೆ    ಡಿ. ಜೀವನ ಹೀಗೆ ಇದೆ

**4. ಈ ಗದ್ಯಭಾಗದ ಪ್ರಧಾನ ಆಶಯವಿದು.**

ಎ. ಏನೇ ಕಷ್ಟ ಬಂದರೂ ಎದೆಗುಂದಬೇಕು
ಬಿ. ಏನೇ ಕಷ್ಟ ಬಂದರೂ ಎದೆಗುಂದಬಾರದು
ಸಿ. ಏನೇ ಕಷ್ಟ ಬಂದರೂ ಸುಮ್ಮನೆ ಇರಬೇಕು
ಡಿ. ಏನೇ ಕಷ್ಟ ಬಂದರೂ ಸುಮ್ಮನೆ ಮಲಗಬೇಕು

5. **ಜೂಲಿಯೋ 'ರಿಯಲ್ ಮ್ಯಾಡ್ರಿಡ್ ಕ್ಲಬ್' ಸೇರಿದ ಉದ್ದೇಶ**

ಎ. ದೇಶಕ್ಕೆ ರಕ್ಷಣೆ ಮಾಡಬೇಕೆಂಬುದು
ಬಿ. ದೇಶಕ್ಕೆ ಶಿಕ್ಷಣ ಬೇಡಬೇಕೆಂದು
ಸಿ. ದೇಶಕ್ಕೆ ಕೀರ್ತಿ ತರಬೇಕೆಂದು
ಡಿ. ದೇಶಕ್ಕೆ ಗೌರವ ನೀಡಬೇಕೆಂದು

6. **ಈ ಗದ್ಯಭಾಗಕ್ಕೆ ಸರಿಹೊಂದುವ ಗಾದೆ ಮಾತು**

ಎ. ದುಡಿಮೆಯೇ ದುಡ್ಡಿನ ತಾಯಿ
ಬಿ. ಕಾಯಕವೇ ಕೈಲಾಸ
ಸಿ. ಮಾತೇ ಮುತ್ತು: ಮಾತೇ ಮೃತ್ಯು
ಡಿ. ಕಷ್ಟಪಟ್ಟರೆ ಫಲವುಂಟು

7. **'ಅದೃಷ್ಟ' ಪದದ ಅರ್ಥ**

ಎ. ಗೆಲುವು
ಬಿ. ಪ್ರೇರಣೆ
ಸಿ. ಉದ್ಯೋಗ
ಡಿ. ಭಾಗ್ಯ

8. **'ವಿದ್ಯಾಭ್ಯಾಸ' ಪದದಲ್ಲಿ ಆಗಿರುವ ಸಂಧಿ**

ಎ. ಗುಣಸಂಧಿ
ಬಿ. ಸವರ್ಣದೀರ್ಘ ಸಂಧಿ
ಸಿ. ಲೋಪಸಂಧಿ
ಡಿ. ಆದೇಶಸಂಧಿ

**ಸೂಚನೆ: (ಪ್ರಶ್ನೆ ಸಂಖ್ಯೆ 9 ರಿಂದ 15) : ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿರಿ:**

ಮಳೆ ಬರಲಿ ....................
ಆದರೆ
ಹಸಿರು ಹೊಲ ಗದ್ದೆಗಳನ್ನೂ
ರೈತರ ಸುಖ ನಿದ್ದೆಗಳನ್ನೂ
ಕಸಿದು ಕೊಳ್ಳದಿರಲಿ.
ಮಳೆ ಬರಲಿ ....................
ಆದರೆ
ಹುಲ್ಲಿನ ಚಾವಣಿಗಳನ್ನು
ಮಣ್ಣಿನ ಗೋಡೆಗಳನ್ನೂ
ಕೆಡವಿ ಹಾಕದಿರಲಿ
ಮಳೆ ಬರಲಿ ....................
ಇರಲೊಂದು ಪುಟ್ಟ ಮನೆ
ಹೊದೆಯಲು ಬೆಚ್ಚನೆಯ
ಕಂಬಳಿ ಎಲ್ಲರಿಗೂ ಸಿಗಲಿ
ನೊಂದ ಬಯಲುಗಳಿಗೆ
ಬೆಂದ ಬೆಟ್ಟಗಳಿಗೆ
ಬಾಯಾರಿದ ಕೆರೆ ಬಾವಿ
ಹಳ್ಳ ಕೊಳ್ಳಗಳಿಗೆ
ಬರಲಿ ಮಳೆ ಬರಲಿ
'ಧೋ' ಎಂದು ಸುರಿದು
ಹೊರಟು ನಿಂತಾಗ
ನೆಲ– ಮುಗಿಲು ನಗಲಿ
ಏಳು ಬಣ್ಣಗಳಲ್ಲಿ
ಆಯ್ಕೆ:– ಸವಿತಾ ನಾಗಭೂಷಣ 'ಚಂದ್ರನನು ಕರೆಯಿರಿ ಭೂಮಿಗೆ' ಕವನ ಸಂಕಲನ

9. **ರೈತರ ಬದುಕು ಹಸನಾಗುವುದು**

ಎ. ಕೆರೆ ಕಟ್ಟೆ ಬಾವಿಗಳು ಒಡೆದಾಗ
ಬಿ. ಕೆರೆ ಕಟ್ಟೆ ಬಾವಿಗಳು ಬರಿದಾದಾಗ
ಸಿ. ಕೆರೆ ಕಟ್ಟೆ ಬಾವಿಗಳು ತುಂಬಿದಾಗ
ಡಿ. ಕೆರೆ ಕಟ್ಟೆ ಬಾವಿಗಳೇ ಇಲ್ಲದಾದಾಗ

**10. ಮಳೆ ಬಂದು ನಿಂತಾಗ ನೆಲ-ಮುಗಿಲು ಹೀಗೆ ನಗಬೇಕು**

ಎ. ಹಸುರಾಗಿ ಬಿ.ತಂಪಾಗಿ

ಸಿ. ಏಳು-ಬಣ್ಣಗಳಲ್ಲಿ ಡಿ. ಬರಿದಾಗಿ

**11. ಈ ಕವಿತೆಯಲ್ಲಿ ವ್ಯಕ್ತವಾಗುವ ಕವಿಯ ಆತಂಕ**

ಎ. ದೇಶದ ಜಾತ್ಯತೀತೆಯ ಬಗೆಗೆ ಬಿ. ಮನೆ ಮನಗಳ ಬಗೆಗೆ

ಸಿ. ಜನ ಜೀವನದ ಬಗೆಗೆ ಡಿ. ಪ್ರಕೃತಿಯ ವೈಪರೀತ್ಯದ ಬಗೆಗೆ

**12. ನೊಂದ ಬಯಲುಗಳು, ಬೆಂದ ಬೆಟ್ಟಗಳು ತಂಪಾಗುವುದು**

ಎ. ಮರಗಳಿದ್ದಾಗ ಬಿ. ಹಸಿರಾಗಿದ್ದಾಗ

ಸಿ. ಬರಡಾಗಿದ್ದಾಗ ಡಿ. ಮಳೆ ಬಿದ್ದಾಗ

**13. ರೈತರಿಗೆ ಸುಖ ನಿದ್ದೆಗಳು ಸಿಗುವುದು**

ಎ. ಅತಿವೃಷ್ಟಿಯಾದಾಗ ಬಿ. ಅನಾವೃಷ್ಟಿಯಾದಾಗ

ಸಿ. ಹದವರಿತು ಮಳೆ ಬಿದ್ದಾಗ ಡಿ. ಜನಜೀವನ ಅಸ್ತವ್ಯಸ್ತವಾದಾಗ

**14. ಕವನದಲ್ಲಿ ಇದು ಎಲ್ಲರಿಗೂ ಸಿಗಬೇಕು ಎಂದಿದ್ದಾರೆ.**

ಎ. ಪುಟ್ಟಮನೆ ಹಾಗೂ ಬೆಚ್ಚನೆಯ ಕಂಬಳಿ

ಬಿ. ಪುಟ್ಟಮನೆ ಹಾಗೂ ಬೆಚ್ಚನೆಯ ಗಾಳಿ

ಸಿ. ದೊಡ್ಡಮನೆ ಹಾಗೂ ಬೆಚ್ಚನೆಯ ಕಂಬಳಿ

ಡಿ. ದೊಡ್ಡಮನೆ ಹಾಗೂ ಬೆಚ್ಚನೆಯ ಗಾಳಿ

**15. ಹಳ್ಳ ಪದದ ಅರ್ಥ**

ಎ. ನಗು ಬಿ. ಸುಖ

ಸಿ. ದಿಣ್ಣೆ ಡಿ. ತಗ್ಗು

**16. ತರಗತಿ ಕಲಿಕೆಯ ಸಂದರ್ಭದಲ್ಲಿ ವಿದ್ಯಾರ್ಥಿಯೊಬ್ಬ ಶಿಕ್ಷಕರ ಸೂಚನೆಯ ಮೇರೆಗೆ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ಲೇಖನವೊಂದನ್ನು ಓದಿ ಅರ್ಥೈಸುತ್ತಾನೆ. ಹಾಗಾದರೆ ಶಿಕ್ಷಕ ರಚನಾವಾಧಿ ವಿಧಾನದ ಯಾವ ಹಂತದಲ್ಲಿ ಚಟುವಟಿಕೆ ನೀಡಿದ್ದಾನೆ?**

ಎ. ತೊಡಗಿಕೊಳ್ಳುವುದು ಬಿ. ಅನ್ವೇಷಿಸುವುದು

ಸಿ. ವಿವರಿಸುವುದು ಡಿ. ವಿಸ್ತರಿಸುವುದು

17. ಭಾಷಾ ತರಗತಿಯಲ್ಲಿ ವಿದ್ಯಾರ್ಥಿಯೊಬ್ಬ ಕಥೆಯನ್ನು ಹೇಳಿದಾಗ ಶಿಕ್ಷಕರು ಬಹಿರಂಗವಾಗಿ ಮೆಚ್ಚಿಕೊಳ್ಳುತ್ತಾರೆ. ಏಕೆಂದರೆ ಇದು"

ಎ. ವಿದ್ಯಾರ್ಥಿಯ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ

ಬಿ. ವಿದ್ಯಾರ್ಥಿಯು ಕಥೆಯನ್ನು ನಿರರ್ಗಳವಾಗಿ ಹೇಳಿರುತ್ತಾನೆ

ಸಿ. ವಿದ್ಯಾರ್ಥಿಯು ನೀತಿಯುಕ್ತ ಕತೆಯನ್ನು ಹೇಳಿರುತ್ತಾನೆ

ಡಿ. ವಿದ್ಯಾರ್ಥಿಯು ಕಥೆಯನ್ನು ಅಭಿನಯಿಸಿ ಹೇಳಿರುತ್ತಾನೆ

18. ಶಾಲಾ ಹಂತದ ಶಿಕ್ಷಣದಲ್ಲಿ ಭಾಷಾ ಬೋಧನೆಯ ಪ್ರಮುಖ ಉದ್ದೇಶವೆಂದರೆ,

ಎ. ಆ ಭಾಷೆಯ ಸಾಹಿತ್ಯ ಕಲಿಸುವುದು

ಬಿ. ಬಹುಭಾಷಾ ಪರಿಸರಕ್ಕೆ ಸಿದ್ಧಗೊಳಿಸುವುದು

ಸಿ. ಭಾಷಾ ಕೌಶಲಗಳನ್ನು ಕಲಿಸುವುದು

ಡಿ. ಸೃಜನಶೀಲ ಅಧ್ಯಯನ ಕ್ರಮ ಕಲಿಸುವುದು

19. ಭಾಷೆಯನ್ನು ನೇರ ಬಳಕೆಯ ಮೂಲಕವೇ ಕಲಿಯಬೇಕು ಎಂದು ಪ್ರತಿಪಾದಿಸುವ ಭಾಷಾ ಕಲಿಕಾ ವಿಧಾನವೆಂದರೆ,

ಎ. ಪ್ರತ್ಯಕ್ಷ ವಿಧಾನ ಬಿ. ಸಂಪೂರ್ಣ ಭಾಷಾ ವಿಧಾನ

ಸಿ. ಸಂಪೂರ್ಣ ದೈಹಿಕ ಪ್ರತಿವರ್ತನಾ ವಿಧಾನ ಡಿ. ಕ್ರಿಯಾಧಾರಿತ ವಿಧಾನ

20. ಕನ್ನಡದ ಪ್ರಾದೇಶಿಕ ವಿಭಾಗಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ

ಎ) ಗುಲ್ಬರ್ಗಾ ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡ

ಬಿ) ಮೈಸೂರು ಕನ್ನಡ, ಬೆಂಗಳೂರು ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗಾ ಕನ್ನಡ

ಸಿ) ಗುಲ್ಬರ್ಗಾ ಕನ್ನಡ, ಬೆಂಗಳೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ

ಡಿ) ಗುಲ್ಬರ್ಗಾ ಕನ್ನಡ, ಬೆಂಗಳೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ

**21. ಸಾಮಾನ್ಯವಾಗಿ ಮಗು ಮಾತಿನ ಮೂಲಕ ವ್ಯಕ್ತಪಡಿಸುವ ಸಾಮರ್ಥ್ಯ ಹೊಂದುವುದು.**

ಎ) ಶಾಲೆಗೆ ಬಂದ ಮೇಲೆ ಬಿ) ಶಾಲೆಯಲ್ಲಿ ಸ್ನೇಹಿತನ ಜೊತೆ

ಸಿ) ಶಾಲೆಗೆ ಬರುವ ಮೊದಲೇ ಡಿ) ಶಾಲೆಯಲ್ಲಿ ಶಿಕ್ಷಕರೊಡನೆ

**22. ಪಾಠ ಯೋಜನೆಯು**

ಎ) ಕೋಷ್ಟಕ ರೂಪದಲ್ಲಿಯೇ ಇರಬೇಕು

ಬಿ) ಬಳಸುವವರಿಗೆ ಅರ್ಥವಾಗುವಂತಿರಬೇಕು

ಸಿ) ಮೇಲ್ವಿಚಾರಕರಿಗೆ ಅರ್ಥವಾಗುವಂತಿರಬೇಕು

ಡಿ) ಬಳಸುವವರಿಗೆ ಓದುವವರಿಗೆ ಸ್ಪಷ್ಟವಾಗಿ ಅರ್ಥವಾಗುವಂತಿದ್ದು, ನಮ್ಯವಾಗಿರಬೇಕು.

**23. ಒಳಗೊಳ್ಳುವ ತರಗತಿಯಲ್ಲಿ ಶಿಕ್ಷಕರ ಮಾತು.**

ಎ) ಯಾರನ್ನೂ ಪ್ರತ್ಯೇಕಿಸುವುದಿಲ್ಲ ಬಿ) ಯಾರನ್ನು ಒಳಗೊಳ್ಳುವುದಿಲ್ಲ.

ಸಿ) ಎಲ್ಲರನ್ನೂ ಸಾಮಾನ್ಯೀಕರಿಸುತ್ತದೆ ಡಿ) ಯಾರನ್ನು ಗುರುತಿಸುವುದಿಲ್ಲ.

**24. ಭಾಷೆಯನ್ನು ನೋಡಿ / ಕೇಳಿ ಕಲಿಯಲು ಸಾಧ್ಯವಿಲ್ಲ ಬಳಕೆಯ ಮೂಲಕ ಮಾತ್ರ ಭಾಷಾ ಗಳಿಕೆ ಸಾಧ್ಯ ಎಂದವರು.**

ಎ) ಬ್ರೂನರ್ ಬಿ) ಸ್ಕಿನ್ನರ್

ಸಿ) ವೈಗಾಟ್ಸ್ಕಿ ಡಿ) ಕ್ರೇಸನ್

**25. ಶಿಕ್ಷಕರು ತರಗತಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳಲು ಬಳಸುವ ನೈದಾನಿಕ ವಿಧಾನ.**

ಎ) ಸಂಶೋಧನೆ ಬಿ) ಕ್ರಿಯಾ ಸಂಶೋಧನೆ

ಬಿ) ಮೌಲ್ಯಮಾಪನ ಡಿ) ಸ್ವ ಮೌಲ್ಯಮಾಪನ

**26. ವರ್ತಮಾನಕಾಲ ಸೂಚಕ ಪ್ರತ್ಯಯವಿದು.**

ಎ. ವ ಬಿ.ದ

ಸಿ. ಉತ್ತ ಡಿ. ಇಂದ

**27. ಶುದ್ಧ ಭಾಷಾ ಪ್ರಯೋಗದಿಂದ ಕೂಡಿದ ಪದವಿದು**

ಎ. ಮೆರವಣಿಗೆ ಬಿ. ಮೆರೆವಣಿಗೆ

ಸಿ. ಮರೆವಣಿಗೆ ಡಿ. ಮೆರೆವೆಣಿಗೆ

**28. ಲೇಖಕರಾದ ಪು.ತಿ.ನ ರವರಿಗೆ 'ಪಂಪ ಪ್ರಶಸ್ತಿ' ತಂದುಕೊಟ್ಟ ಕೃತಿ.**

ಎ. ಶಬರಿ ಬಿ. ಅಹಲ್ಯೆ

ಸಿ. ಶಾರದಯಾಮಿನಿ ಡಿ. ಶ್ರೀಹರಿಚರಿತೆ

29 **'ಅಂಬೇರ ಜಯಪುರದ ಪೂರ್ವ ಕಾಲದ ರಾಜಧಾನಿ' ಈ ವಾಕ್ಯದಲ್ಲಿರುವ ಅನುಸ್ವಾರ ಸಹಿತ ಪದ.**

ಎ. ಜಯಪುರದ ಬಿ. ಅಂಬೇರ

ಸಿ. ಪೂರ್ವಕಾಲದ ಡಿ. ರಾಜಧಾನಿ

**30ಅಕ್ಷರ ಗಣದಲ್ಲಿ ಗುರು-ಲಘು ಮೂರಿರೆ.**

ಎ. ಮ-ನಗಣ ಬಿ. ಆ-ರಗಣ

ಸಿ. ಭ-ಯಗಣ ಡಿ. ಸ-ತಗಣ

**ಉತ್ತರಗಳು: ಮಾದರಿ ಪ್ರಶ್ನೆ ಪತ್ರಿಕೆ– 1**

| | | | | | |
|---|---|---|---|---|---|
| 1. | ಸಿ | 11. | ಸಿ | 21. | ಸಿ |
| 2. | ಸಿ | 12. | ಎ | 22. | ಎ |
| 3. | ಎ | 13. | ಬಿ | 23. | ಬಿ |
| 4. | ಎ | 14. | ಡಿ | 24. | ಎ |
| 5. | ಎ | 15. | ಸಿ | 25. | ಬಿ |
| 6. | ಸಿ | 16. | ಎ | 26. | ಡಿ |
| 7. | ಡಿ | 17. | ಡಿ | 27. | ಎ |
| 8. | ಬಿ | 18. | ಬಿ | 28. | ಸಿ |
| 9. | ಸಿ | 19. | ಬಿ | 29. | ಬಿ |
| 10. | ಸಿ | 20. | ಬಿ | 30. | ಬಿ |

**ಉತ್ತರಗಳು: ಮಾದರಿ ಪ್ರಶ್ನೆ ಪತ್ರಿಕೆ– 2**

| | | | | | |
|---|---|---|---|---|---|
| 1. | ಸಿ | 11. | ಡಿ | 21. | ಸಿ |
| 2. | ಡಿ | 12. | ಡಿ | 22. | ಡಿ |
| 3. | ಬಿ | 13. | ಸಿ | 23. | ಎ |
| 4. | ಬಿ | 14. | ಎ | 24. | ಎ |
| 5. | ಸಿ | 15. | ಡಿ | 25. | ಬಿ |
| 6. | ಡಿ | 16. | ಡಿ | 26. | ಸಿ |
| 7. | ಡಿ | 17. | ಎ | 27. | ಬಿ |
| 8. | ಬಿ | 18. | ಸಿ | 28. | ಡಿ |
| 9. | ಸಿ | 19. | ಎ | 29. | ಬಿ |
| 10. | ಸಿ | 20. | ಎ | 30. | ಎ |



## ಪರಾಮರ್ಶನ ಗ್ರಂಥಗಳು


- ಕ.ರಾ.ಪ.ಪು.ಸಂ ದ 1 ರಿಂದ 10 ನೇತರಗತಿಯ ಪ್ರಥಮ ಭಾಷೆ ಕನ್ನಡ ವಿಷಯದ ಪಠ್ಯಪುಸ್ತಕಗಳು https://www.ktbs.kar.nic.in/New/index.html#!/etb
- ಡಿಇಎಲ್.ಇಡಿ ಪ್ರಥಮ ಮತ್ತು ದ್ವಿತೀಯ ವರ್ಷದ ಸಂಪನ್ಮೂಲ ಸಾಹಿತ್ಯ – 'ಕಲಿಕೆಯನ್ನು ಅನುಕೂಲಿಸುವುದು–ಕನ್ನಡ '

TET




*'The destiny of a nation is being shaped in it's classrooms'*

***D S Kothari***